بِسْمِ اللّٰهِ الرَّحْمٰنِ الرَّحِيْمِ    نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ    وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 02

ಸಂಚಿಕೆ: 18

# ಕನ್ನಡ ಬದರ್ ವಾರ ಪತ್ರಿಕೆ
# WEEKLY BADAR QADIAN KANNADA

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

06 ಮೇ 2021, 06 ಹಜ್ರತ್ 1400 ತಬ್‌ಲೀಗ್ ಹಿಜರಿ ಶಮ್‌ಸಿ,
23 ರಮಝಾನ್ 1442 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

يٰٓاَيُّهَا الَّذِيْنَ اٰمَنُوْٓا اِذَا قُمْتُمْ اِلَى الصَّلٰوةِ
فَاغْسِلُوْا وُجُوْهَكُمْ وَاَيْدِيَكُمْ اِلَى
الْمَرَافِقِ وَامْسَحُوْا بِرُءُوْسِكُمْ
وَاَرْجُلَكُمْ اِلَى الْكَعْبَيْنِ (المائدة:7)

(ಅಲ್‌ಮಾಇದ: 07)

ಅಂದರೆ: ಎಲೈ ವಿಶ್ವಾಸಿಗಳೇ, ನೀವು ನಮಾಝಿಗೆ ಸಿದ್ಧರಾದರೆ, ನಿಮ್ಮ ಮುಖಗಳನ್ನು ಮತ್ತು ಮೊಣಕೈ ಗಂಟಿನವರೆಗೆ ಕೈಗಳನ್ನು ತೊಳೆಯಿರಿ; (ಒದ್ದೆಕೈಗಳಿಂದ) ನಿಮ್ಮ ತಲೆಗಳನ್ನು ಸವರಿರಿ; ಪಾದಗಂಟುಗಳ ತನಕ ಕಾಲುಗಳನ್ನೂ ತೊಳೆಯಿರಿ.

## ಪ್ರವಾದಿ ಮುಹಮ್ಮದ್[(ಸ)]ರವರ ಉಪದೇಶ

(1216) ಹಝ್ರತ್ ಅಬ್ದುಲ್ಲ ಬಿನ್ ಮಸ್‌ಊದ್(ರ) ವರದಿ ಮಾಡುತ್ತಾರೆ. ನಾವು ನಬಿ(ಸ) ರವರು ನಮಾಝ್ ನಿರ್ವಹಣೆಯಲ್ಲಿರುವಾಗ ಸಲಾಂ ಮಾಡುತ್ತಿದ್ದೆ ಆಗ ಅವರು ನನಗೆ ಉತ್ತರ ನೀಡುತ್ತಿದ್ದರು. ನಾವು ಹಬ್‌ಶಕ್ಕೆ ವಲಸೆ ಹೋಗಿ ಮರಳಿ ಬಂದಾಗ, ನಾನು ಅವರಿಗೆ ಸಲಾಂ ಮಾಡಿದೆ ಅವರು ಉತ್ತರ ನೀಡಲಿಲ್ಲ ಮತ್ತು ಅನಂತರ ಹೇಳಿದರು. ನಮಾಝಿನಲ್ಲಿಯೂ ಸಹ ಒಂದು ಲಕ್ಷ್ಯವಿರುತ್ತದೆ. (1217) ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲ ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ತನ್ನ ಯಾವುದೋ ಕಾರ್ಯ ನಿಮಿತ್ತ ನನ್ನನ್ನು ಕಳುಹಿಸಿದರು. ನಾನು ಹೋದೆ. ಮತ್ತೆ ನಾನು ಆ ಕಾರ್ಯ ಪೂರ್ಣಗೊಳಿಸಿ ಮರಳಿದೆ. ನಾನು ನಬಿ(ಸ) ರವರ ಬಳಿ ಬಂದೆ ಮತ್ತು ಅವರಿಗೆ ಸಲಾಂ ಮಾಡಿದೆ. ಅವರು ನನಗೆ ಉತ್ತರ ನಿಡಲಿಲ್ಲ. ನನ್ನ ಮನಸ್ಸಿನಲ್ಲಿ ಬಂದ ಭಾವನೆಯ ಅಲ್ಲಾಹನೆ ಚೆನ್ನಾಗಿ ಬಲ್ಲವನಾಗಿರುತ್ತಾನೆ. ತಾನು ತನ್ನ ಮನಸ್ಸಿನಲ್ಲಿ ಅಂದುಕೊಂಡೆ. ಬಹುಶ: ರಸೂಲುಲ್ಲಾಹ್(ಸ) ನಾನು ತಡವಾಗಿ ಬಂದ ಕಾರಣ ಅಸಂತುಷ್ಟರಾಗಿರಬಹುದು. ಮತ್ತೆ ನಾನು ಅವರಿಗೆ ಸಲಾಂ ಮಾಡಿದೆ. ಆದರೂ ನನಗೆ ಉತ್ತರ ನೀಡಲಿಲ್ಲ. ಆಗ ನನ್ನ ಮನಸ್ಸಿಗೆ ಮೊದಲಿಗಿಂತ ಹೆಚ್ಚು ನೋವಾಯಿತು. ಮತ್ತೆ ನಾನು ಅವರಿಗೆ ಸಲಾಂ ಮಾಡಿದೆ ಆಗ ಅವರು ನನಗೆ ಉತ್ತರ ನೀಡಿದರು. ನಾನು ನಮಾಝ್ ನಿರ್ವಹಿಸುತ್ತಿದ್ದೆ. ನೊತರ ನಬಿ (ಸ) ಹೇಳಿದರು ಅವನೇ ನನ್ನನ್ನು ಉತ್ತರ ನೀಡುವುದರಿಂದ ತಡೆದಿದ್ದಾನೆ.

**(ವಿಶ್ಲೇಷಣೆ)** ಹಝ್ರತ್ ಸಯ್ಯದ್ ಜೈನುಲ್ ಆಬಿದೀನ್ ವಲಿಯುಲ್ಲಾಹ್ ಶಾಹ್ ಸಾಹಿಬ್ (ರಹ) ಹೇಳುತ್ತಾರೆ. ಕೆಲ ಪಂಡಿತರ ನಿಲುವು ಏನೆಂದರೆ ಸಲಾಮಿನ ಉತ್ತರವನ್ನು ಪ್ರಾರ್ಥನಾರೂಪದಲ್ಲಿ ಬಾಯಿಯಿಂದ ಪದಗಳ ಊಲಕ ವಲೈಕುಂ ಅಸ್ಸಲಾಮ್ ಎಂದು ಉಚ್ಚರಿಸದೆ ತನ್ನ ಮನಸ್ಸಿನಲ್ಲಿಯೇ ನೀಡಬಹುದಾಗಿದೆ. ಈ ಅಭಿಪ್ರಾಯವನ್ನು ಇಮಾಮ್ ಬುಖಾರಿ ಸಾರಾಸಗಟಾಗಿ ತಳ್ಳಿ ಹಾಕಿದ್ದಾರೆ. ವರದಿ ಸಂಖ್ಯೆ: 1216, 1217 ರಲ್ಲಿ ಸ್ಪಷ್ಟವಾಗಿದೆ. ಹಝ್ರತ್ ರಸೂಲುಲ್ಲಾಹ್(ಸ) ನಮಾಝಿನಿಂದ ಹೊರ ಬಂದಾಗ ಉತ್ತರ ನೀಡಿದರು. ಇದುವೇ ಸರ್ವೇಸಾಮಾನ್ಯ ನಿಲುವು ಆಗಿದೆ.

**(ಸಹೀಹ್ ಬುಖಾರಿ, ಸಂಪುಟ–2, ಮುದ್ರಣ ಖಾದಿಯಾನ್ 2006)**

**ಜನರ ಮನಗಳಲ್ಲಿ ಅಪಾಯಕರ ವಿಶ್ವಾಸಗಳು ಮತ್ತು ತಪ್ಪು ಭಾವನೆಗಳು ತುಂಬಿಕೊಂಡಿವೆ. ಅದನ್ನು ಹೋಗಲಾಡಿಸಲು ಮತ್ತು ಅದರ ಜಾಗದಲ್ಲಿ ಶಾಂತಿಪೂರ್ಣ ವಿಶ್ವಾಸಗಳನ್ನು ಸ್ಥಾಪಿಸಲು ತಮ್ಮ ಸಂಘಟನೆಯು ಇದೆ.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಲೋಕ ಹಾಗೂ ಲೌಕಿಕ ಸಂಬಂಧಗಳಿಂದ ನಾವು ಪ್ರತ್ಯೇಕವಾಗಿರುವೆವು. ಅಂದ ಹಾಗೆ ನಾವು ಲೌಕಿಕ ದೃಷ್ಟಿಯಲ್ಲಿ ಶವಗಳಿದ್ದಂತೆ, ನಾವು ಧರ್ಮಕ್ಕೆ ಮಾತ್ರ ಇದ್ದೆವು. ನಮ್ಮ ಎಲ್ಲ ಕಾರಸ್ಥಾನವು ಧರ್ಮವೇ ಆಗಿದೆ. ಇಸ್ಲಾಮ್ ಧರ್ಮದ ಸಜ್ಜನರ ಹಾಗೂ ಇಮಾಮರ ಕೆಲಸ ಸದಾ ಇದೇ ಆಗಿರುತ್ತದೆ. ನಮ್ಮಲ್ಲಿ ಹೊಸದಾದ ವಿಧಾನ ಏನು ಇಲ್ಲ. ಜನರಲ್ಲಿ ಬೇರೂರಿರುವ ಎಲ್ಲ ರೀತಿಯ ಅಪಾಯಕರ ವಿಶ್ವಾಸಗಳನ್ನು ದೂರ ಮಾಡುವುದು. ಅವರ ಮನಸ್ಸುಗಳಿಂದ ತೆಗೆದು ಹಾಕುವುದೇ ನಮ್ಮ ನಿಜವಾದ ಗುರಿಯಾಗಿದೆ. ಉದಾಹರಣೆಗೆ ಕೆಲ ಮೂಢರು ಇತರ ಸಮುದಾಯಗಳ ವಸ್ತುಗಳನ್ನು ಕದಿಯಬಹುದು ಎಂಬ ನಂಬಿಕೆ ಇಟ್ಟುಕೊಂಡಿದ್ದಾರೆ. ಅದೇ ರೀತಿ ಅವಿಶ್ವಾಸಿಗಳ ಸಂಪತ್ತು ನಮಗೆ ಹಲಾಲ್ ಆಗಿದೆ. ಅಲ್ಲದೇ ತಮ್ಮ ಇಂದ್ರಿಯಾಚ್ಛೆಗಳಿಗೋಸ್ಕರ ತಕ್ಕಂತೆ ಹದೀಸುಗಳನ್ನು ಸಹ ಸೃಷ್ಟಿಸಿಕೊಂಡಿದ್ದಾರೆ. ಇದು ಅವರ ಒಂದು ವಿಶ್ವಾಸವಾಗಿದೆ. ಹಝ್ರತ್ ಈಸಾ(ಅ) ಲೋಕಕ್ಕೆ ಪುನರಾಗಮನ ಮಾಡುವರು. ಅವರ ಕೆಲಸ ಯುದ್ಧಾಸ್ತ್ರಗಳು ಬಳಸಿ ರಕ್ತಪಾತ ಮಾಡುವುದಾಗಿದೆ. ಅಂದ ಹಾಗೆ ಯಾವ ಧರ್ಮವು ಬಲವಂತವನ್ನು ಒಪ್ಪುವುದಿಲ್ಲ. ಒಟ್ಟಿನಲ್ಲಿ ಇಂತಹುದೇ ಅಪಾಯಕರ ವಿಶ್ವಾಸಗಳು ಮತ್ತು ತಪ್ಪು ಭಾವನೆಗಳು ಜನರಲ್ಲಿ ಬೇರೂರಿವೆ. ಅದನ್ನು ಹೋಗಲಾಡಿಸಲು ಮತ್ತು ಅದರ ಜಾಗದಲ್ಲಿ ಶಾಂತಿಪೂರ್ಣ ವಿಶ್ವಾಸಗಳನ್ನು ಸ್ಥಾಪಿಸಲು ನಮ್ಮ ಸಂಘಟನೆಯು ಇದೆ. ಇದು ಅಂದಿನಿಂದ ಧರ್ಮಸುಧಾರಕರಿಂದ, ಸಂತರಿಂದ ನಡೆದು ಬಂದ ಸ್ಥಿತಿಯಾಗಿದೆ. ಲೋಕದ ಜನರು ಅವರನ್ನು ವಿರೋಧಿಸುತ್ತಾರೆ. ಹಾಗೆಯೇ ನಮ್ಮ ಜೊತೆಯಲ್ಲಿ ಮಾಡುತ್ತಿದ್ದಾರೆ. ವಿರೋಧಿಗಳು ತಪ್ಪು ಸುದ್ದಿಗಳನ್ನು, ಸುಳ್ಳು ಅಪಪ್ರಚಾರಗಳನ್ನು ನಮ್ಮ ವಿರುದ್ಧ ತೇಲಿಬಿಡುತ್ತಾರೆ. ಎಲ್ಲಿಯವರೆಗೆ ಎಂದರೆ ನಮ್ಮನ್ನು ಸಂಕಷ್ಟಕ್ಕೆ ಸಿಲುಕಿಸಲು ಸರಕಾರದವರೆಗೂ ಇವರು ಅತಿಕರ್ಮಿಯಾಗಿದ್ದರೆ ಎಂಬ ತಪ್ಪು ವರದಿಗಳನ್ನು ಮುಟ್ಟಿಸುತ್ತಾರೆ. ಅವಶ್ಯವಾಗಿ ಅವರ ಇದೇ ನಡವಳಿಕೆ ಆಗಬೇಕಿತ್ತು. ಏಕೆಂದರೆ ತನ್ನ ಒಳಿತನ್ನು ಬಯಸುವವರ, ಪ್ರವಾದಿಗಳ ಮತ್ತು ಸಂತರ ವಿರುದ್ಧ ಎಲ್ಲ ಕಾಲದಲ್ಲು ಅವರ ವರ್ತನೆ ಹೀಗೆಯೇ ಆಗಿತ್ತು. ಆದರೆ ಅಲ್ಲಾಹನು ಮನುಷ್ಯನಲ್ಲಿ ವಿವೇಕ ಇಟ್ಟಿರುತ್ತಾನೆ. ಆ ಮೂಲಕ ಸರಕಾರದ ಕಾರ್ಯಕರ್ತರು ಆ ಜನರ ಬಗ್ಗೆ ಸತ್ಯ ತಿಳಿದುಕೊಂಡಿರುತ್ತಾರೆ.

**(ಮಲ್ಫೂಝಾತ್ ಸಂಪುಟ–1, ಪುಟ–283, ಮುದ್ರಣ ಖಾದಿಯಾನ್ 2018)**

**ಮಾನರಕ್ಷಣೆಯು ಒಂದು ಅತ್ಯುನ್ನತ ಕಾರ್ಯವಾಗಿದೆ. ಆದರೆ ಅದು ಧಾರ್ಮಿಕ ಪ್ರಚಾರ ಕಾರ್ಯಗಳಲ್ಲಾಗಲಿ ಅಥವಾ ದೇಶ ಕಾರ್ಯಗಳಿಗಾಗಲಿ ಅಥವಾ ಧರ್ಮಸಂಹಿತೆ (ಶರೀಅತ್) ಅಥವಾ ಧರ್ಮಕ್ಕಾಗಿ ಅಡ್ಡಿ ಬರುವಂತಾಗಿರಬಾರದು. ತನ್ನ ಮೇಲಿನ ಆರೋಪಗಳನ್ನು ನಿರ್ಲಕ್ಷಿಸಿ ತನ್ನ ಮಾನವನ್ನು ಲೆಕ್ಕಿಸದೇ ಸತ್ಕಾರ್ಯ ಮಾಡುವುದಾದರೆ ಅದು ಮಹೋನ್ನತ ಕಾರ್ಯವಾಗಿದೆ.**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಯೂಸುಫ್(ಅ) ರವರನ್ನು ರಾಜರು ಕರೆದಾಗ ಅವರ ಬಳಿ ಎರಡು ಮಾರ್ಗಗಳಿದ್ದವು. ಒಂದು ತಕ್ಷಣ ಅಲ್ಲಿಂದ ಹೊರಟು ಬರಬಹುದಾಗಿತ್ತು ಅಥವಾ ತನ್ನನ್ನು ನಿರ್ದೋಷಿ ಎಂದು ಸಾಬೀತುಪಡಿಸಿ ಬರಬಹುದಾಗಿತ್ತು. ಈ ಎರಡೂ ಕಾರ್ಯ ನೋಡಲಿಕ್ಕೆ ತದ್ವಿರುದ್ಧವಾಗಿ ಕಾಣುತ್ತವೆ. ಆದರೆ ಎರಡೂ ಪ್ರತ್ಯೇಕ ದೃಷ್ಟಿಯಿಂದ ನೋಡಿದರೆ, ಒಂದೋ ಈ ಎರಡೂ ಕಾರ್ಯ ಸತ್ಕಾರ್ಯಗಳಾಗಬೇಕು ಅಥವಾ ಎರಡೂ ಪಾಪ ಕಾರ್ಯಗಳಾಗಬೇಕು. ಅದು ಹೇಗೆಂದರೆ ಹಝ್ರತ್ ಯೂಸುಫ್(ಅ) ತನ್ನ ಅಹಂಕಾರಕ್ಕಾಗಿ ಮತ್ತು ಸ್ವಹಿತಕ್ಕಾಗಿ ಹೀಗೆ ಮಾಡಿರಬೇಕು. ಮೊದಲು ಪಾಪವನ್ನು ಒಪ್ಪಿಕೊಂಡು ಹೊರಡುವುದಾರೆ ಅದು ಪಾಪವಾಗುತ್ತಿತ್ತು. ಅದೇ ರೀತಿ ಬರೀ ತನ್ನ ಸುಖಕ್ಕಾಗಿ ಯಾವುದೇ ರೀತಿಯ ಧರ್ಮ ಕಲ್ಯಾಣವನ್ನು ಬಯಸದೇ ತಕ್ಷಣ ಅಲ್ಲಿಂದ ಹೊರಟು ಬರುತ್ತಿದ್ದರೂ ಅದು ಸಹ ಪಾಪ ಕಾರ್ಯವೇ ಆಗುತಿತ್ತು. ಆದರೆ ಅವರು ಅಲ್ಲಿಂದ ಹಿಂದಿರುಗಲು ನಿರಾಕರಿಸಿದರು. ಅದು ಅವರು ಅಹಂಕಾರಿಗಳಾಗಿದ್ದರು ಎಂದಲ್ಲ. ಬದಲು ಸ್ವಯಂ ಅವರೇ ಹೇಳಿದಂತೆ ಕೇವಲ ಅವರೊಬ್ಬ

*(ಪುಟ ಸಂಖೆ 09 ರಲ್ಲಿ ಮುಂದುವರಿಸಲಾಗಿದೆ)*

لَآ اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرٌّ مَا فِی الْعَالَمِ ۞ شَرَّ السُّمُوْمِ عَدَاوَةُ الصُّلَحَاءِ

**ಚಂದ್ರನನ್ನು ಮೂರು ದಿನಗಳವರೆಗೆ "ಹಿಲಾಲ್" ಎಂದು ಕರೆಯುತ್ತಾರೆ ಖಮರ್ ಎಂದಲ್ಲ. ಅದರ ವಿರುದ್ಧವಾಗಿ ಯಾರಾದರೂ ಸಾಬೀತುಪಡಿಸುವುದಾದರೆ ಅವರಿಗೆ ಒಂದು ಸಾವಿರ ರೂಪಾಯಿಗಳ ಬಹುಮಾನ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ಬಹುಮಾನದ ಪಂಥಹ್ವಾನ ನಾವು ಅವರ ಗ್ರಂಥವಾದ ನುರುಲ್ ಹಖ್ ಭಾಗ, ರೂಹಾನಿ ಖಝಾಯನ್ ಸಂಪುಟ 8 ರಿಂದ ಪ್ರಸ್ತುತಪಡಿಸುತ್ತಿದ್ದೇವೆ. ರೂಹಾನಿ ಖಝಾಯನ್ ಸಂಪುಟ 8 ಗ್ರಂಥ ನೂರುಲ್ ಹಖ್, ಭಾಗ ಒಂದು, ಎರಡು ಇತ್ಮಾಮುಲ್ ಹುಜ್ಜ: ಮತ್ತು ಸಿರ್ರುಲ್ ಖಿಲಾಫ್ ಒಳಗೊಂಡಿದೆ. ಗ್ರಂಥ ನೂರುಲ್ ಹಖ್ ಭಾಗ ಒಂದು ಹುಝೂರ್(ಅ) ಪಾದರಿ ಇಮಾಮುದ್ದೀನನ ಗ್ರಂಥ "ತೋಝಿನುಲ್ ಅಖ್ವಾಲ್" ನ ಉತ್ತರದಲ್ಲಿ ಅತ್ಯಂತ ಸಾಹಿತ್ಯಕ ಅರಬಿ ಭಾಷೆಯಲ್ಲಿ ಬರೆದಿದ್ದಾರೆ. ಆಗ "ತೋಝೀರುಲ್ ಅಖ್ವಾಲ್" ನಲ್ಲಿ ಪಾದರಿ ಇಮಾಮುದ್ದೀನ್ ಹಝ್ರತ್ ರಸೂಲುಲಾಹ್(ಸ) ರವರ ಪರಿಶುದ್ಧ ವ್ಯಕ್ತಿತ್ವದ ಮೇಲೆ ಅಪವಿತ್ರ ಆಕ್ರಮಣ ಮಾಡಿದ್ದನು. ಪವಿತ್ರ ಖುರ್‌ಆನ್‌ನ ಸಾಹಿತ್ಯ ಅದರ ಚಾತುರ್ಯದ ಮೇಲೆ ಆಕ್ಷೇಪ ಮಾಡಿದ್ದನು. ಹಝ್ರತ್ ಮಸೀಹ್ ಮೌಊದ್(ಅ) ರವರ ಮೇಲೆ ಅತ್ಯಂತ ಕೀಳುಮಟ್ಟದ ಮತ್ತು ಆಧರರಹಿತ ಆರೋಪಗಳನ್ನು ಹಚ್ಚಿದನು. ಆ ಗ್ರಂಥದ ಕೊನೆಯ ಭಾಗದಲ್ಲಿ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅತ್ಯಂತ ಕಳಕಳಿಯಿಂದ ಅಲ್ಲಾಹನ ಆಸ್ಥಾನದಲ್ಲಿ ಈ ದುಆ ಮಾಡಿದರು.

يَارَبِّ يَا رَبِّ الضُّعَفَاءِ وَالْمُضْطَرِّيْنَ اَلَسْتُ مِنْكَ؛ فَقُلْ وَ اِنَّكَ خَيْرُ الْقَائِلِيْنَ۔ كَثُرَ اللَّعْنُ وَالتَّكْفِيْرُ، وَنُسِبْتُ اِلَى التَّزْوِيْرِ، وَسَمِعْتَ كُلَّهُ وَرَاَيْتَ يَا قَدِيْرُ، فَافْتَحْ بَيْنَنَا بِالْحَقِّ وَاَنْتَ خَيْرُ الْفَاتِحِيْنَ۔ وَنَجِّنِيْ مِنْ عُلَمَآءِ السُّوْءِ وَاَقْوَالِهِمْ، وَ كِبْرِهِمْ وَدَلَالِهِمْ، وَنَجِّنِيْ مِنْ قَوْمٍ ظَالِمِيْنَ۔ وَاَنْزِلْ نَصْرًا مِنَ السَّمَآءِ وَاَدْرِكْ عَبْدَكَ عِنْدَ الْبَلَاءِ ...... رَبِّ نَجِّنِيْ مِمَّا يَقْصُدُوْنَ، وَاحْفَظْنِيْ مِمَّا يُرِيْدُوْنَ وَاَدْخِلْنِيْ فِي الْمَنْصُوْرِيْنَ...... رَبِّ فَارْحَمْ وَتَقَبَّلْ مِنَّا دُعَاءَنَا، وَاِلَيْكَ الشَّكْوٰى وَالْتِجَاءُ۔

ಅನುವಾದ: ಓ ನನ್ನ ಪ್ರಭುವೇ, ಓ ದುರ್ಬಲರ ಮತ್ತು ಅಸಹಾಯಕರ ಪ್ರಭು, ನಾನು ನಿನ್ನವನಲ್ಲವೆ? ನೀನೇ (ಆ ಜನರಿಗೆ) ತೋರಿಸು. ನೀನೇ ಅತ್ಯುತ್ತಮ ರೀತಿಯಲ್ಲಿ ಬಲ್ಲವನಾಗಿದ್ದಿ. ಬಹಳಷ್ಟು ಜನರು ಅವಿಶ್ವಾಸಿ ಹಾಗೂ ಮಿಥ್ಯವಾದಿ ಎಂದು ಕರೆದಿದ್ದಾರೆ. ನೀನು ಎಲ್ಲವು ಆಲಿಸಿರುತ್ತಿ ಮತ್ತು ನೋಡುವವನಾಗಿದ್ದಿ. ಓ ಸರ್ವಶಕ್ತನೇ, ನೀನೇ ನಮ್ಮ ನಡುವೆ ತೀರ್ಪು ಪ್ರಕಟಿಸು. ನೀನೇ ಅತ್ಯಂತ ಉತ್ತಮ ತೀರ್ಪುಗಾರನು. ನನಗೆ ದುಷ್ಟ ಉಲಮಾಅಗಳಿಂದ ಮತ್ತು ಅವರ ಆಕ್ಷೇಪಾರ್ಹ ಮಾತುಗಳಿಂದ ಹಾಗೂ ಅವರ ಗರ್ವದಿಂದ ಮುಕ್ತಿ ನೀಡು. ನನಗೆ ಅದರ್ಮಿಗಳಿಂದ ರಕ್ಷಿಸು. ಆಕಾಶದಿಂದ ನನಗೆ ಸಹಾಯ ನೀಡು. ಮತ್ತು ಆಪತ್ತಿನ ಈ ಸಮಯದಲ್ಲಿ ನನಗೆ ಅಭಯ ನೀಡು. ಓ ನನ್ನ ಪ್ರಭುವೇ. ನನಗೆ ಅವರ ದುಷ್ಟ ಯೋಜನೆಗಳಿಂದ ಮುಕ್ತಿ ನೀಡು. ನನ್ನನ್ನು ರಕ್ಷಿಸು. ಅವರ ಕುತಂತ್ರಗಳಿಂದ ನನ್ನನ್ನು ಪಾರು ಮಾಡಿ ವಿಜಯಿಯನ್ನಾಗಿ ಮಾಡು. ಓ ನನ್ನ ಪ್ರಭು ಕರುಣೆತೋರು ಮತ್ತು ನನ್ನ ಪ್ರಾರ್ಥನೆಗಳನ್ನು ಆಲಿಸಿ ಸ್ವೀಕರಿಸು.

ನೂರುಲ್ ಹಖ್ ಭಾಗ–1, ಫೆಬ್ರವರಿ 1894 ರಲ್ಲಿ ಮುದ್ರಣಗೊಂಡಿತು. ಈ ಪ್ರಾರ್ಥನೆ ಅರ್ಪಿಸಿ ಒಂದು ತಿಂಗಳಷ್ಟೇ ಆಗಿರಬೇಕು. ಅಲ್ಲಾಹನು ಅದನ್ನು ಸ್ವೀಕಾರದ ಭಾಗ್ಯ ನೀಡಿದನು. ಚಂದ್ರ ಮತ್ತು ಸೂರ್ಯ ಗ್ರಹಣಗಳ ದೃಷ್ಟಾಂತಗಳನ್ನು ನನ್ನ ಸಾಕ್ಷಿಯ ಸಹಾಯಾರ್ಥವಾಗಿ ಪ್ರಕಟಪಡಿಸಿದನು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಸತ್ಯಸಾಕ್ಷ್ಯದ ದೃಷ್ಟಾಂತದ ನೆಲೆಯಲ್ಲಿ ಎರಡೂ ಲೋಕಗಳ ಸರದಾರರಾದ ಹಝ್ರತ್ ಅಖ್‌ದಸ್ ಮುಹಮ್ಮದ್ ಮುಸ್ತಫ (ಸ) ರವರು ಸೂರ್ಯ ಚಂದ್ರ ಗ್ರಹಣಗಳ ಬಗ್ಗೆ ಭವಿಷ್ಯವಾಣಿಯನ್ನು ಮಾಡಿದ್ದರು. ಅದು ಸರಿಯಾದ ಸಮಯದಲ್ಲಿ ಎಲ್ಲ ರೀತಿಯಿಂದಲೂ ಪೂರ್ಣ ವೈಭವದಿಂದ ಪೂರ್ಣಗೊಂಡಿತು. ಅವರು ಭವಿಷ್ಯ ನುಡಿದಿದ್ದರು.

ಅನುವಾದ: ಅಂದರೆ ನಮ್ಮ ಮಹದಿಗೆ ಎರಡು ದೃಷ್ಟಾಂತಗಳಿವೆ. ಈ ಎರಡು ದೃಷ್ಟಾಂತವು ಭೂಮ್ಯಾಖಾಶ ಸೃಷ್ಟಿಯಾದಾಗಿನಿಂದಲು (ಯಾವ ಸುಧಾರಕನ ಸತ್ಯಸಾಕ್ಷ್ಯಕ್ಕಾಗಿಯೂ) ಪ್ರಕಟವಾಗಿರಲಿಲ್ಲ. (ಆ ಎರಡು ದೃಷ್ಟಾಂತಗಳು ಇದಾಗಿವೆ. ಖಮರ್ (ಚಂದ್ರ) ನನ್ನು ರಂಝಾನಿನಲ್ಲಿ (ಅದಕ್ಕೆ ಗ್ರಹಣ ಹಿಡಿಯುವ ರಾತ್ರಿಗಳಲ್ಲಿ (ಪ್ರಥಮ ರಾತ್ರಿಗೆ ಗ್ರಹಣ ಹಿಡಿಯುವುದು. ಮತ್ತು ಸೂರ್ಯನಿಗೆ (ಅದಕ್ಕೆ ಗ್ರಹಣ ಹಿಡಿಯುವ ದಿನಾಂಕಗಳಲ್ಲಿ) ಮಧ್ಯ ದಿನದಂದು ಗ್ರಹಣ ಹಿಡಿಯುವುದು ಅಲ್ಲಾಹನು ಭೂಮ್ಯಾಕಾಶ ಸೃಷ್ಟಿ ಮಾಡಿ ದಾಗದಿಂದಲೂ ಈ ಎರಡು ದೃಷ್ಟಾಂತಗಳು ಎಂದೂ (ಯಾವುದೇ ದಾವೆದರನ ಸತ್ಯ ಸಾಕ್ಷ್ಯಕ್ಕಾಗಿ) ಪ್ರಕಟವಾಗಿರಲಿಲ್ಲ.

ಮೇಲ್ಕಾಣಿಸಿದ ದುಆದ ನಂತರ ಅತಿ ಶೀಘ್ರದಲ್ಲಿ ಅಲ್ಲಾಹನು ಆಕಾಶದಲ್ಲಿ ಪ್ರಕಟಿಸಿದನು. 21 ಮಾರ್ಚ್ 1894 ರ ಬುಧವಾರ ದಿನದಂದು ಚಂದ್ರಗ್ರಹಣ ಉಂಟಾಯಿತು. ಇದು ರಂಝಾನಿನ 13ನೇ ತಾರೀಖು ಆಗಿತ್ತು ಮತ್ತು 6 ಏಪ್ರಿಲ್ 1894 ರಲ್ಲಿ ಜುಮುಅ ದಿನದಂದು ಸೂರ್ಯಗ್ರಹಣ ಉಂಟಾಯಿತು. ಇದು ರಂಝಾನಿನ 28ನೇ ತಾರೀಖು ಆಗಿತ್ತು. ದೇವ ನಿಯಮದ ಪ್ರಕಾರ ಚಂದ್ರ ಮತ್ತು ಸೂರ್ಯಗ್ರಹಣವನ್ನು ಏಕಕಾಲಕ್ಕೆ ಇಡೀ ಲೋಕವು ಕಾಣಲು ಸಾಧ್ಯವಿರಲಿಲ್ಲ. ಈ ಪ್ರಕಟವಾದ ದೃಷ್ಟಾಂತವು ಪೂರ್ವಿಕ ದೇಶಗಳ ಜನರು ಮಾತ್ರ ಕಂಡರು. ಪಶ್ಚಿಮ ದೇಶಗಳ ಜನರ ಹಕ್ಕೂ ಆಗಿತ್ತು. ಅವರೂ ಸಹ ಇಮಾಮ್ ಮಹದಿಗಿರುವ ಸತ್ಯಸಾಕ್ಷ್ಯದ ಈ ದೃಷ್ಟಾಂತ ಕಾಣಬೇಕು. ಅಂದ ಹಾಗೆ ಮುಂದಿನ ವರ್ಷವೇ ಅಂದರೆ 1895 ರಲ್ಲಿ ಯೂರೋಪ್ ಮತ್ತು ಅಮೇರಿಕಾದಲ್ಲಿ ಅಲ್ಲಾಹನು ಈ ದೃಷ್ಟಾಂತ ಭವಿಷ್ಯವಾಣಿಯ ಪ್ರಕಾಶವನ್ನು ಮತ್ತೊಮ್ಮೆ ಪ್ರಕಟಪಡಿಸಿದನು. ಅಂದ ಹಾಗೆ 11 ಮಾರ್ಚ್ 1895 ರಂದು ಚಂದ್ರಗ್ರಹಣ ಉಂಟಾಯಿತು. ಅದು ರಂಝಾನಿನ 13ನೇ ತಾರೀಖು ಆಗಿತ್ತು. 26 ಮಾರ್ಚ್ 1895 ರಂದು ಸೂರ್ಯಗ್ರಹಣ ಉಂಟಾಯಿತು. ಅದು ರಂಝಾನಿನ 28ನೇ ತಾರೀಖು ಆಗಿತ್ತು. ಸಂತೋಷ ಮತ್ತು ಆಶ್ಚರ್ಯಕರ ಮಾತೇನೆಂದರೆ ಖಾದಿಯಾನಿನಲ್ಲಿಯೂ 11 ಮಾರ್ಚ್ 1895 ರಂಝಾನಿನ 13 ತಾರೀಖು ಆಗಿತ್ತು. ಮತ್ತು 26 ಮಾರ್ಚ್ 1895 ರಂಝಾನಿನ 28 ತಾರೀಖು ಆಗಿತ್ತು.

21 ಮಾರ್ಚ್ 1894, 13 ರಂಝಾನ್ 1311 ಹಿಜರಿ ಚಂದ್ರಮಾನ, ಚಂದ್ರಗ್ರಹಣ ನೋಡಿದ ನಂತರ ಅಹ್ಮದಿಯರು ತುಂಬ ಸಂತುಷ್ಟರಾದರು. ಖಾದಿಯಾನಿನಲ್ಲಿಯೂ ಸಂತಸ ಮತ್ತು ಹಬ್ಬದ ವಾತಾವರಣ ಆಗಿ ಪರಿಣಮಿಸಿತ್ತು. ಇದೀಗ ತುಂಬ ಕುತೂಹಲದಿಂದ 28 ರಂಝಾನಿಗೆ ಸೂರ್ಯಗ್ರಹಣ ಕಾಣುವ ತವಕವಿತ್ತು. ಅಹ್ಮದಿಯರು ದೂರ ದೂರದಿಂದ ಖಾದಿಯಾನಿಗೆ ಆಗಮಿಸುತ್ತಿದ್ದರು. ಏಕೆಂದರೆ ಸೂರ್ಯಗ್ರಹಣದ ಈ ದೃಷ್ಟಾಂತವು ತನ್ನ ಮಹೋನ್ನತ ಆಧ್ಯಾತ್ಮಿಕ ಗುರುಗಳಾದ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಸಹಯೋಗದಲ್ಲಿ ನೋಡಿ ಆಧ್ಯಾತ್ಮಿಕ ಸಂತೋಷ ಪಡೆಯ ಬಯಸುತ್ತಿದ್ದರು. ಅಂದ ಹಾಗೆ ಆ ಅದೃಷ್ಟಶಾಲಿ ಸಹೋದರ ಮಿರ್ಝಾ ಅಯ್ಯೂಬ್ ಬೇಗ್ ಸಾಹಿಬ್ (ಅಧ್ಯಾಪಕರು ವಿಜ್ಞಾನ ವಚಿಸನ್ ಕಾಲೇಜು ಲಾಹೋರ್) ಮಿರ್ಝಾ ಯಾಕೂಬ್ ಬೇಗ್ ಸಾಹಿಬ್ (ಮೆಡಿಕಲ್ ಕಾಲೇಜು ಲಾಹೋರ್‌ನ ವಿದ್ಯಾರ್ಥಿ) ಅದೇ ನಿಲುವು ತಾಳಿ ಖಾದಿಯಾನನಿಗೆ ಆಗಮಿಸಿದರು. ಆ ಸೂರ್ಯಗ್ರಹಣ ತಮ್ಮ ಒಡೆಯರಾದ, ಗುರುಗಳಾದ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಜೊತೆಗೂಡಿ ಕಾಣಬೇಕು ಎಂದು. ಈ ಇಬ್ಬರು ಸಹೋದರರು 1892 ರಲ್ಲಿ ಅಹ್ಮದಿಅತ್ ಸ್ವೀಕರಿಸಿದರು. ಇವರಿಬ್ಬರ ಜೊತೆಯಲ್ಲಿ ಇನ್ನೋರ್ವ ಮಿತ್ರರಾದ ಮೌಲ್ವಿ ಅಬ್ದುಲ್ ಅಲಿ ಸಾಹಿಬ್ ಆಫ್ ಕಲಾನೂರ್ ಅವರೂ ಇದ್ದರು. ಇವರು ಮೂವರು ಸಹ 5 ಏಪ್ರಿಲ್ ಗುರುವಾರ ದಿನದಂದು ಅಂದರೆ 27 ರಂಝಾನ್‌ರಂದು ಮಧ್ಯಾಹ್ನದ ನಂತರ ಲಾಹೋರಿನಿಂದ ಹೊರಟರು. ಮತ್ತು ರಾತ್ರಿ 11 ಗಂಟೆಗೆ ಬಟಾಲ ತಲುಪಿದರು. ಸಯ್ಯದ್‌ನಾ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ತನ್ನ ಖುತುಬ ಜುಮುಅ 20 ಮಾರ್ಚ್ 1915 ರಲ್ಲಿ ಈ ಘಟನೆಯ ವಿವರ ನೀಡುತ್ತ ಹೇಳುತ್ತಾರೆ.

ಸುಮಾರು 11 ಗಂಟೆಗೆ ಬಟೌಲ ತಲುಪಿದೆವು ಮರುದಿನ ಮುಂಜಾನೆಯೇ ಗ್ರಹಣ ಹಿಡಿಯಲಿಕ್ಕಿತ್ತು. (ಆ ಯುವರಲ್ಲಿಯು ಎಷ್ಟು ಉತ್ಸಾಹವಿದೆ ನೋಡಿ) ಬಿರುಗಾಳಿ ಬೀಸುತ್ತಿತ್ತು. ಮೋಡಗಳು ಗರ್ಜಿಸುತ್ತಿದ್ದವು. ಮತ್ತು ಸಿಡಿಲು ಮಿಂಚುತಿತ್ತು. ಗಾಳಿಗೆ ಎದುರಾಗಿ ಅವರ ಮುಖವಿತ್ತು. ಕಣ್ಣುಗಳಲ್ಲಿ ಮಣ್ಣು ಬೀಳುತಿತ್ತು. (ಬಟಾಲದಿಂದ ಖಾದಿಯಾನಿಗೆ ಕಾಲ್ನಡಿಗೆಯಲ್ಲೇ ಹೊರಟಿದ್ದರು). ಹೆಜ್ಜೆ ಮುಂದ್ಹಾಕಲು ಆಗುತ್ತಿರಲಿಲ್ಲ. ಹಾದಿಯಂತೂ ಸಿಡಿಲು ಮಿಂಚಿದಾಗ ಮಾತ್ರ ಕಾಣುತಿತ್ತು. ಎಲ್ಲರೂ ನಿಶ್ಚಯ ಮಾಡಿಕೊಂಡು ಏನೇ ಆಗಲಿ ರಾತ್ರೋರಾತ್ರಿಯೇ ಖಾದಿಯಾನ್ ತಲುಪಬೇಕು. ಅಂದ ಹಾಗೆ ಮೂವರು ರಸ್ತೆಯಲ್ಲಿ ನಿಂತುಕೊಂಡು ಅತ್ಯಂತ ವಿನಯದಿಂದ ದುಆ ಮಾಡಿದರು. ಓ ಅಲ್ಲಾಹನೇ! ಭೂಮ್ಯಾಕಾಶಗಳ ಒಡೆಯ ನೀನು, ನಾವು ನಿನ್ನ ವಿನೀತ ದಾಸರಾಗಿದ್ದೆವು. ನಿನ್ನ ಮಸೀಹರ ದರ್ಶನಕ್ಕಾಗಿ ಹೊರಟಿರುವೆವು. ಕಾಲ್ನಡಿಗೆಯಲ್ಲಿ ಪ್ರಯಾಣ ಬೆಳೆಸುತ್ತಿದ್ದೇವೆ. ಚಳಿಯಿದೆ, ನೀನೇ ಕರುಣೆದೋರು.

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಯಾರ ಕೈಯಲ್ಲಿ ಮುಹಮ್ಮದ್(ಸ)ರ ಜೀವವಿದೆಯೋ ಆ ಅಲ್ಲಾಹನ ಆಣೆ ಹಾಕಿಕೊಂಡು ಹೇಳುತ್ತೇನೆ: ಖಂಡಿತವಾಗಿಯೂ ಅಲ್ಲಾಹನ ಮತ್ತು ಅವನ ಪ್ರವಾದಿಯ ಮುಂದೆ ದೇವದೂತರು ಲಜ್ಜೆಯಿಂದ ನಿಲ್ಲುವ ಹಾಗೆಯೇ ದೇವದೂತರು ಹಝ್ರ‌ತ್ ಉಸ್ಮಾನ್‌ರ ಮುಂದೆ ಲಜ್ಜೆಯಿಂದ ನಿಲ್ಲುತ್ತಾರೆ**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಧುನ್ನೂರೈನ್ ಹಝ್ರ‌ತ್ ಉಸ್ಮಾನ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಹಝ್ರ‌ತ್ ಪೈಗಂಬರ್(ಸ) ತನ್ನ ಎರಡೂ ಕೈಗಳನ್ನು ಮೇಲಕ್ಕೆ ಎತ್ತಿದರು. ಎಲ್ಲಿಯ ವರೆಗೆಂದರೆ ಅವರ ಕಂಕುಳಿನ ಬಿಳಿ ಬಣ್ಣ ಕಾಣಬಹುದಾಗಿತ್ತು. ಹಝ್ರ‌ತ್ ಉಸ್ಮಾನ್‌ರಿಗಾಗಿ ಹಝ್ರ‌ತ್ ಪೈಗಂಬರ್(ಸ) ದುಆ ಮಾಡಿದರು. ಬೇರೆ ಯಾರ ಪರವಾಗಿಯೂ ಹಝ್ರ‌ತ್ ಪೈಗಂಬರ್(ಸ) ಹೀಗೆ ದುಆ ಮಾಡಿದ್ದಾಗಿ ನಾನು ಹಿಂದೆಯೂ ಅದರ ನಂತರವೂ ಆಲಿಸಿರಲಿಲ್ಲ. ಆ ದುಆ ಇದಾಗಿತ್ತು: ಅಲ್ಲಾಹುಮ್ಮ ಆತಿ ಉಸ್ಮಾನ್ ಅಲ್ಲಾಹುಮ್ಮ ಇಫ್‌ಅಲ್ ಬಿಉಸ್ಮಾನ. ಎಂದರೆ, ಹೇ ಅಲ್ಲಾಹ್, ಉಸ್ಮಾನ್‌ರಿಗೆ ಬಹಳವಾಗಿ ದಯಪಾಲಿಸು, ಹೇ ಅಲ್ಲಾಹ್, ಉಸ್ಮಾನ್‌ರ ಮೇಲೆ ನಿನ್ನ ಅನುಗ್ರಹ ಮತ್ತು ಕೃಪಯನ್ನು ಸುರಿಸು**

**ಹಝ್ರ‌ತ್ ಉಸ್ಮಾನ್(ರ) ಸ್ವತಂತ್ರಗೊಳಿಸಿದ ಗುಲಾಮನಾದ ಅಬೂಸಈದ್ ವರದಿ ಮಾಡುತ್ತಾರೆ: ಹಝ್ರ‌ತ್ ಉಸ್ಮಾನ್‌ರ(ರ) ಮನೆಗೆ ಮುತ್ತಿಗೆ ಹಾಕಲಾದ ವೇಳೆ ಅವರು 20 ಗುಲಾಮರನ್ನು ಸ್ವತಂತ್ರಗೊಳಿಸಿದರು.**

**ಐದು ದಿವಂಗತರಾದ ಜಮಾಅತಿನ ಮುರಬ್ಬಿಯಾಗಿದ್ದ ಸನ್ಮಾನ್ಯ ಮುಹಮ್ಮದ್ ಯೂನುಸ್ ಖ಼ಾಲಿದ್ ಸಾಹಿಬ್, ಸನ್ಮಾನ್ಯ ಡಾಕ್ಟರ್ ನಿಝ಼ಾಮುದ್ದೀನ್ ಬುದನ್ ಸಾಹಿಬ್, ಡಾಕ್ಟರ್ ನಸೀರ್ ಅಹ್ಮದ್ ಝ಼ುಫರ್ ಸಾಹಿಬ್‌ರ ಪತ್ನಿಯಾದ ಸಲ್ಮಾ ಬೇಗಂ ಸಾಹಿಬ, ಯು.ಕೆ.ಯ ಅಶ್ಶಿರ್ಕತುಲ್ ಇಸ್ಲಾಮಿಯದ ಚೇರ್‌ಮೇನ್ ಆದ ಸನ್ಮಾನ್ಯ ಅಬ್ದುಲ್‌ಬಾಖಿ ಅಶ್ರಫ್ ಸಾಹಿಬ್‌ರ ಪತ್ನಿ ಮತ್ತು ಸೂಡಾನಿನ ಅಬ್ದುರ್ರಹ್ಮಾನ್ ಹುಸೈನ್ ಮುಹಮ್ಮದ್ ಖೈರ್ ಸಾಹಿಬ್ ಅವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝ಼ೆ ಜನಾಝ಼ ನಿರ್ವಹಣೆ**

**ಪಾಕಿಸ್ತಾನ ಮತ್ತು ಅಲ್‌ಜೀರಿಯದ ಅಹ್ಮದಿಯರಿಗಾಗಿ ದುಆ ಮಾಡಲು ಪುನಃ ವಿಷೇಶ ಕೋರಿಕೆ.**

**ಚೈನಿಸ್ ಡೆಸ್ಕಿನ ವೆಬ್‌ಸೈಟ್‌ನ ಉದ್ಘಾಟನೆಯ ಘೋಷಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ‌ತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **02-04-2021** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಕಳೆದ ಖುತ್ಬಕ್ಕೆ ಮುಂಚೆ ಹಝ್ರ‌ತ್ ಉಸ್ಮಾನ್‌ರ ಪ್ರಸ್ತಾಪ ನಡೆಯುತ್ತಿತ್ತು. ಇಂದು ಸಹ ಅದನ್ನೇ ಮುಂದುವರೆಸಲಾಗುವುದು. ಹಝ್ರ‌ತ್ ಉಸ್ಮಾನ್‌ರಲ್ಲಿ ಪವಿತ್ರತೆ ಮತ್ತು ಲಜ್ಜಾಗುಣ ಬಹಳ ಅಧಿಕವಿತ್ತು. ಅದರ ಕುರಿತು ವರದಿಯಿದೆ. ಹಝ್ರ‌ತ್ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ: ಹಝ್ರ‌ತ್ ಪೈಗಂಬರ್(ಸ) ಹೇಳಿದರು: ನನ್ನ ಸಮುದಾಯದಲ್ಲಿ ಅತ್ಯಂತ ಹೆಚ್ಚು ಕರುಣೆ ತೋರಿಸುವವರು ಅಬೂಬಕರ್ ಆಗಿರುವರು, ಅಲ್ಲಾಹನ ಧರ್ಮದ ವಿಷಯದಲ್ಲಿ ಅತ್ಯಂತ ಕಟ್ಟುನಿಟ್ಟು ತೋರಿಸುವವರು ಉಮರ್ ಆಗಿರುವರು, ಅತ್ಯಂತ ಹೆಚ್ಚು ನೈಜವಾದ ಲಜ್ಜಾಗುಣವನ್ನು ಹೊಂದಿರುವವರು ಉಸ್ಮಾನ್ ಆಗಿರುವರು, ಉತ್ತಮ ತೀರ್ಮಾನ ಮಾಡುವವರು ಅಲಿ ಬಿನ್ ಅಬೀ ತಾಲಿಬ್ ಆಗಿರುವರು, ಹೆಚ್ಚು ಪವಿತ್ರ ಖುರ್‌ಆನ್ ತಿಳಿದಿರುವವರು ಅಬೀ ಬಿನ್ ಕಅ್‌ಬ್ ಆಗಿರುವರು, ಹೆಚ್ಚು ಹಲಾಲ್ ಹರಾಂ ಕುರಿತು ತಿಳಿದಿರುವವರು ಮುಆಧ್ ಬಿನ್ ಜಬಲ್ ಆಗಿರುವರು ಹಾಗೂ ಅತ್ಯಂತ ಹೆಚ್ಚು ಕಡ್ಡಾಯ ಕಾರ್ಯಗಳನ್ನು ಅರಿಯುವವರು ಝ೬ದ್ ಬಿನ್ ಸಾಬಿತ್ ಆಗಿರುವರು. ಕೇಳಿರಿ ಪ್ರತಿಯೊಂದು ಉಮ್ಮತಿಗೆ ಒಬ್ಬ ಅಮೀನ್ ಇರುತ್ತಾರೆ. ಈ ಸಮುದಾಯದ ವಿಶ್ವಸ್ತ ವ್ಯಕ್ತಿ ಅಬೂ ಉಬೈದ ಬಿನ್ ಜರಾಹ್ ಆಗಿರುವರು. (ಸುನನ್ ಇಬ್ನೆ ಮಾಜ, ಇಫ್ತಿತಾಹುಲ್ ಕಿತಾಬ್, ಹದೀಸ್-154)

ಹಝ್ರ‌ತ್ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ: ಹಝ್ರ‌ತ್ ಪೈಗಂಬರ್(ಸ) ಹೇಳಿದರು: ನನ್ನ ಸಮುದಾಯದ ಮೇಲೆ ಅತ್ಯಂತ ಹೆಚ್ಚು ಕರುಣೆ ತೋರಿಸುವವರು ಅಬೂಬಕರ್ ಆಗಿರುವರು, ಅಲ್ಲಾಹನ ಆದೇಶಗಳನ್ನು ಕಾರ್ಯಗತಗೊಳಿಸುವುದಲ್ಲಿ ಅತ್ಯಂತ ಕಟ್ಟುನಿಟ್ಟನ್ನು ಪಾಲಿಸುವವರು ಉಮರ್ ಆಗಿರುವರು, ಅತ್ಯಂತ ಲಜ್ಜೆಯುಳ್ಳವರು ಉಸ್ಮಾನ್ ಆಗಿರುವರು.
(ಸುನನ್ ಅತ್ತಿರ್‌ಮಿಧಿ, ಅಬ್ವಾಬುಲ್ ಮನಾಖಿಬ್, ಹದೀಸ್-3790)

ಹಝ್ರ‌ತ್ ಉಸ್ಮಾನ್ ಬಿನ್ ಅಫ್ಫಾನ್ ಹೇಳುತ್ತಾರೆ: ನಾನು ಎಂದಿಗೂ ಅಶ್ರದ್ಧೆವಹಿಸಿಲ್ಲ, ನಾನು ಎಂದಿಗೂ ಅಭಿಲಾಷೆ ಹೊಂದಲಿಲ್ಲ, (ಸಿನನ್ ಇಬ್ನೆ ಮಾಜ ಕಿತಾಬುತ್ತಹಾರ ವಸನನ್‌ಹ ಹದೀಸ್-311) ಎಂದರೆ ಖಿಲಾಫತ್ ಅಥವಾ ಯಾವುದೇ ಸಣ್ಣದಾದ ಅಥವಾ ದೊಡ್ಡದಾದ ಹುದ್ದೆಯನ್ನು ಆಸೆಪಡಲಿಲ್ಲ.

ಹಝ್ರ‌ತ್ ಉಸ್ಮಾನ್‌ರ ಲಜ್ಜಾಗುಣದ ಬಗ್ಗೆ ಹಝ್ರ‌ತ್ ಆಯಿಶ(ರ) ವರದಿ ಮಾಡುತ್ತಾರೆ: ಹಝ್ರ‌ತ್ ಪೈಗಂಬರ್(ಸ) ಅವರ ಕಣಕಾಲಿನಿಂದ ಬಟ್ಟೆಯನ್ನು ಸರಿಸಿಕೊಂಡು ನನ್ನ ಮನೆಯಲ್ಲಿ ಮಲಗಿದ್ದರು. ಹಝ್ರ‌ತ್ ಅಬೂಬಕರ್(ರ) ಮನೆಯೊಳಗೆ ಬರಲು ಅನುಮತಿ ಕೇಳಿದರು. ಹಝ್ರ‌ತ್ ಪೈಗಂಬರ್(ಸ) ಅನುಮತಿಯನ್ನು ಕೊಟ್ಟರು. ಅವರು ಮಾತುಕತೆ ನಡೆಸುತ್ತಾ ಇದ್ದರು. ಅನಂತರ ಹಝ್ರ‌ತ್ ಉಮರ್(ರ) ಒಳಗೆ ಬರಲು ಅನುಮತಿ ಕೇಳಿದರು. ಹಝ್ರ‌ತ್ ಪೈಗಂಬರ್(ಸ) ಅದೇ ಸ್ಥಿತಿಯಲ್ಲಿ ಅವರಿಗೂ ಅನುಮತಿ ಕೊಟ್ಟರು. ಅನಂತರ ಅವರು ಸಹ ಮಾತುಕತೆ ನಡೆಸುತ್ತಾ ಕುಳಿತರು. ಅನಂತರ ಹಝ್ರ‌ತ್ ಉಸ್ಮಾನ್(ರ) ಒಳಗೆ ಬರಲು ಅನುಮತಿ ಕೇಳಿದರು. ಆಗ ಹಝ್ರ‌ತ್ ಪೈಗಂಬರ್(ಸ) ಕುಳಿತುಕೊಂಡರು ಮತ್ತು ತಾವು ಧರಿಸಿದ್ದ ಉಡಿಗೆಗಳನ್ನು ಸರಿಪಡಿಸಿದರು. ವರದಿಗಾರರಾದ ಮುಹಮ್ಮದ್ ಹೇಳುತ್ತಾರೆ: ಇವೆಲ್ಲವೂ ಒಂದೇ ದಿನವಾಯಿತೆಂದು ನಾನು ಹೇಳುತ್ತಿಲ್ಲ. ಬೇರೆ ಬೇರೆ ಸಮಯಗಳಲ್ಲಿ ಆಗಿರಬಹುದು. ಹಝ್ರ‌ತ್ ಆಯಿಶ(ರ) ಹೇಳುತ್ತಾರೆ: ಹಝ್ರ‌ತ್ ಅಬೂಬಕರ್(ರ) ಬಂದಾಗ ಹಝ್ರ‌ತ್ ಪೈಗಂಬರ್(ಸ) ಬಟ್ಟೆಯನ್ನು ಸರಿಪಡಿಸುವ ಕಡೆಗೆ ವಿಶೇಷ ಗಮನವಹಿಸಲಿಲ್ಲ. ಅನಂತರ ಹಝ್ರ‌ತ್ ಉಮರ್(ರ) ಬಂದಾಗಲೂ ಅವರಿಗಾಗಿಯೂ ವಿಶೇಷ ಗಮನವಹಿಸಲಿಲ್ಲ. ಆದರೆ ಹಝ್ರ‌ತ್ ಉಸ್ಮಾನ್(ರ) ಬಂದಾಗ ಹಝ್ರ‌ತ್ ಪೈಗಂಬರ್(ಸ) ಕುಳಿತುಕೊಂಡರು. ತಮ್ಮ ಉಡಿಗೆಯನ್ನು ಸರಿಪಡಿಸಲು ತೊಡಗಿದರು. ಹಝ್ರ‌ತ್ ಪೈಗಂಬರ್(ಸ) ಹೇಳಿದರು: ದೇವದೂತರು ಯಾರ ಮುಂದೆ ಲಜ್ಜೆಯಿಂದ ನಿಲ್ಲುತಾರೋ ಅವರಿಗೆ ನಾನು ವಿಶೇಷವಾದ ಬೆಲೆಕೊಡಬೇಡವೇ? ಇನ್ನೊಂದು ಕಡೆ ಈ ವರದಿಯನ್ನು ಪ್ರಸ್ತಾಪಿಸುತ್ತಾ ಹೀಗೆ ಬರೆಯಲಾಗಿದೆ. ಹಝ್ರ‌ತ್ ಉಸ್ಮಾನ್‌ರಿಗೆ ಮಾತ್ರ ನೀವು ಈ ವಿಷಯದಲ್ಲಿ ಏಕೆ ವಿಶೇಷ ಗಮನವಹಿಸಿದ್ದೀರಿ ಎಂದು ಹಝ್ರ‌ತ್ ಆಯಿಶ(ರ) ಹಝ್ರ‌ತ್ ಪೈಗಂಬರರೊಡನೆ(ಸ) ಕೇಳಿದಾಗ,

ಅವರು ಹೇಳಿದರು: ಯಾರಿಗಾಗಿ ದೇವದೂತರು ಲಜ್ಜೆ ತೋರಿಸುತ್ತಾರೋ ಅವರಿಗಾಗಿ ನಾನು ಲಜ್ಜೆ ತೋರಿಸಬೇಡವೇ? ಯಾರ ಕೈಯಲ್ಲಿ ನನ್ನ ಜೀವವಿದೆಯೋ ಆ ಅಲ್ಲಾಹನ ಆಣೆ ಹಾಕಿಕೊಂಡು ಹೇಳುತ್ತೇನೆ: ಖಂಡಿತವಾಗಿಯೂ ಅಲ್ಲಾಹನ ಮತ್ತು ಅವನ ಪ್ರವಾದಿಯ ಮುಂದೆ ದೇವದೂತರು ಲಜ್ಜೆಯಿಂದ ನಿಲ್ಲುವ ಹಾಗೆಯೇ ದೇವದೂತರು ಹಝ್ರತ್ ಉಸ್ಮಾನ್‌ರ ಮುಂದೆ ಲಜ್ಜೆಯಿಂದ ನಿಲ್ಲುತ್ತಾರೆ. ಉಸ್ಮಾನ್ ಒಳಗೆ ಬಂದ ನಂತರ ನೀನು ನನ್ನ ಸಮೀಪವೇ ಇರುತ್ತಿದ್ದರೆ, ಅವರು ಮರಳಿ ಹೋಗುವ ತನಕ ಅವರು ತಮ್ಮ ತಲೆಯನ್ನು ಎತ್ತುತ್ತಿರಲಿಲ್ಲ. ಎಂದರೆ ಕಣ್ಣುಗಳನ್ನು ಮೇಲೆತ್ತುತ್ತಿರಲಿಲ್ಲ ಮತ್ತು ಏನೂ ಮಾತನಾಡಲಿಕ್ಕೂ ಇಲ್ಲ. ಅವರೊಳಗೆ ಅಷ್ಟು ಲಜ್ಜೆಯಿತ್ತು. (ಸಹೀಹ್ ಮುಸ್ಲಿಮ್ ಕಿತಾಬ್ ಫಝಾಎಲುಸ್ಸಹಾಬ, ವರದಿ-6209) (ಮಜ್‌ಮಅ ಅಝ್ಝವಾಎದ್ ಸಂಪುಟ-9, ಪುಟ-59-60, ಕಿತಾಬುಲ್ ಮನಾಖಿಬ್ ಹದೀಸ್-14504, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಅಲ್ಲಾಹನ ಗುಣನಾಮವಾದ ಕರೀಂ ಎಂಬುದರ ಬಗ್ಗೆ ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹಝ್ರತ್ ಉಸ್ಮಾನ್‌ರ ಈ ಘಟನೆಯನ್ನು ಹೀಗೆ ವಿವರಿಸುತ್ತಾರೆ: ಅಲ್ಲಾಹನು ಕರೀಂ, ಎಂದರೆ ಕೃಪಾಳು ಆಗಿರುವನು. ಯಾರಲ್ಲಿ ಕೃಪೆ ಎಂಬ ನೈತಿಕಗುಣವಿದೆಯೋ ಅವರ ಮುಂದೆ ಲಜ್ಜೆಯಿಂದ ಇರಲಾಗುತ್ತದೆ ಎಂದು ಹಝ್ರತ್ ಪೈಗಂಬರರ(ಸ) ಒಂದು ಘಟನೆಯಿಂದ ತಿಳಿದುಬರುತ್ತದೆ. ಒಂದು ಬಾರಿ ಹಝ್ರತ್ ಪೈಗಂಬರ್(ಸ) ತಮ್ಮ ಮನೆಯಲ್ಲಿ ಕುಳಿತುಕೊಂಡಿದ್ದರು. ಅವರ ಕಾಲಿನ ಸ್ವಲ್ಪ ಭಾಗದಿಂದ ಬಟ್ಟೆ ಸರಿದಿತ್ತು. ಹಝ್ರತ್ ಅಬೂಬಕರ್(ರ) ಬಂದು ಕುಳಿತುಕೊಂಡರು, ಹಝ್ರತ್ ಉಮರ್(ರ) ಬಂದು ಕುಳಿತುಕೊಂಡರು. ಆದರೆ ಹಝ್ರತ್ ಪೈಗಂಬರ್(ಸ) ಅಷ್ಟೇನೂ ಪರಿವೆ ಮಾಡಲಿಲ್ಲ. ಸ್ವಲ್ಪ ಸಮಯದ ನಂತರ ಹಝ್ರತ್ ಉಸ್ಮಾನ್(ರ) ಬಾಗಿಲು ಮುಟ್ಟಿದರು. ಹಝ್ರತ್ ಪೈಗಂಬರ್(ಸ) ಬೇಗನೇ ಎದ್ದು ಕುಳಿತುಕೊಂಡರು ಮತ್ತು ತಮ್ಮ ಕಾಲುಗಳನ್ನು ಬಟ್ಟೆಯಿಂದ ಮರೆಸಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಉಸ್ಮಾನ್ ಬಹಳ ನಾಚಿಕೆಪಡುವ ವ್ಯಕ್ತಿಯಾಗಿರುವರು. ಅವರ ಮುಂದೆ ಕಾಲಿನ ಸ್ವಲ್ಪ ಭಾಗವನ್ನು ತೆರೆದ ಸ್ಥಿತಿಯಲ್ಲಿ ಇರಿಸುವುದು ಸರಿಯಲ್ಲ. ಇದರ ಬಗ್ಗೆ ಹದೀಸ್ ಹೀಗಿದೆ: ಮೊದಲು ಪ್ರಸ್ತಾಪಿಸಿದ್ದೇ ಆಗಿದೆ. ಹಝ್ರತ್ ಆಯಿಶ(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಅವರ ಕಣಕಾಲಿನಿಂದ ಬಟ್ಟೆಯನ್ನು ಸರಿಸಿಕೊಂಡು ನನ್ನ ಮನೆಯಲ್ಲಿ ಮಲಗಿಕೊಂಡಿದ್ದರು. ಇದೇ ಸ್ಥಿತಿಯಲ್ಲಿ ಹಝ್ರತ್ ಅಬೂಬಕರ್(ರ) ಮನೆಯೊಳಗೆ ಬರಲು ಅನುಮತಿ ಕೇಳಿದರು. ಹಝ್ರತ್ ಪೈಗಂಬರ್(ಸ) ಹಾಗೆಯೇ ಮಲಗಿಕೊಂಡು ಅನುಮತಿಯನ್ನು ಕೊಟ್ಟರು. ಅವರು ಮಾತುಕತೆ ನಡೆಸುತ್ತಾ ಇದ್ದರು. ಅನಂತರ ಹಝ್ರತ್ ಉಮರ್(ರ) ಒಳಗೆ ಬರಲು ಅನುಮತಿ ಕೇಳಿದರು. ಹಝ್ರತ್ ಪೈಗಂಬರ್(ಸ) ಅದೇ ಸ್ಥಿತಿಯಲ್ಲಿ ಅವರಿಗೂ ಅನುಮತಿ ಕೊಟ್ಟರು. ಅನಂತರ ಅವರು ಸಹ ಮಾತುಕತೆ ನಡೆಸುತ್ತಾ ಕುಳಿತರು. ಸ್ವಲ್ಪ ಸಮಯದ ನಂತರ ಹಝ್ರತ್ ಉಸ್ಮಾನ್(ರ) ಬಂದರು. ಆಗ ಹಝ್ರತ್ ಪೈಗಂಬರ್(ಸ) ಎದ್ದುನಿಂತರು ಮತ್ತು ತಾವು ಧರಿಸಿದ್ದ ಉಡಿಗೆಗಳನ್ನು ಸರಿಪಡಿಸಿದ ನಂತರ ಅವರಿಗೆ ಒಳಗೆ ಬರಲು ಅನುಮತಿ ಕೊಟ್ಟರು. ಎಲ್ಲರೂ ಹೋದ ನಂತರ ಹಝ್ರತ್ ಪೈಗಂಬರರೊಡನೆ(ಸ) ಹಝ್ರತ್ ಆಯಿಶ(ರ) ಕೇಳಿದರು: ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ) ಬಂದಾಗಲೂ ನೀವು ಮಲಗಿಯೇ ಇದ್ದೀರಿ, ಅವರಿಗಾಗಿಯೂ ವಿಶೇಷ ಪರಿವೆ ಮಾಡಿರಲಿಲ್ಲ. ಆದರೆ ಹಝ್ರತ್ ಉಸ್ಮಾನ್(ರ) ಬಂದಾಗ ನೀವು ಕುಳಿತುಕೊಂಡಿದ್ದೀರಿ ಮತ್ತು ನಿಮ್ಮ ಉಡಿಗೆಯನ್ನು ಸರಿಪಡಿಸಿದ್ದೀರಿ. ಇದಕ್ಕೆ ಕಾರಣವೇನು? ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಆಯಿಶ, ದೇವದೂತರು ಯಾರ ಮುಂದೆ ಲಜ್ಜೆಯಿಂದ ನಿಲ್ಲುತಾರೋ ಅವರಿಗೆ ನಾನು ಲಜ್ಜೆ ತೋರಿಸಬೇಡವೇ?

ನೋಡಿರಿ, ಹಝ್ರತ್ ಪೈಗಂಬರ್(ಸ) ಹಝ್ರತ್ ಉಸ್ಮಾನ್‌ರ(ರ) ನಾಚಿಕೆಪಡುವ ಸ್ವಭಾವಕ್ಕೆ ಬೆಲೆಕೊಟ್ಟರು. ಹಝ್ರತ್ ಉಸ್ಮಾನ್(ರ) ಜನರ ಮುಂದೆ ಲಜ್ಜೆಯಿಂದ ಇರುತ್ತಿದ್ದರು. ಆದ್ದರಿಂದ ಹಝ್ರತ್ ಪೈಗಂಬರ್(ಸ) ಅವರಿಗಾಗಿ ಲಜ್ಜೆ ತೋರಿಸುತ್ತಿದ್ದರು. ಇದನ್ನು ಹೇಳುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅಲ್ಲಾಹನು ಕೃಪಾಳುಆಗಿರುವುದರಿಂದ ಜನರು ಪಾಪಗಳಿಂದ ರಕ್ಷಣೆ ಪಡೆಯಲು ಪ್ರಯತ್ನಿಸಬೇಕು. ಲಜ್ಜೆ ತೋರಿಸಬೇಕು. ಅಲ್ಲಾಹನು ಆಜ್ಞೆಗಳನ್ನು ಅನುಸರಿಸಬೇಕು. ಅಲ್ಲಾಹನು ಕೃಪಾಳು ಆಗಿರುವುದರಿಂದ, ಅವನು ಕೃಪೆತೋರಿಸುವನು ಎಂದು ಭಾವಿಸಿಕೊಂಡು ಪಾಪಗಳನ್ನು ಮಾಡಲು ಧೈರ್ಯ ತೋರಿಸಬಾರದು. ಪಾಪಗಳನ್ನು ಮಾಡಿದ್ದರೂ ಅವನು ಕೃಪೆ ತೋರಿಸುವನು ಎಂದು ಹೇಳಿಕೊಂಡು ಪಾಪಗಳನ್ನು ಮಾಡಬಾರದು. ಅಲ್ಲಾಹನು ಒಂದು ಗುಣವಿಶೇಷ ಕರೀಂ ಆಗಿರುವ ಕಾರಣ, ಮನುಷ್ಯನಿಗೂ ಸಹ ನಾಚಿಕೆ ಇರಬೇಕು ಮತ್ತು ಪಾಪಗಳಿಂದ ರಕ್ಷಣೆ ಹೊಂದಲು ಪರಿಶ್ರಮಿಸಬೇಕು. (ತಫ್‌ಸೀರೆ ಕಬೀರ್, ಸಂಪುಟ-8, ಪುಟ-259)

ಹಝ್ರತ್ ಉಸ್ಮಾನ್‌ರ(ರ) ವಿನಯ ಮತ್ತು ಸರಳತೆ ಬಗ್ಗೆ ವರದಿಯಿದೆ. ಅಬ್ದುಲ್ಲಾಹ್ ರೂಮಿ ವರದಿ ಮಾಡುತ್ತಾರೆ: ಹಝ್ರತ್ ಉಸ್ಮಾನ್(ರ) ವುಝೂವಿನ ವ್ಯವಸ್ಥೆ ಸ್ವತಃ ಮಾಡುತ್ತಿದ್ದರು. ನಿಮಗಾಗಿ ವುಝುವಿನ ವ್ಯವಸ್ಥೆಯನ್ನು ಮಾಡಿಕೊಡಲು ನೀವು ಯಾವನಾದರೂ ಗುಲಾಮನಿಗೆ ಆಜ್ಞಾಪಿಸಿರಿ ಎಂದು ಅವರೊಡನೆ ಹೇಳಲಾಯಿತು. ಆಗ ಹಝ್ರತ್ ಉಸ್ಮಾನ್(ರ) ಹೇಳಿದರು: ರಾತ್ರಿಯಿರುವುದು ಅವರಿಗಾಗಿ ಆರಾಮ ಮಾಡಲಿಕ್ಕೆ ಆಗಿದೆ.
(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ-3, ಪುಟ-33, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 1996)

ಎಂದರೆ ಕೆಲಸಮಾಡುವ ಸೇವಕರಿಗೆ ರಾತ್ರಿ ಸಮಯದಲ್ಲಿ ವಿಶ್ರಾಂತಿ ಪಡೆಯಲು ಸಮಯ ಕೊಡಬೇಕು.

ಅಲ್‌ಕಮ ಬಿನ್ ವಖಾಸ್ ಹೇಳುತ್ತಾರೆ: ಹಝ್ರತ್ ಉಸ್ಮಾನ್(ರ) ಮಿಂಬರ್‌ನಲ್ಲಿದ್ದುಕೊಂಡು ಭಾಷಣ ಮಾಡುತ್ತಾ ಕೆಲವು ಮಾತುಗಳ ಬಗ್ಗೆ ಸಮುದಾಯಕ್ಕೆ ಮುನ್ನೆಚ್ಚರಿಕೆಗಳನ್ನು ನೀಡಿದ್ದರು. ಅಲ್ಲಾಹನನ್ನು ಹೆಚ್ಚಾಗಿ ಭಯಪಡಲು ಹೇಳಿದ್ದರು. ಹಝ್ರತ್ ಅಮ್ರ್ ಬಿನ್ ಆಸ್ ಹೇಳಿದರು: ಹೇ ಉಸ್ಮಾನ್, ನೀವು ಈ ಸಮುದಾಯವನ್ನು ಒಂದು ದೊಡ್ಡ ಸಂಕಷ್ಟದಲ್ಲಿ ಹಾಕಿದ್ದೀರಿ. ನೀವು ಜನರಿಗಾಗಿ ಪಶ್ಚಾತ್ತಾಪದ ಪ್ರಾರ್ಥನೆಯನ್ನು ಮಾಡಿರಿ, ಜನರು ಸಹ ನಿಮ್ಮೊಂದಿಗೆ ತೌಬ ಮಾಡಲಿ. ವರದಿಗಾರ ಹೇಳುತ್ತಾರೆ: ಹಝ್ರತ್ ಉಸ್ಮಾನ್(ರ) ಆಗಲೇ ತಮ್ಮ ಮುಖವನ್ನು ಖಿಬ್ಲದ ಕಡೆಗೆ ಮಾಡಿಕೊಂಡು ತಮ್ಮ ಎರಡು ಕೈಗಳನ್ನು ಎತ್ತಿಕೊಂಡು ಹೀಗೆ ಪ್ರಾರ್ಥಿಸಿದರು: **ಅಲ್ಲಾಹುಮ್ಮ ಇನ್ನೀ ಅಸ್ತಘ್‌ಫಿರುಕ ವ ಅತೂಬು ಇಲೈಕ**. ಎಂದರೆ, ಹೇ ಅಲ್ಲಾಹ್, ನಿಶ್ಚಯವಾಗಿಯೂ ನಾನು ನಿನ್ನೊಡನೆ ಕ್ಷಮೆಯನ್ನು ಯಾಚಿಸುತ್ತೇನೆ ಮತ್ತು ನಿನ್ನ ಕಡೆಗೆ ಬಾಗುತ್ತೇನೆ. ಆ ಸಂದರ್ಭದಲ್ಲಿ ಅಲ್ಲಿದ್ದ ಜನರು ಸಹ ತಮ್ಮ ಕೈಗಳನ್ನು ಎತ್ತಿಕೊಂಡು ಹೀಗೆಯೇ ದುಆ ಮಾಡಿದರು. ಇದು ಹಝ್ರತ್ ಉಸ್ಮಾನ್‌ರಿಗೆ ಅಲ್ಲಾಹನೊಡನೆ ಇದ್ದ ಭಯ ಮತ್ತು ಅವರ ವಿನಯದ ಒಂದು ಉದಾಹರಣೆಯಾಗಿದೆ. ಬೇಗನೇ ದುಆ ಮಾಡಲು ಕೈಯೆತ್ತಿಕೊಂಡರು. ಯಾವುದೇ ವಾದಕ್ಕೆ ಇಳಿಯಲಿಲ್ಲ. ತನಗಾಗಿಯೂ ಸಮುದಾಯಕ್ಕಾಗಿಯೂ ದುಆ ಮಾಡಿದರು.

ದಾನಧರ್ಮ, ಉದಾರಗುಣ ಮತ್ತು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದರ ಬಗ್ಗೆ ವರದಿಗಳು ಬರುತ್ತವೆ. ಹಝ್ರತ್ ಉಸ್ಮಾನ್(ರ) ಸ್ವತಃ ಹೇಳುತ್ತಾರೆ: ನಾನು ಹತ್ತು ಸಂಗತಿಗಳನ್ನು ಅಲ್ಲಾಹನ ಸನ್ನಿಧಿಯಲ್ಲಿ ರಹಸ್ಯವಾಗಿ ಇಟ್ಟಿದ್ದೇನೆ. ಇಸ್ಲಾಂ ಸ್ವೀಕರಿಸುವುದರಲ್ಲಿ ನಾನು ನಾಲ್ಕನೇ ವ್ಯಕ್ತಿಯಾಗಿದ್ದೇನೆ. ನಾನು ಎಂದಿಗೂ ವ್ಯರ್ಥವಾದ ಹಾಡುಗಳನ್ನು ಕೇಳಿಲ್ಲ, ಎಂದೂ ಸುಳ್ಳು ಮಾತನ್ನು ಹೇಳಿಲ್ಲ, ನಾನು ಹಝ್ರತ್ ಪೈಗಂಬರ್‌ರನ್ನು(ಸ) ಬೈಅತ್ ಮಾಡಿದ ಅಂದಿನಿಂದ ನಾನು ನನ್ನ ಗುಪ್ತಾಂಗವನ್ನು ನನ್ನ ಬಲಗೈಯಿಂದ ಮುಟ್ಟಿಲ್ಲ. ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ನಂತರ ಎಲ್ಲ ಜುಮಾ ದಿನದಂದು ಒಬ್ಬ ಗುಲಾಮನನ್ನಾದರೂ ಸ್ವತಂತ್ರಗೊಳಿಸುತ್ತಿದ್ದೆ. ನನಗೆ ಸ್ವತಂತ್ರ ಮಾಡಿಸಲು ಯಾವನೇ ಗುಲಾಮನು ಸಿಗದೇ ಬಂದರೆ, ಬೇರೆ ದಿನಗಳಲ್ಲಿ ಗುಲಾಮನನ್ನು ಸ್ವತಂತ್ರಗೊಳಿಸುತ್ತಿದ್ದೆ, ನಾನು ಜಾಹಿಲಿಯ್ಯ ಕಾಲದಲ್ಲೂ ಇಸ್ಲಾಮ್ ಧರ್ಮ ಸ್ವೀಕರಿಸಿದ ನಂತರವೂ ವ್ಯಭಿಚಾರವನ್ನು ಮಾಡಿಲ್ಲ.

(ಮಜ್‌ಮಅ ಅಝ್ಝವಾಎದ್ ಸಂಪುಟ-9, ಪುಟ-65, ಕಿತಾಬುಲ್ ಮನಾಖಿಬ್ ಹದೀಸ್-14504, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹಝ್ರತ್ ಉಸ್ಮಾನ್(ರ) ಸ್ವತಂತ್ರಗೊಳಿಸಿದ ಗುಲಾಮನಾದ ಅಬೂಸಈದ್ ವರದಿ ಮಾಡುತ್ತಾರೆ: ಹಝ್ರತ್ ಉಸ್ಮಾನ್‌ರ(ರ) ಮನೆಗೆ ಮುತ್ತಿಗೆ ಹಾಕಲಾದ ವೇಳೆ ಅವರು 20 ಗುಲಾಮರನ್ನು ಸ್ವತಂತ್ರಗೊಳಿಸಿದರು. (ಅಸದುಲ್‌ಗಾಬ ಫೀ ಮಾರಿಫತುಸ್ಸಹಾಬ ಲಿಇಬ್ನೆ ಅಸೀರ್, ಸಂಪುಟ-3, ಪುಟ-489, ದಾರುಲ್ ಫಿಕರ್ ಬೈರೂತ್ 2003)

ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್ ವರದಿ ಮಾಡುತ್ತಾರೆ: ನಾವು ಹಝ್ರತ್ ಪೈಗಂಬರರೊಡನೆ(ಸ) ಒಂದು ಯುದ್ಧದಲ್ಲಿದ್ದೆವು. ಜನರಿಗೆ ಹಸಿವು ಶುರುವಾಯಿತು. ಎಲ್ಲಿಯ ವರೆಗೆಂದರೆ, ಮುಸ್ಲಿಮರ ಮುಖಗಳಲ್ಲಿ ಚಿಂತೆ ಮತ್ತು ಕಪಟವಿಶ್ವಾಸಿಗಳ ಮುಖಗಳಲ್ಲಿ ಖುಶಿಯ ಕುರುಹುಗಳು ಕಾಣಬಹುದಾಗಿತ್ತು. ಈ ಸ್ಥಿತಿಯನ್ನು ಕಂಡಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ಸೂರ್ಯ ಅಸ್ತಮಿಸುವುದಕ್ಕೆ ಮುಂಚಿತವಾಗಿ ಅಲ್ಲಾಹನು ನಿಮಗೆ ಆಹಾರದ ವ್ಯವಸ್ಥೆಯನ್ನು ಮಾಡುವನು. ಈ ಸಂಗತಿಯ ಬಗ್ಗೆ ಹಝ್ರತ್ ಉಸ್ಮಾನ್‌ರಿಗೆ(ರ) ಗೊತ್ತಾದಾಗ ಅವರು ಹೇಳಿದರು: ಅಲ್ಲಾಹ್ ಮತ್ತು ಅವನ ಪ್ರವಾದಿ ಸತ್ಯವಾಗಿಯೇ ಹೇಳಿದ್ದಾರೆ. ಹೀಗೆ ಹಝ್ರತ್ ಉಸ್ಮಾನ್(ರ) 14 ಒಂಟೆಗಳನ್ನು ಧಾನ್ಯ ಸಮೇತ ಖರೀದಿ ಮಾಡಿದರು ಮತ್ತು ಅವುಗಳಲ್ಲಿ

ಒಂಬತ್ತನ್ನು ಹಝ್ರತ್ ಪೈಗಂಬರರ(ಸ) ಸನ್ನಿಧಿಗೆ ಕಳುಹಿಸಿದರು. ಇದೇನೆಂದು ಹಝ್ರತ್ ಪೈಗಂಬರ್(ಸ) ಇದನ್ನು ನೋಡಿಕೊಂಡು ಪ್ರಶ್ನಿಸಿದರು. ಇದನ್ನು ಹಝ್ರತ್ ಉಸ್ಮಾನ್ ನಿಮಗೆ ಕೊಡುಗೆಯಾಗಿ ಕಳುಹಿಸಿದ್ದಾರೆ ಎಂದು ಹೇಳಲಾಯಿತು. ಆಗ ಹಝ್ರತ್ ಪೈಗಂಬರರ(ಸ) ಮುಖದಲ್ಲಿ ಖುಶಿ ಮತ್ತು ಸಂತೋಷ ಪ್ರಕಟವಾಯಿತು. ಕಪಟವಿಶ್ವಾಸಿಗಳ ಮುಖಗಳಲ್ಲಿ ಅಸಮಾಧಾನ ಮತ್ತು ಚಿಂತೆ ಉಂಟಾಯಿತು. ಆಗ ಹಝ್ರತ್ ಪೈಗಂಬರ್(ಸ) ತನ್ನ ಎರಡೂ ಕೈಗಳನ್ನು ಮೇಲಕ್ಕೆ ಎತ್ತಿದರು. ಎಲ್ಲಿಯ ವರೆಗೆಂದರೆ ಅವರ ಕಂಕುಳಿನ ಬಿಳಿ ಬಣ್ಣ ಕಾಣಬಹುದಾಗಿತ್ತು. ಹಝ್ರತ್ ಉಸ್ಮಾನ್‌ರಿಗಾಗಿ ಹಝ್ರತ್ ಪೈಗಂಬರ್(ಸ) ದುಆ ಮಾಡಿದರು. ಬೇರೆ ಯಾರ ಪರವಾಗಿಯೂ ಹಝ್ರತ್ ಪೈಗಂಬರ್(ಸ) ಹೀಗೆ ದುಆ ಮಾಡಿದ್ದಾಗಿ ನಾನು ಹಿಂದೆಯೂ ಅದರ ನಂತರವೂ ಆಲಿಸಿರಲಿಲ್ಲ. ಆ ದುಆ ಇದಾಗಿತ್ತು: **ಅಲ್ಲಾಹುಮ್ಮ ಆತಿ ಉಸ್ಮಾನ್ ಅಲ್ಲಾಹುಮ್ಮ ಇಫ್‌ಅಲ್ ಬಿಉಸ್ಮಾನ**. ಎಂದರೆ, ಹೇ ಅಲ್ಲಾಹ್, ಉಸ್ಮಾನ್‌ರಿಗೆ ಬಹಳವಾಗಿ ದಯಪಾಲಿಸು, ಹೇ ಅಲ್ಲಾಹ್, ಉಸ್ಮಾನ್‌ರ ಮೇಲೆ ನಿನ್ನ ಅನುಗ್ರಹ ಮತ್ತು ಕೃಪೆಯನ್ನು ಸುರಿಸು.

ಹಝ್ರತ್ ಆಯಿಶ(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ನನಗೆ ಬಳಿಗೆ ಬಂದು ಮನೆಯಲ್ಲಿ ಮಾಂಸವನ್ನು ಕಂಡಾಗ 'ಇದನ್ನು ಯಾರು ಕಳುಹಿಸಿದರು' ಎಂದು ಕೇಳಿದರು. ಹಝ್ರತ್ ಉಸ್ಮಾನ್(ರ) ಎಂದು ನಾನು ಹೇಳಿದೆ. ಆಗ ಹಝ್ರತ್ ಪೈಗಂಬರ್(ಸ) ತನ್ನ ಎರಡೂ ಕೈಗಳನ್ನು ಎತ್ತಿಕೊಂಡು ಉಸ್ಮಾನ್‌ರಿಗಾಗಿ ದುಆ ಮಾಡುತ್ತಿರುವುದಾಗಿ ಕಂಡೆ. (ಮಜ್‌ಮಅ ಅಝ್ಝವಾಎದ್ ಸಂಪುಟ–9, ಪುಟ–64, ಕಿತಾಬುಲ್ ಮನಾಖಿಬ್ ಹದೀಸ್–14504, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಮುಹಮ್ಮದ್ ಬಿನ್ ಹಿಲಾಲ್ ತನ್ನ ಅಜ್ಜಿಯಿಂದ ವರದಿ ಮಾಡುತ್ತಾರೆ: ಹಝ್ರತ್ ಉಸ್ಮಾನ್‌ರನ್ನು ಮನೆಯಲ್ಲಿ ಸುತ್ತುವರೆಯಲ್ಪಟ್ಟಿದ್ದಾಗ ಅವರ ಅಜ್ಜಿ ಹಝ್ರತ್ ಉಸ್ಮಾನ್‌ರ ಸನ್ನಿಧಿಯಲ್ಲಿ ಹಾಜರಾಗುತ್ತಿದ್ದರು. ಅವರ ಅಜ್ಜಿಗೆ ಒಂದು ಮಗು ಜನಿಸಿತ್ತು, ಅವರ ಹೆಸರು ಹಿಲಾಲ್ ಎಂದು ಇರಿಸಲಾಯಿತು. ಒಂದು ದಿನ ಅಜ್ಜಿ ಬರದೇ ಕಂಡಾಗ ಹಝ್ರತ್ ಉಸ್ಮಾನ್(ರ) ಅದರ ಬಗ್ಗೆ ಅನ್ವೇಷಿಸಿದರು. ಅಂದು ರಾತ್ರಿ ಅವರಿಗೆ ಮಗುವಿನ ಜನನವಾಯಿತು ಎಂದು ತಿಳಿದುಬಂತು. ಇದನ್ನು ಕೇಳಿದಾಗ ಹಝ್ರತ್ ಉಸ್ಮಾನ್(ರ) ನನಗೆ 50 ದಿರ್ಹಂ ಮತ್ತು ಒಂದು ದೊಡ್ಡ ಚಾದರದ ತುಂಡು ಕಳುಹಿಸಿದರು. ಇದು ನಿನ್ನ ಮಗನಿಗೆ ಇರುವ ಸ್ಟೈಪೆಂಡ್ ಆಗಿದೆ ಮತ್ತು ಈ ಚಾದರ ಅವನಿಗೆ ಧರಿಸಲಿಕ್ಕಾಗಿದೆ. ಅವನಿಗೆ ಒಂದು ವರ್ಷ ಪ್ರಾಯವಾಗುವಾಗ ಅವನ ಪಿಂಚಣಿಯನ್ನು ವರ್ಧಿಸಿ 100 ಮಾಡುವೆವು.

(ಅಲ್‌ಬದಾಯ ವನ್ನಹಾಯ ಲಿಇಬ್ನೆ ಅಸೀರ್ ಸಂಪುಟ–4. ಭಾಗ–7, ಪುಟ–206, ಹಿಜರಿ 35, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಇಬ್ನು ಸಈದ್ ಬಿನ್ ಯರ್‌ಬೂ ಹೇಳುತ್ತಾರೆ: ನಾನು ಬಾಲಕನಾಗಿದ್ದೆ. ನಾನು ಒಂದು ದಿನ ಮಧ್ಯಾಹ್ನ ಮನೆಯಿಂದ ಹೊರಟೆ. ನನ್ನ ಬಳಿ ಒಂದು ಹಕ್ಕಿಯಿತ್ತು. ಅದನ್ನು ಮಸೀದಿಯಲ್ಲಿ ಹಾರಿಸುತ್ತಿದ್ದೆ. ಮಸೀದಿಯಲ್ಲಿ ಓರ್ವ ಸುಂದರ ಹಿರಿಯ ವ್ಯಕ್ತಿ ತಲೆಯ ಕೆಳಗೆ ಇಟ್ಟಿಗೆಯ ತುಂಡನ್ನು ಇಟ್ಟುಕೊಂಡು ಮಲಗಿದ್ದರು. ದಿಂಬಿಗೆ ಬದಲಿಗೆ ಇಟ್ಟಿಗೆಯನ್ನು ಇರಿಸಿದ್ದರು. ನಾನು ನಿಂತುಕೊಂಡು ಅಚ್ಚರಿಯಿಂದ ಅವರ ಸೌಂದರ್ಯವನ್ನು ನೋಡಲು ತೊಡಗಿದೆ. ಅವರು ಕಣ್ಣುಗಳನ್ನು ತೆರೆದು, 'ಹೇ ಬಾಲಕ, ನೀನು ಯಾರೆಂದು' ಕೇಳಿದರು. ನಾನು ನನ್ನ ಬಗ್ಗೆ ಹೇಳಿದೆ. ಅನಂತರ ಅವರು ಸಮೀಪದಲ್ಲೇ ಇದ್ದ ಒಬ್ಬ ಹುಡುಗನನ್ನು ಕರೆದರು. ಆದರೆ ಅವನು ಕರೆಗೆ ಓಗೊಡಲಿಲ್ಲ. ಆಗ ಅವನನ್ನು ಕರೆದು ತರಲು ನನ್ನೊಡನೆ ಹೇಳಿದರು. ಹೀಗೆ ನಾನು ಅವನನ್ನು ಕರೆದು ತಂದೆನು. ಆ ಮಹನೀಯ ವ್ಯಕ್ತಿ ಅವನೊಡನೆ ಏನೋ ಕೊಂಡುಬರಲು ಹೇಳಿದರು ಮತ್ತು ನನ್ನೊಡನೆ ಕುಳಿತುಕೊಳ್ಳಲು ಹೇಳಿದರು. ಅನಂತರ ಆ ಹುಡುಗ ಹೋದನು. ಅವನು ಒಂದು ಉಡಿಗೆ ಮತ್ತು ಒಂದು ಸಾವಿರ ದಿರ್ಹಂ ಕೊಂಡುಬಂದನು. ಆ ಮಹನೀಯ ವ್ಯಕ್ತಿ ನನ್ನ ಬಟ್ಟೆಯನ್ನು ಬದಲಿಸುತ್ತಾ ಆ ಉಡಿಗೆಯನ್ನು ನನಗೆ ಉಡಿಸಿದರು. ಆ ಒಂದು ಸಾವಿರ ದಿರ್ಹಂ ನನ್ನ ಉಡಿಗೆಯ ಜೇಬಿನಲ್ಲಿ ಹಾಕಿದರು. ನಾನು ನನ್ನ ತಂದೆಯ ಬಳಿಗೆ ತಲುಪಿದಾಗ ನಾನು ನಡೆದದ್ದನ್ನೆಲ್ಲ ಅವರೊಡನೆ ಹೇಳಿದೆ. ಆಗನನ್ನ ತಂದೆ ನನ್ನೊಡನೆ ಹೇಳಿದರು: ನಿನ್ನೊಡನೆ ಈ ರೀತಿಯಲ್ಲಿ ಸದ್ವರ್ತನೆ ಮಾಡಿದ ವ್ಯಕ್ತಿ ಯಾರೆಂದು ನಿನಗೆ ಗೊತ್ತೆ? ನಾನು ಹೇಳಿದೆ: ನನಗೆ ಗೊತ್ತಿಲ್ಲ, ಅವರು ಮಸೀದಿಯಲ್ಲಿ ಮಲಗಿದ್ದರು. ನಾನು ಅವರಿಗಿಂತ ಸುಂದರವಾದ ವ್ಯಕ್ತಿಯನ್ನು ಜೀವಿತದಲ್ಲಿ ಯಾರನ್ನು ಕಂಡಿಲ್ಲ. ಆಗ ನನ್ನ ತಂದೆ ಹೇಳಿದರು: ಅವರು ಅಮೀರುಲ್ ಮೂಅ್‌ಮಿನೀನ್ ಉಸ್ಮಾನ್ ಬಿನ್ ಅಫ್ಫಾನ್(ರ) ಆಗಿರುವರು. (ಅಲ್‌ಬದಾಯ ವನ್ನಹಾಯ ಲಿಇಬ್ನೆ ಅಸೀರ್, ಸಂಪುಟ–4, ಭಾಗ–7, ಪುಟ–206–207, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಇಬ್ನು ಜರೀರ್ ವರದಿ ಮಾಡುತ್ತಾರೆ: ಹಝ್ರತ್ ಉಸ್ಮಾನ್(ರ) ಮಸೀದಿಯ ಕಡೆಗೆ ಹೋಗುತ್ತಿದ್ದಾಗ ಹಝ್ರತ್ ತಲ್‌ಹ ಅವರನ್ನು ಭೇಟಿಯಾದರು. ಹಝ್ರತ್ ತಲ್‌ಹ(ರ) ಹೇಳಿದರು: ನಿಮ್ಮಿಂದ ಸಾಲ ಪಡೆದಿದ್ದ 50 ಸಾವಿರ ದಿರ್ಹಂ ಈಗ ನನ್ನ ಬಳಿಯಿದೆ. ನೀವು ಅದನ್ನು ವಸೂಲು ಮಾಡಲು ಯಾವನಾದರೂ ವ್ಯಕ್ತಿಯನ್ನು ಕಳುಹಿಸಿರಿ. ಆಗ ಹಝ್ರತ್ ಉಸ್ಮಾನ್(ರ) ಅವರೊಡನೆ ಹೇಳಿದರು: ನಿಮ್ಮ ಶಿಷ್ಟತೆ ಮತ್ತು ಒಳ್ಳೆಯತನದ ಕಾರಣದಿಂದ ನಾನು ಅದನ್ನು ನಿಮಗೆ ಕೊಡುಗೆಯಾಗಿ ನೀಡುತ್ತೇನೆ. ಅದನ್ನು ನಾನು ಮರಳಿ ಪಡೆಯುವುದಿಲ್ಲ.

ಅಸ್‌ಅಮಿ ಹೇಳುತ್ತಾರೆ: ಖತನ್ ಬಿನ್ ಔಫ್ ಹಿಲಾಲಿಯನ್ನು ಇಬ್ನು ಆಮಿರ್ ಕರ್ಮಾನ್ ಎಂಬ ಪ್ರದೇಶದ ಗವರ್ನರ್ ಆಗಿ ಮಾಡಿದರು. ಅವರು 4 ಸಾವಿರ ಮುಸ್ಲಿಮರ ಸೈನ್ಯವನ್ನು ತೆಗೆದು ಹೊರಟರು. ಮಾರ್ಗದಲ್ಲಿ ಒಂದು ಕಣಿವೆ, ಮಳೆ ನೀರಿನ ಕಾರಣದಿಂದ ತುಂಬಿ ಹರಿಯುತ್ತಿತ್ತು. ಅವರ ರಸ್ತೆ ಬಂದಾಯಿತು. ಸಮಯಕ್ಕೆ ಸರಿಯಾಗಿ ತಲುಪಲು ಸಾಧ್ಯವಿಲ್ಲವೆಂಬ ಭಯ ಖತನ್‌ಗೆ ಉಂಟಾಯಿತು. ಅವರು ಹೀಗೆ ಘೋಷಿಸಿದರು: ಯಾರು ಈ ಕಣಿವೆಯನ್ನು ಈಜಿ ದಾಟುತ್ತಾರೋ ಅವರಿಗೆ ಒಂದು ಸಾವಿರ ದಿರ್ಹಂ ಕೊಡುಗೆಯಾಗಿ ಕೊಡಲಾಗುವುದು. ಹೀಗೆ ಜನರು ಈಜಿ ದಾಟಲು ತೊಡಗಿದರು. ಆ ಕಣಿವೆಯನ್ನು ಯಾರು ದಾಟಿದರೂ ಅವನಿಗೆ ಅವನ ಕೊಡುಗೆಯನ್ನು ಕೊಡಲು ಖತನ್ ಹೇಳುತ್ತಿದ್ದರು. ಹೀಗೆ ಪೂರ್ತಿ ಸೈನ್ಯ ಕಣಿವೆಯನ್ನು ದಾಟಿತು. ಹೀಗೆ ಅವರೆಲ್ಲರಿಗೂ 40 ಲಕ್ಷ ದಿರ್ಹಂ ಕೊಡಲಾಯಿತು. ಆದರೆ ಗವರ್ನರ್ ಇಬ್ನು ಆಮಿರ್ ಈ ಹಣವನ್ನು ಖತನ್‌ಗೆ ಕೊಡುವುದರಿಂದ ನಿರಾಕರಿಸಿದರು. ಈ ಸಂಗತಿಯನ್ನು ಹಝ್ರತ್ ಉಸ್ಮಾನ್‌ರಿಗೆ ಬರೆದು ತಿಳಿಸಿದರು. ಆಗ ಹಝ್ರತ್ ಉಸ್ಮಾನ್(ರ) ಹೇಳಿದರು: ಈ ಹಣವನ್ನು ಖತನಿಗೆ ಕೊಡಿರಿ. ಏಕೆಂದರೆ ಅವನಂತು ಅಲ್ಲಾಹನ ಮಾರ್ಗದಲ್ಲಿ ಮುಸ್ಲಿಮರ ಸಹಾಯವನ್ನು ಮಾಡಿದ್ದಾನೆ. ಹೀಗೆ ಕಣಿವೆಯನ್ನು ಈಜಿ ದಾಟಿದ ಕಾರಣದಿಂದ ಆ ದಿನ ಕೊಡುಗೆಯಾಗಿ ಕೊಡಲಾದ ಮೊಬಲಿಗೆ ಜವಾಯಿಝ್ ಎಂದು ಹೇಳಲಾಯಿತು. (ಅಲ್‌ಬದಾಯ ವನ್ನಹಾಯ ಲಿಇಬ್ನೆ ಅಸೀರ್ ಸಂಪುಟ–4, ಭಾಗ–7, ಪುಟ–208, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹಝ್ರತ್ ಉಸ್ಮಾನ್(ರ) ಒಂದು ಸಲ ರೋಗಿಯಾದಾಗ ಮುಂದಿನ ಖಲೀಫರನ್ನು ನಿಶ್ಚಯಿಸಲು ವಿನಂತಿಸಲಾಯಿತು. ಈ ಘಟನೆಯನ್ನು ಹಿಶಾಂ ತನ್ನ ತಂದೆಯಿಂದ ವರದಿ ಮಾಡಿರುವರು. ಅವರು ಹೇಳುತ್ತಾರೆ. ಮರ್‌ವಾನ್ ಬಿನ್ ಹಕಂ ನನ್ನೊಡನೆ ಹೇಳಿದರು: ಮೂಗಿನಿಂದ ರಕ್ತಸ್ರಾವದ ರೋಗ ಹರಡಿದಾಗ ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್‌ರಿಗೂ ಕಠಿಣವಾದ ರಕ್ತಸ್ರಾವ ಉಂಟಾಯಿತು. ಮೂಗಿನಿಂದ ರಕ್ತ ಬಂತು. ಎಲ್ಲಿಯ ವರೆಗೆ ಎಂದರೆ, ಈ ರೋಗ ಅವರನ್ನು ಹಜ್ಜ್ ಮಾಡುವುದರಿಂದ ತಡೆಯಿತು. ಆ ಸಮಯ ಖುರೈಶಿಯಿಂದ ಒಬ್ಬ ವ್ಯಕ್ತಿ ಅವರ ಬಳಿಗೆ ಬಂದರು. ಯಾರನ್ನಾದರೂ ಖಲೀಫರನ್ನಾಗಿ ಮಾಡಲು ಆ ವ್ಯಕ್ತಿ ವಿನಂತಿಸಿದರು. ನಿಮ್ಮ ಸ್ಥಿತಿ ಹದಗೆಡುತ್ತಿದೆ. ಆದರಿಂದ ಯಾರನ್ನಾದರೂ ಖಲೀಫರನ್ನಾಗಿ ಮಾಡಿರಿ ಎಂದು ಹೇಳಿದರು. ಜನರು ಹೀಗೆ ಮಾಡಲು ಹೇಳುತ್ತಿದ್ದಾರೆಯೇ ಎಂದು ಹಝ್ರತ್ ಉಸ್ಮಾನ್ ಆ ವ್ಯಕ್ತಿಯೊಡನೆ ಕೇಳಿದರು. ಹೌದೆಂದು ಆ ವ್ಯಕ್ತಿ ಹೇಳಿದರು. ಯಾರನ್ನು ಖಲೀಫರನ್ನಾಗಿ ಮಾಡಲು ಬಯಸುತ್ತಿದ್ದಾರೆ ಎಂದು ಹಝ್ರತ್ ಉಸ್ಮಾನ್ ಕೇಳಿದರು. ಆ ವ್ಯಕ್ತಿ ಮೌನವಾಗಿದ್ದರು. ಅಷ್ಟರಲ್ಲಿ ಮತ್ತೊಬ್ಬ ವ್ಯಕ್ತಿ ಅವರ ಬಳಿಗೆ ಬಂದರು. ಅವರು ಹಾರಿಸ್ ಆಗಿದ್ದರು ಎಂದು ನನಗೆ ತೋರುತ್ತದೆ. ಖಲೀಫರನ್ನು ನಿಶ್ಚಯಿಸಲು ಆ ವ್ಯಕ್ತಿ ಸಹ ಹೇಳಿದರು. ಜನರು ಹೀಗೆ ಮಾಡಲು ಹೇಳುತ್ತಿದ್ದಾರೆಯೇ ಎಂದು ಹಝ್ರತ್ ಉಸ್ಮಾನ್ ಆ ವ್ಯಕ್ತಿಯೊಡನೆ ಕೇಳಿದರು. ಹೌದೆಂದು ಆ ವ್ಯಕ್ತಿ ಹೇಳಿದರು. ಯಾರನ್ನು ಖಲೀಫರನ್ನಾಗಿ ಮಾಡಲು ಬಯಸುತ್ತಿದ್ದಾರೆ ಎಂದು ಹಝ್ರತ್ ಉಸ್ಮಾನ್ ಕೇಳಿದರು. ಆ ವ್ಯಕ್ತಿ ಸಹ ಸುಮ್ಮನಿದ್ದರು. ಬಹುಶಃ ಝುಬೇರ್‌ರನ್ನು ನಿಶ್ಚಯಿಸಲು ಜನರು ಹೇಳುತ್ತಿರಬಹುದು ಎಂದು ಹಝ್ರತ್ ಉಸ್ಮಾನ್ ಹೇಳಿದರು. ಹೌದೆಂದು ಅವರು ಹೇಳಿದರು. ಹಝ್ರತ್ ಉಸ್ಮಾನ್(ರ) ಹೇಳಿದರು: ನನ್ನ ಜೀವ ಯಾರ ಕೈಯಲ್ಲಿ ಇದೆಯೋ ಆ ಅಲ್ಲಾಹನ ಆಣೆ, ನಿಶ್ಚಯವಾಗಿಯೂ ಅವರು ಜನರಲ್ಲಿ ಉತ್ತಮರು, ಹಝ್ರತ್ ಪೈಗಂಬರ್‌ರಿಗೂ ಅವರು ಅತ್ಯಂತ ಪ್ರಿಯರಾಗಿದ್ದರು. (ಸಹೀಹ್ ಅಲ್‌ಬುಖಾರಿ, ಕಿತಾಬ್ ಫಝಾಎಲ್ ಅಸ್ಹಾಬನ್ನಬಿ, ಹದೀಸ್–3717)

ಅವತೀರ್ಣವಾಗುತ್ತಿದ್ದ ಪವಿತ್ರ ಖುರ್‌ಆನಿನ ದಿವ್ಯವಾಣಿಗಳನ್ನು ಬರೆಯುವ ಸೌಭಾಗ್ಯವೂ ಅವರಿಗೆ ಲಭಿಸಿತ್ತು. ಸೂರಃ ಮುಝ್ಝಮ್ಮಿಲ್‌ನ ಅವತೀರ್ಣದ ಸಂದರ್ಭದಲ್ಲಿ ಹಝ್ರತ್ ಉಸ್ಮಾನ್‌ರಿಗೆ ದಿವ್ಯವಾಣಿಗಳನ್ನು ಬರೆಯುವ ಸೌಭಾಗ್ಯವೂ ಅವರಿಗೆ ಲಭಿಸಿತ್ತು. ಉಮ್ಮೇ ಕುಲ್ಸೂಮ್ ಬಿನ್ ಸಮಾಮ ಹೇಳುತ್ತಾರೆ: ಹಝ್ರತ್ ಉಸ್ಮಾನ್‌ರ ಬಗ್ಗೆ ನಾವು ನಿಮ್ಮೊಡನೆ

ಕೇಳುತ್ತೇವೆ. ಏಕೆಂದರೆ ಜನರು ಅವರ ಬಗ್ಗೆ ನಮ್ಮೊಡನೆ ಬಹಳವಾಗಿ ಕೇಳುತ್ತಿರುತ್ತಾರೆ. ಆಗ ಹಝ್ರತ್ ಆಯಿಶ(ರ) ಹೇಳಿದರು: ತೀವ್ರ ಸೆಖೆಯ ಒಂದು ರಾತ್ರಿಯಲ್ಲಿ, ಹಝ್ರತ್ ಜಿಬ್ರೀಲ್(ಅ) ದಿವ್ಯವಾಣಿ ಅವತೀರ್ಣಗೊಳಿಸುತ್ತಿದ್ದ ವೇಳೆ, ಹಝ್ರತ್ ಪೈಗಂಬರರೊಂದಿಗೆ(ಸ) ಹಝ್ರತ್ ಉಸ್ಮಾನ್(ರ) ಇರುವುದಾಗಿ ನಾನು ಕಂಡೆ. ಹಝ್ರತ್ ಪೈಗಂಬರರ(ಸ) ಮೇಲೆ ದಿವ್ಯವಾಣಿ ಅವತೀರ್ಣವಾಗುತ್ತಿದ್ದ ವೇಳೆ ಅವರ ಮೇಲೆ ಕಠಿಣವಾದ ಭಾರ ಉಂಟಾಗುತ್ತಿತ್ತು. ಅಲ್ಲಾಹನು ಹೇಳುತ್ತಾನೆ: **ಇನ್ನಾ ಸನುಲ್‌ಖಿ ಅಲೈಕ ಖೌಲನ್ ಸಕೀಲ**. ಎಂದರೆ, ನಿಶ್ಚಯವಾಗಿಯೂ ನಾವು ನಿನ್ನ ಮೇಲೆ ಭಾರವಾದ ವಚನಗಳನ್ನು ಅವತೀರ್ಣಗೊಳಿಸುತ್ತೇವೆ. ಹಝ್ರತ್ ಉಸ್ಮಾನ್(ರ) ಹಝ್ರತ್ ಪೈಗಂಬರರ(ಸ) ಮುಂದೆ ಕುಳಿತುಕೊಂಡು ಬರೆಯುತ್ತಾ ಹೋಗುತ್ತಿದ್ದರು. ಹೇ ಉಸ್ಮಾನ್ ಬರೆ ಎಂದು ಹಝ್ರತ್ ಪೈಗಂಬರ್(ಸ) ಹೇಳುತ್ತಿದ್ದರು. ಹಝ್ರತ್ ಆಯಿಶ(ರ) ಹೇಳುತ್ತಾರೆ: ಹಝ್ರತ್ ಪೈಗಂಬರರೊಂದಿಗೆ(ಸ) ಇಂತಹ ಸಾಮೀಪ್ಯವನ್ನು ಅಲ್ಲಾಹನು ಅತ್ಯಂತ ಗೌರವಾನ್ವಿತ ಮತ್ತು ಆದರಣೀಯ ವ್ಯಕ್ತಿಗೆ ಮಾತ್ರ ದಯಪಾಲಿಸುತ್ತಾನೆ. (ಕನ್‌ಝುಲ್ ಅಮಾಲ್, ಸಂಪುಟ–7, ಭಾಗ–13, ಪುಟ–23, ಕಿತಾಬ್ ಫಝಾಎಲುಸ್ಸಹಾಬ, ಹದೀಸ್–36217, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2004)

ಹಝ್ರತ್ ಅಬೂಬಕರರ ಕಾಲದಲ್ಲಿ, ಪವಿತ್ರ ಖುರ್‌ಆನಿನ ಲಿಖಿತ ಪುಟಗಳನ್ನು ಒಟ್ಟುಸೇರಿಸಲಾಗಿತ್ತು. ಅವುಗಳು ಹಝ್ರತ್ ಉಮರರ ಖಿಲಾಫತ್ ಕಾಲದ ನಂತರ ಹಝ್ರತ್ ಹಫ್ಸ ಬಿನ್ತ್ ಉಮರರ ಬಳಿಯಿತ್ತು. ಹಝ್ರತ್ ಉಸ್ಮಾನ್‌ರ ಖಿಲಾಫತ್ ಕಾಲ ಬಂದಾಗ ಅವರ ಬಳಿಗೆ ಈ ಪ್ರತಿಗಳು ತಲುಪಿದ ಬಗ್ಗೆ ಹೀಗೆ ವರದಿಯಾಗಿದೆ. ಹಝ್ರತ್ ಹುಧೈಫ ಬಿನ್ ಯಮಾನ್ ವರದಿ ಮಾಡುತ್ತಾರೆ: ಅವರು ಇರಾಕಿನವರೊಂದಿಗೆ ಸೇರಿಕೊಂಡು ಆರ್ಮೇನಿಯ ವಿಜಯಕ್ಕಾಗಿ ಮತ್ತು ಆಧರ್ ಬಾಇಜಾನ್‌ಗಾಗಿ ಸಿರಿಯದವರೊಂದಿಗೆ ಯುದ್ಧ ಮಾಡುತ್ತಿದ್ದರು. ಅಲ್ಲಿಂದ ಮರಳಿಬಂದು ಹಝ್ರತ್ ಉಸ್ಮಾನ್‌ರ ಸನ್ನಿಧಿಯಲ್ಲಿ ಹಾಜರಾದರು. ಪವಿತ್ರ ಖುರ್‌ಆನಿನ ಪಾರಾಯಣ ಶೈಲಿಯಲ್ಲಿ ಭಿನ್ನಾಭಿಪ್ರಾಯ ಉಂಟಾಗುವುದೆಂಬ ಭಯ ಹಝ್ರತ್ ಹುಧೈಫರಿಗೆ ಉಂಟಾಯಿತು. ಅವರು ಹಝ್ರತ್ ಉಸ್ಮಾನ್‌ರೊಡನೆ ಹೇಳಿದರು: ಹೇ ಅಮೀರಲ್ ಮೂಅ್‌ಮಿನೀನ್, ಈ ಉಮ್ಮತಿನ ಬಗ್ಗೆ ಕಾಳಜಿವಹಿಸಿರಿ. ಯಹೂದಿ ಮತ್ತು ಕ್ರೈಸ್ತರ ಹಾಗೆ ಅವರು ಅಲ್ಲಾಹನ ಗ್ರಂಥದ ಬಗ್ಗೆ ಭಿನ್ನಾಭಿಪ್ರಾಯದಲ್ಲಿ ಸಿಲುಕದಂತೆ ನೋಡಿರಿ. ಹೀಗೆ ಪವಿತ್ರ ಖುರ್‌ಆನಿನ ಹಸ್ತಪ್ರತಿಯ ನಕಲು ಪ್ರತಿಗಳನ್ನು ಮಾಡಿಕೊಂಡು ಮರಳಿಕೊಡುವುದಾಗಿ ಹೇಳಿಕೊಂಡು ಅವರ ಕೈಯಲ್ಲಿರುವ ಹಸ್ತಪ್ರತಿಯನ್ನು ಕಳುಹಿಸಲು ಹಝ್ರತ್ ಉಸ್ಮಾನ್(ರ) ಹಝ್ರತ್ ಹಫ್ಸರಿಗೆ ಸಂದೇಶ ಕಳುಹಿಸಿದರು. ಹೀಗೆ ಹಫ್ಸರಿಂದ ಆ ಲಿಖಿತ ಪುಟಗಳನ್ನು ಪಡೆದುಕೊಂಡು ಹಝ್ರತ್ ಝೈದ್ ಬಿನ್ ಸಾಬಿತ್, ಹಝ್ರತ್ ಅಬ್ದುಲ್ಲಾಹ್ ಬಿನ್ ಝುಬೇರ್, ಹಝ್ರತ್ ಸಈದ್ ಬಿನ್ ಆಸ್ ಮತ್ತು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಹಾರಿಸ್ ಬಿನ್ ಹಿಶಾಮ್ ಇವರೆಲ್ಲರಿಗೂ ಆಜ್ಞೆ ನೀಡಿಕೊಂಡು ಆ ಪುಟಗಳ ನಕಲು ಪ್ರತಿಗಳನ್ನು ತಯಾರು ಮಾಡಲು ಅವರೊಡನೆ ಹೇಳಿದರು. ಕೊನೆಗೆ ಪ್ರಸ್ತಾಪಿಸಲಾದ ಖುರೈಶಿಗಳಾದ ಮೂವರು ಸಹಾಬರೊಡನೆ ಹೇಳಿದರು: ನಿಮ್ಮ ಮತ್ತು ಝೈದ್‌ನ ಬಳಿಯಲ್ಲಿರುವ ಹಸ್ತಪ್ರತಿಯ ಬಗ್ಗೆ ಭಿನ್ನಾಭಿಪ್ರಾಯ ಉಂಟಾದರೆ ಅದನ್ನು ಖುರೈಶಿಗಳ ಭಾಷಾ ಶೈಲಿಯ ಪ್ರಕಾರ ಬರೆಯಿರಿ. ಏಕೆಂದರೆ ಪವಿತ್ರ ಖುರ್‌ಆನ್ ಖುರೈಶಿಗಳ ಭಾಷೆಯಲ್ಲಿ ಅವತೀರ್ಣಗೊಂಡಿದೆ. ಹೀಗೆ ಆ ಸಹಾಬರು ಈ ಕೆಲಸವನ್ನು ಮಾಡಿದರು. ನಕಲು ಪ್ರತಿಗಳು ತಯಾರಾದಾಗ, ಅಸಲು ಪ್ರತಿಯನ್ನು ಹಝ್ರತ್ ಹಫ್ಸರಿಗೆ ಹಝ್ರತ್ ಉಸ್ಮಾನ್ ಮರಳಿಸಿದರು. ಹೊಸದಾಗಿ ತಯಾರಿಸಲಾದ ನಕಲು ಪ್ರತಿಗಳನ್ನು ಇಸ್ಲಾಮೀ ರಾಷ್ಟ್ರಗಳಿಗೆ ಕಳುಹಿಸಿದರು. ಇದಲ್ಲದೇ ಇದ್ದ ಎಲ್ಲ ಹಸ್ತಪ್ರತಿಗಳನ್ನು ಸುಟ್ಟು ನಾಶಮಾಡಲಾಯಿತು. (ಸಹೀಹ್ ಅಲ್‌ಬುಖಾರಿ ಫಝಾಎಲುಲ್ ಖುರ್‌ಆನ್ ಹದೀಸ್–4986,4987)

ಅಲ್ಲಾಮ ಬಿನ್ ಅತ್ತೀನ್ ಹೇಳುತ್ತಾರೆ: ಹಝ್ರತ್ ಅಬೂಬಕರ್ ಮತ್ತು ಹಝ್ರತ್ ಉಸ್ಮಾನ್‌ರ ಪವಿತ್ರ ಖುರ್‌ಆನಿನ ಸಂಕಲನದ ನಡುವಿನ ವ್ಯತ್ಯಾಸವೇನೆಂದರೆ, ಪವಿತ್ರ ಖುರ್‌ಆನನ್ನು ಕಂಠಪಾಠ ಮಾಡಿದ್ದ ಹಾಫಿಝ್‌ಗಳ ಮರಣದ ನಂತರ ಪವಿತ್ರ ಖುರ್‌ಆನಿನ ಸ್ವಲ್ಪ ಭಾಗ ನಷ್ಟವಾಗುವುದೋ ಎಂಬ ಭಯದಿಂದ ಹಝ್ರತ್ ಅಬೂಬಕರ್(ರ) ಅದನ್ನು ಸಂಕಲಿಸಿದರು. ಹೀಗೆ ಪವಿತ್ರ ಖುರ್‌ಆನನ್ನು ಹಝ್ರತ್ ಪೈಗಂಬರ್(ಸ) ಹಾಫಿಝ್‌ರಿಗೆ ಕಂಠಪಾಠ ಮಾಡಿಸಿದ ಕ್ರಮದಲ್ಲೇ ಅದರ ವಚನಗಳನ್ನು ಒಟ್ಟುಗೂಡಿಸಿದರು. ಹಝ್ರತ್ ಉಸ್ಮಾನ್ ಪವಿತ್ರ ಖುರ್‌ಆನನ್ನು ಒಟ್ಟುಗೂಡಿಸಿದ್ದ ಘಟನೆಯೇನೆಂದರೆ, ಪಠನದಲ್ಲಿ ಬಹಳಷ್ಟು ಭಿನ್ನಾಭಿಪ್ರಾಯವುಂಟಾದಾಗ, ಎಲ್ಲಿಯ ವರೆಗೆಂದರೆ ಜನರು ತಮ್ಮ ಶೈಲಿ ಮತ್ತು ತಮ್ಮ ಭಾಷೆಯ ಪ್ರಕಾರ ಪವಿತ್ರ ಖುರ್‌ಆನನ್ನು ಓದಲು ಶುರುಮಾಡಿದಾಗ, ಮಾತ್ರವಲ್ಲ ಒಬ್ಬರು ಮತ್ತೊಬ್ಬರ ಪಠನ ರೀತಿಯನ್ನು ತಪ್ಪೆಂದು ಹೇಳಲು ಶುರುಮಾಡಿದಾಗ, ಈ ವಿಷಯ ತೀವ್ರತೆಗೆ ತಲುಪುವುದೋ ಎಂಬ ಭಯದಿಂದ ಹಝ್ರತ್ ಅಬೂಬಕರ್ ತಯಾರಿಸಿದ್ದ ಹಸ್ತಪ್ರತಿಗಳನ್ನು ಒಂದು ಗ್ರಂಥ ರೂಪದಲ್ಲಿ ಅಧ್ಯಾಯಗಳ ಕ್ರಮ ಪ್ರಕಾರ ಒಟ್ಟುಸೇರಿಸಿದರು ಮತ್ತು ಕೇವಲ ಖುರೈಶಿಗಳ ಭಾಷೆಯನ್ನು ಗಮನದಲ್ಲಿಟ್ಟುಕೊಂಡು ತಯಾರಿಸಿದರು. ಪವಿತ್ರ ಖುರ್‌ಆನಿನ ಅವತೀರ್ಣ ಖುರೈಶಿಗಳ ಭಾಷೆಯಲ್ಲಿ ಆಗಿತ್ತು. ಆರಂಭದಲ್ಲಿ ಸೌಲಭ್ಯಕ್ಕಾಗಿ ಅರೇಬಿಯದ ಇತರ ಗೋತ್ರಗಳ ಪ್ರಾದೇಶಿಕ ಅರಬಿ ಶೈಲಿಯಲ್ಲಿ ತಿಲಾವತ್ ಮಾಡುವ ಅನುಮತಿ ಕೊಡಲಾಗಿತ್ತು. ಆದರೆ ಹೀಗೆ ಮಾಡುವ ಆವಶ್ಯಕತೆಯಿಲ್ಲವೆಂದು ತೋರಿದಾಗ ಒಂದೇ ಭಾಷೆಯ ಪಠನ ರೀತಿಗೆ ಅದನ್ನು ಪರಿಮಿತಗೊಳಿಸಲು ಆಜ್ಞಾಪಿಸಿದರು. ಅಲ್ಲಾಮ ಖುರ್‌ತುಬಿ ಹೇಳುತ್ತಾರೆ: ಹಝ್ರತ್ ಉಸ್ಮಾನ್‌ರ ಮುಂಚೆ ಈ ಕೆಲಸವನ್ನು ಹಝ್ರತ್ ಅಬೂಬಕರ್ ಮಾಡಿರುವಾಗ ಜನರನ್ನು ತನ್ನ ಬಳಿಯಿದ್ದ ಪವಿತ್ರ ಖುರ್‌ಆನಿನ ಪ್ರತಿಯ ಪ್ರಕಾರ ಒಂದಾಗಿಸಲು ಏಕೆ ಹಝ್ರತ್ ಉಸ್ಮಾನ್(ರ) ಪ್ರಯತ್ನಿಸಿದರು ಎಂಬ ಸವಾಲಿಗೆ ಉತ್ತರವೇನೆಂದರೆ, ಪವಿತ್ರ ಖುರ್‌ಆನಿನ ಕ್ರಮದಲ್ಲಿ ಬದಲಾವಣೆ ಮಾಡುವ ಉದ್ದೇಶವನ್ನು ಹಝ್ರತ್ ಉಸ್ಮಾನ್(ರ) ಹೊಂದಿರಲಿಲ್ಲ. ಉಮ್ಮುಲ್ ಮೂಮಿನೀನ್ ಹಝ್ರತ್ ಹಫ್ಸರ ಬಳಿಯಿದ್ದ ಹಸ್ತಪ್ರತಿಯನ್ನು ನಕಲು ಮಾಡಿಕೊಂಡು ಮರಳಿ ಕೊಡುವುದಾಗಿ ಹೇಳಿಕೊಂಡು ಹಝ್ರತ್ ಉಸ್ಮಾನ್(ರ) ಉಮ್ಮುಲ್ ಮೂಮಿನೀನ್ ಹಝ್ರತ್ ಹಫ್ಸರೊಡನೆ ಅವರ ಬಳಿಯಿದ್ದ ಪವಿತ್ರ ಖುರ್‌ಆನಿನ ಪ್ರತಿಯನ್ನು ಕಳುಹಿಸಲು ಹೇಳಿದರು. ಪವಿತ್ರ ಖುರ್‌ಆನಿನ ಪಠನ ರೀತಿಯ ಬಗ್ಗೆ ಜನರಲ್ಲಿ ಭಿನ್ನಾಭಿಪ್ರಾಯವುಂಟಾಗಿತ್ತು. ಆದ್ದರಿಂದ ಹಝ್ರತ್ ಉಸ್ಮಾನ್(ರ) ಈ ಹೆಜ್ಜೆಯನ್ನು ಎತ್ತಿದ್ದರು. ಏಕೆಂದರೆ ಸಹಾಬರು ಹಲವು ಪಟ್ಟಣಗಳಲ್ಲಿ ಹರಡಿದ್ದರು ಮತ್ತು ಪಠನದ ಭಿನ್ನಾಭಿಪ್ರಾಯಗಳು ತೀವ್ರವಾಗಿದ್ದುವು. ಸಿರಿಯದ ಮತ್ತು ಇರಾಕಿನ ಜನರ ನಡುವೆ ಬಹಳ ಭಿನ್ನಾಭಿಪ್ರಾಯವುಂಟಾಗಿತ್ತು. ಅದರ ಬಗ್ಗೆ ಹಝ್ರತ್ ಹುಧೈಫ ವಿವರಿಸಿದ್ದಾರೆ. (ಸೀರತ್ ಅಮೀರುಲ್ ಮುಮಿನೀನ್ ಉಸ್ಮಾನ್ ಬಿನ್ ಅಫ್ಫಾನ್, ಪುಟ–231–232, ದಾರುಲ್ ಮಅ್‌ರಿಫ ಲೆಬನಾನ್ 2006)

ಹಝ್ರತ್ ಮುಸ್ಲಿಹ್ ಮೌಊದ್(ರ) **"ಸನುಖ್‌ರಿಉಕ ಫಲಾ ತನ್ಸಾ"** ಎಂಬ ವಚನವನ್ನು ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ: ಈ ಆಯತ್ತಿನ ಅರ್ಥವೇನೆಂದರೆ, ಖಿಯಾಮತ್ ತನಕ ಮರೆತು ಹೋಗದ ರೀತಿಯಲ್ಲಿ ನಾವು ನಿಮಗೆ ಈ ವಚನಗಳನ್ನು ಕಲಿಸುವೆವು. ಮಾತ್ರವಲ್ಲ, ಈಗ ಇರುವ ರೀತಿಯಲ್ಲೇ ಅದು ಸುರಕ್ಷಿತವಾಗಿರುವುದು ಎಂದಾಗಿದೆ. ಈ ವಾದ ಈಡೇರಿದೆ ಎಂಬುದಕ್ಕೆ ಪುರಾವೆಯೇನೆಂದರೆ, ಹಝ್ರತ್ ಪೈಗಂಬರ್(ಸ) ಪವಿತ್ರ ಖುರ್‌ಆನನ್ನು ಪ್ರಸ್ತುತಪಡಿಸಿದ ರೀತಿಯಲ್ಲೇ ಇಂದು ಸಹ ಅದು ಸಂರಕ್ಷಿಸಲ್ಪಟ್ಟಿದೆ ಎಂದು ಇಸ್ಲಾಮಿನ ಕಠಿಣ ವಿರೋಧಿಗಳು ಕೂಡ ಇಂದು ಬಹಿರಂಗವಾಗಿ ಸಮ್ಮತಿಸುತ್ತಾರೆ. ಯಾವ ರೂಪದಲ್ಲಿ ಧರ್ಮಸ್ಥಾಪಕರು ಗ್ರಂಥಗಳನ್ನು ಪ್ರಸ್ತುತಪಡಿಸಿದ ಅದೇ ರೂಪದಲ್ಲಿ ಇಂದು ಕೂಡ ಲೋಕದಲ್ಲಿ ಅದು ಇದೆ ಎಂದು ಪವಿತ್ರ ಖುರ್‌ಆನ್ ಅಲ್ಲದೇ ಬೇರೆ ಯಾವುದೇ ಗ್ರಂಥದ ಬಗ್ಗೆ ಹೇಳಲು ಸಾಧ್ಯವಲ್ಲವೆಂದು ನೋಲ್ಡೆ, ಸ್ಪ್ರಿಂಗರ್ ಮತ್ತು ವಿಲಿಯಂ ಮ್ಯೂರ್ ಮುಂತಾದವರೆಲ್ಲರೂ ಸಮ್ಮತಿಸಿದ್ದಾರೆ. ಯಾವ ರೂಪದಲ್ಲಿ ಹಝ್ರತ್ ಪೈಗಂಬರ್(ಸ) ಅವರ ಸಹಾಬರಿಗೆ ಈ ಗ್ರಂಥವನ್ನು ನೀಡಿದ್ದರೋ ಅದೇ ರೀತಿಯಲ್ಲಿ ಈಗಲೂ ಅದು ಸಂರಕ್ಷಿಸಲ್ಪಟ್ಟಿದೆ ಎಂದು ಕೇವಲ ಪವಿತ್ರ ಖುರ್‌ಆನಿನ ಬಗ್ಗೆ ಹೇಳಬಹುದಾಗಿದೆ. ಪವಿತ್ರ ಖುರ್‌ಆನ್ ಅಲ್ಲಾಹನ ಕಡೆಯಿಂದ ಅವತೀರ್ಣವಾಗಿತ್ತು ಎಂದು ಈ ಜನರು ಸಮ್ಮತಿಸದ ಕಾರಣ ಮತ್ತು ಹಝ್ರತ್ ಪೈಗಂಬರ್(ಸ) ಸ್ವತಃ ಈ ಗ್ರಂಥವನ್ನು ತಯಾರಿಸಿದ್ದಾರೆ ಎಂದು ಹೇಳುವ ಕಾರಣದಿಂದ ಅವರು ಈ ಗ್ರಂಥ ಯಾವ ರೀತಿಯಲ್ಲಿ ಅವತೀರ್ಣವಾಯಿತೋ ಅದೇ ರೀತಿಯಲ್ಲಿ ಸುರಕ್ಷಿತವಾಗಿದೆ ಎಂದು ಹೇಳುವುದಿಲ್ಲ. ಬದಲಿಗೆ ಮುಹಮ್ಮದ್(ಸ) ಈ ಗ್ರಂಥವನ್ನು ಪ್ರಸ್ತುತಪಡಿಸಿದ ರೀತಿಯಲ್ಲಿ ಈಗಲೂ ಲೋಕದಲ್ಲಿ ಇದೆ ಎಂದು ಹೇಳುತ್ತಾರೆ. ಸರ್ ವಿಲಿಯಂ ಮ್ಯೂರ್ ತನ್ನ ಪುಸ್ತಕವಾದ ದಿ ಖುರ್‌ಆನ್' ನಲ್ಲಿ ಬರೆಯುತ್ತಾರೆ: ನಾವು ಇಂದು ಓದುತ್ತಿರುವ ಖುರ್‌ಆನ್ ಪದಾನುಪದ ಪೈಗಂಬರ್(ಸ) ಜನರಿಗೆ ಓದಿ ಹೇಳಿದ್ದ ಖುರ್‌ಆನೇ ಆಗಿದೆ ಎಂದು ಈ ಎಲ್ಲ ಪುರಾವೆಗಳು ಸಾಬೀತುಪಡಿಸುತ್ತಿವೆ. ವಿಲಿಯಂ ಮ್ಯೂರ್ ತನ್ನ ಪುಸ್ತಕವಾದ ಲೈಫ್ ಆಫ್ ಮುಹಮ್ಮದ್‌ನಲ್ಲಿ ಬರೆಯುತ್ತಾರೆ: ನಮ್ಮ ಕೈಯಲ್ಲಿರುವ ಖುರ್‌ಆನ್ ಮುಹಮ್ಮದ್(ಸ) ತನ್ನ ಕಾಲದಲ್ಲಿ ಸ್ವಂತವಾಗಿ ಮಾಡಿದ್ದರು ಮತ್ತು ಕೆಲವು ಬಾರಿ ಅದರಲ್ಲಿ ಸ್ವತಃವೇ ಕೆಲವು ಬದಲಾವಣೆಗಳನ್ನು ಮಾಡಿರಲೂ ಬಹುದು. ಆದರೆ ನಮ್ಮ ಬಳಿಯಲ್ಲಿರುವುದು ಮುಹಮ್ಮದ್(ಸ) ಪ್ರಸ್ತುತಪಡಿಸಿದ ಅದೇ ಖುರ್‌ಆನಿನ ನಕಲು ಪ್ರತಿಯಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ಅದೇ ರೀತಿಯಲ್ಲಿ ಬರೆಯುತ್ತಾರೆ: ಪವಿತ್ರ ಖುರ್‌ಆನಿನ ಪ್ರತಿಯೊಂದು ವಚನಗಳು ಅಸಲಿಯಾದುದಾಗಿದೆ ಮತ್ತು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬದಲಾಗದ ಗ್ರಂಥವಾಗಿದೆ.

ಅನಂತರ ಜರ್ಮನಿಯ ನೋಲ್ಡೆ ಬರೆಯುತ್ತಾರೆ: ಬರಹದ ರೀತಿಯಲ್ಲಿ ಮಾಮೂಲಿಯಾದ ತಪ್ಪುಗಳು ಇರಬಹುದು. ಆದರೆ ಉಸ್ಮಾನ್ ಲೋಕದ

ಮುಂದೆ ಇರಿಸಿದ ಪವಿತ್ರ ಖುರ್‌ಆನಿನ ವಿಷಯ ಮುಹಮ್ಮದ್(ಸ) ಮುಂದಿರಿಸಿದ್ದ ಅದೇ ಆಗಿದೆ. ಇದರ ಕ್ರಮ ವಿಸ್ಮಯಕರವಾದುದಾಗಿದೆ. ಪವಿತ್ರ ಖುರ್‌ಆನಿನಲ್ಲಿ ನಂತರ ಕಾಲದಲ್ಲಿ ಬದಲಾವಣೆಗಳು ಆಗಿವೆ ಎಂದು ಸಾಬೀತುಪಡಿಸಲು ಯುರೋಪಿಯನ್ ಪಂಡಿತರು ನಡೆಸಿದ್ದ ಪ್ರಯತ್ನಗಳು ವಿಫಲವಾಗಿವೆ.

ಒಟ್ಟಿನಲ್ಲಿ ಪವಿತ್ರ ಖುರ್‌ಆನಿನ ಬಾಹ್ಯವಾದ ಸಂರಕ್ಷಣೆಯಲ್ಲಿ ಯಾವುದೇ ಸಂಶಯಕ್ಕೆ ಎಡೆಯಿಲ್ಲವೆಂದು ಯೂರೋಪಿನ ಲೇಖಕರು ಸಮ್ಮತಿಸಿರುವರು. ಪದಾನುಪದ ಪ್ರತಿ ಅಕ್ಷರ ಮುಹಮ್ಮದ್(ಸ) ಜನರಿಗೆ ಓದಿಹೇಳಿದ ಅದೇ ಆಗಿದೆ ಎಂದು ಅವರು ಒಪ್ಪುತ್ತಾರೆ. (ತಫ್ಸೀರೆ ಕಬೀರ್ ಸಂಪುಟ–8, ಪುಟ–421–422)

ಹಝ್ರ‌ತ್ ಖಲೀಫತುಲ್ ಮಸೀಹ್ ಅವ್ವಲ್(ರ) ಹೇಳುತ್ತಾರೆ: ಹಝ್ರ‌ತ್ ಉಸ್ಮಾನ್(ರ) ಪವಿತ್ರ ಖುರ್‌ಆನನ್ನು ಒಟ್ಟುಗೂಡಿಸಿಕೊಂಡು ಸಂಕಲಿಸಿದರು ಎಂದು ಹೇಳಲಾಗುತ್ತದೆ. ಆದರೆ ಇದು ಸರಿಯಲ್ಲ. ಕೇವಲ ಉಸ್ಮಾನನ ಹೆಸರಿನೊಂದಿಗೆ ಅದನ್ನು ಸೇರಿಸಿ ಹೇಳಲಾಗುತ್ತದೆ. ಖುರ್‌ಆನನ್ನು ಪ್ರಕಾಶನ ಮಾಡಿದ ಮತ್ತು ಪ್ರಚಾರ ಮಾಡಿದ (ಹರಡಿದ) ವ್ಯಕ್ತಿಯೆಂದು ಅವರನ್ನು ಕರೆಯುವುದಾದರೆ ಅದು ಸ್ವಲ್ಪ ಮಟ್ಟಿಗೆ ಸರಿಯೆಂದು ಹೇಳಬಹುದು. ಅವರ ಕಾಲದಲ್ಲಿ ಇಸ್ಲಾಂ ದೂರ ದೂರಕ್ಕೆ ಹರಡಿತ್ತು. ಆದ್ದರಿಂದ ಅವರು ಕೆಲವು ಪ್ರತಿಗಳನ್ನು ನಕಲು ಮಾಡಿಸಿಕೊಂಡು ಮಕ್ಕ, ಮದೀನ, ಸಿರಿಯ, ಬಸ್ರ, ಕೂಫ ಮತ್ತು ಇತರ ಪಟ್ಟಣಗಳಿಗೆ ಕಳುಹಿಸಿದ್ದರು. ಅದರ ಸಂಗ್ರಹ ಮತ್ತು ಸಂಕಲನ ಅಲ್ಲಾಹನು ಬಯಸಿದ ಕ್ರಮದಲ್ಲೇ ಹಝ್ರ‌ತ್ ಪೈಗಂಬರ್(ಸ) ಸ್ವತಃ ಮಾಡಿದ್ದರು. ಶ್ರೇಷ್ಠವಾದ ಆ ಕ್ರಮದಲ್ಲೇ ನಮ್ಮ ತನಕ ಅದು ತಲುಪಿದೆ. ಇದನ್ನು ಓದುವುದು ಮತ್ತು ಒಟ್ಟುಸೇರಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. (ಹಖಾಎಖಿಲ್ ಫುರ್‌ಖಾನ್, ಸಂಪುಟ–4, ಪುಟ–272)

ಹಝ್ರ‌ತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರ‌ತ್ ಉಸ್ಮಾನ್‌ರ ಕಾಲದಲ್ಲಿ ಮಕ್ಕದವರು ಮಕ್ಕದಲ್ಲಿ, ಮದೀನದವರು ಮದೀನದಲ್ಲಿ, ನಜದಿನವರು ನಜದಿನಲ್ಲಿ, ತಾಇಫ್‌ನವರು ತಾಇಫ್‌ನಲ್ಲಿ, ಯಮನಿನವರು ಯಮನಿನಲ್ಲಿ ಎಂಬ ರೀತಿಯಲ್ಲಿ ಇದ್ದಿರಲಿಲ್ಲ ಪರಸ್ಪರರ ಭಾಷೆಗಳನ್ನು ಅರಿಯದೆಯೂ ಇರಲಿಲ್ಲ. ಹಝ್ರ‌ತ್ ಉಸ್ಮಾನ್‌ರ(ರ) ಕಾಲದಲ್ಲಿ ಮದೀನವೂ ಬಹಳ ದೀರ್ಘಕಾಲದಿಂದ ಆಡಳಿತ ಕೇಂದ್ರವಾದ ಕಾರಣದಿಂದ ಎಲ್ಲ ಸಮುದಾಯಗಳು ಒಂದಾಗಿದ್ದುವು. ಆ ಸಮಯದಲ್ಲಿ ಮದೀನದವರು ಅಧಿಕಾರಿಗಳಾಗಿದ್ದರು. ಅವರಲ್ಲಿ ಬಹುಭಾಗ ಮುಹಾಜಿರರಾಗಿದ್ದರು. ಮದೀನ ನಿವಾಸಿಗಳು ಸಹ ಮಕ್ಕಾ ನಿವಾಸಿಗಳ ಸಹವಾಸದ ಕಾರಣದಿಂದ ಹಿಜಾಝಿ ಅರಬಿಯನ್ನು ಕಲಿತಿದ್ದರು. ಮದೀನದವರ ಕಡೆಯಿಂದ ಕಾನೂನು ಜಾರಿಯಾಗುತ್ತಿದ್ದ ಕಾರಣದಿಂದ, ಸಂಪತ್ತು ಅವರ ಅಧೀನದಲ್ಲಿ ಇದ್ದ ಕಾರಣದಿಂದ ಎಂದರೆ ಆಡಳಿತ ಅವರ ಬಳಿಯಿದ್ದ ಕಾರಣದಿಂದ, ಲೋಕದ ದೃಷ್ಟಿ ಅವರ ಮೇಲೆ ಇದ್ದ ಕಾರಣದಿಂದ, ಮಕ್ಕದ, ಯಮನಿನ, ಮತ್ತು ಇತರ ಪ್ರದೇಶಗಳ ಹೆಚ್ಚಿನ ಜನರು ಮದೀನಕ್ಕೆ ಬರುತ್ತಿದ್ದ ಕಾರಣದಿಂದ ಮತ್ತು ಇತರ ಪ್ರದೇಶಗಳ ಜನರು ಮುಹಾಜಿರ್ ಮತ್ತು ಅನ್ಸಾರ್‌ರಿಂದ ದೀನನ್ನು ಕಲಿಯುತ್ತಿದ್ದ ಕಾರಣದಿಂದ ದೇಶದ ಕಲಿಕೆಯ ಭಾಷೆ ಒಂದಾಗಿ ಪರಿಣಮಿಸುತ್ತಿತ್ತು. ಈ ಜನರು ಮರಳಿ ತಮ್ಮ ದೇಶಗಳಿಗೆ ಹೋಗುವಾಗ, ಇವರು ಪಂಡಿತರು ಮತ್ತು ಅಧ್ಯಾಪಕರು ಆಗಿರುವ ಕಾರಣದಿಂದ ಅವರ ಹೋದ ಪ್ರದೇಶಗಳಲ್ಲಿ ಖಂಡಿತ ಅದರ ಪ್ರಭಾವ ಉಂಟಾಗುತ್ತಿತ್ತು. ಯುದ್ಧಗಳ ಕಾರಣದಿಂದಲೂ ಗೋತ್ರಗಳಿಗೆ ಒಟ್ಟಾಗಿ ಇರಲು ಸಂದರ್ಭ ಸಿಗುತ್ತಿತ್ತು. ಹಿರಿಯ ಸಹಾಬರು ಅಧಿಕಾರಿಗಳಾಗಿದ್ದ ಕಾರಣದಿಂದ ಸಹಾಬರ ಸಹವಾಸದಲ್ಲಿದ್ದುಕೊಂಡು ಅವರನ್ನು ಅನುಕರಿಸುವ ಸಹಜ ಬಯಕೆ ಸಹ ಏಕರೂಪತೆ ಮತ್ತು ಸರಿಸಮಾನತೆಯನ್ನು ಉಂಟುಮಾಡುತ್ತಿತ್ತು. ಒಟ್ಟಿನಲ್ಲಿ, ಆರಂಭದಲ್ಲಿ ಜನರಿಗೆ ಪವಿತ್ರ ಖುರ್‌ಆನಿನ ಭಾಷೆಯನ್ನು ತಿಳಿಯಲು ಕಷ್ಟಕರವಾಗಿರಬಹುದು, ಆದರೆ ಮದೀನ ಆಡಳಿತ ಕೇಂದ್ರವಾದ ನಂತರ ಸಂಪೂರ್ಣ ಅರೇಬಿಯದ ಕೇಂದ್ರ ಮದೀನವಾಯಿತು. ಗೋತ್ರಗಳು ಮತ್ತು ಸಮುದಾಯಗಳು ಪದೇ ಪದೇ ಅಲ್ಲಿಗೆ ಬರಲು ಶುರುಮಾಡಿದುವು. ಹೀಗೆ ಭಾಷೆಗಳ ವ್ಯತ್ಯಾಸವಿಲ್ಲವಾಯಿತು. ಏಕೆಂದರೆ ಆ ಸಮಯದಲ್ಲಿ ವಿದ್ಯಾವಂತರಾದ ಜನರು ಪವಿತ್ರ ಖುರ್‌ಆನಿನ ಭಾಷೆಯನ್ನು ಸರಿಯಾಗಿ ಅರಿತಿದ್ದರು. ಆದ್ದರಿಂದ ಇನ್ನು ಮುಂದೆ ಕೇವಲ ಹಿಜಾಝಿ ಪಠನ ಶೈಲಿಯಲ್ಲಿ ಪವಿತ್ರ ಖುರ್‌ಆನನ್ನು ಓದಬೇಕೆಂದು ಹಝ್ರ‌ತ್ ಉಸ್ಮಾನ್(ರ) ಆಜ್ಞಾಪಿಸಿದರು. ಈ ಆಜ್ಞೆಯ ಅರ್ಥವೇನೆಂದರೆ, ಈಗ ಜನರು ಹಿಜಾಝಿ ಭಾಷೆಯನ್ನು ಅರಿಯಲು ಶುರುಮಾಡಿರುವರು. ಆದ್ದರಿಂದ ಹಿಜಾಝಿ ಅರಬಿಯ ಬದಲಿ ಪದಗಳನ್ನು ಪವಿತ್ರ ಖುರ್‌ಆನಿನಲ್ಲಿ ಉಪಯೋಗಿಸಲು ಅನುಮತಿ ಕೊಡಬೇಕಾಗಿಲ್ಲ ಎಂದಾಗಿದೆ.

ಹಝ್ರ‌ತ್ ಉಸ್ಮಾನ್‌ರ ಈ ಆದೇಶದ ಕಾರಣದಿಂದಲೇ ಶಿಯಾ ಜನರು ಸುನ್ನಿಯರನ್ನು ವಿರೋಧಿಸುತ್ತಾರೆ. ಹಝ್ರ‌ತ್ ಉಸ್ಮಾನ್‌ರ ಈ ಆಜ್ಞೆಯನ್ನು ಆಕ್ಷೇಪಿಸುತ್ತಾ, ಈಗಿನ ಖುರ್‌ಆನ್ ಉಸ್ಮಾನ್‌ರ(ರ) ಹಸ್ತಪ್ರತಿಯಾಗಿದೆ ಎಂದು ಶಿಯಾಗಳು ಆಕ್ಷೇಪಿಸುತ್ತಾರೆ. ಆದರೆ ಈ ಆರೋಪ ಸಂಪೂರ್ಣವಾಗಿಯೂ ತಪ್ಪಾಗಿದೆ. ಹಝ್ರ‌ತ್ ಉಸ್ಮಾನ್‌ರ ಕಾಲವಾಗುವ ವೇಳೆ ಅರೇಬಿಯರು ದೀರ್ಘಕಾಲದಿಂದ ಒಟ್ಟಾಗಿ ವಾಸಿಸುತ್ತಿದ್ದರು. ಅವರು ಪರಸ್ಪರರ ಭಾಷೆಗಳ ವ್ಯತ್ಯಾಸಗಳನ್ನು ಸರಿಯಾಗಿ ತಿಳಿದಿದ್ದರು. ಬೇರೆ ಬೇರೆ ಪಠನ ರೀತಿಯಲ್ಲಿ ಪವಿತ್ರ ಖುರ್‌ಆನ್ ಓದಲು ಅನುಮತಿ ಕೊಡುವ ಆವಶ್ಯಕತೆ ಆಗ ಇದ್ದಿರಲಿಲ್ಲ. ಆ ಅನುಮತಿ ತಾತ್ಕಾಲಿಕವಾದುದಾಗಿತ್ತು. ಆರಂಭದಲ್ಲಿ ವಿವಿಧ ಸಮುದಾಯಗಳು ಇದ್ದ ಕಾರಣ ಅದರ ಆವಶ್ಯಕತೆಯಿತ್ತು. ಭಾಷೆಯ ವ್ಯತ್ಯಾಸಗಳ ಕಾರಣದಿಂದ ಪದಗಳ ಅರ್ಥಗಳಲ್ಲೂ ವ್ಯತ್ಯಾಸಗಳು ಉಂಟಾಗುತ್ತಿದ್ದುವು. ಈ ಒಂದು ಕಾರಣದಿಂದ ಕೆಲವು ಪದಗಳ ಬದಲಿಗೆ ಬದಲಿ ಪದಗಳನ್ನು ಉಪಯೋಗಿಸುವ ಅನುಮತಿ ನೀಡಲಾಗಿತ್ತು. ಪವಿತ್ರ ಖುರ್‌ಆನಿನ ಆಜ್ಞೆಗಳನ್ನು ಅರಿಯಲು ಮತ್ತು ಅದರ ಶಿಕ್ಷಣವನ್ನು ತಿಳಿಯಲು ಯಾವುದೇ ರೀತಿಯ ಅಡಚಣೆ ಉಂಟಾಗದಿರಲು ಹೀಗೆ ಮಾಡಲಾಗಿತ್ತು. ಈ ಅನುಮತಿ ನೀಡಿದ ನಂತರ 20 ವರ್ಷಗಳು ದಾಟಿದಾಗ ಕಾಲಘಟ್ಟವು ಒಂದು ಹೊಸ ರೂಪವನ್ನು ಪಡೆಯಿತ್ತು. ವಿವಿಧ ಸಮುದಾಯಗಳಾಗಿದ್ದ ಅರೇಬಿಯ ಒಂದು ಶಕ್ತಿಶಾಲಿ ಸಮುದಾಯ, ಮಾತ್ರವಲ್ಲ ಒಂದು ಶಕ್ತಿಶಾಲಿ ಆಡಳಿತವಾಯಿತು. ಕಾನೂನು ಜಾರಿ ಮಾಡುವುದು ಮತ್ತು ಶಿಕ್ಷಣ ವ್ಯವಸ್ಥೆಯನ್ನು ಜಾರಿಗೊಳಿಸುವ ಅಧಿಕಾರ ಅವರಿಗೆ ಲಭಿಸಿತ್ತು. ಅದರ ನಂತರ ಖುರ್‌ಆನಿನ ಯಥಾರ್ಥ ಭಾಷೆಯನ್ನು ಕಲಿಯಲು ಜನರಿಗೆ ಯಾವುದೇ ಅಡಚಣೆ ಬಾಕಿಯಿರಲಿಲ್ಲ. ಈ ಸ್ಥಿತಿ ಬಂದಾಗ ತಾತ್ಕಾಲಿಕವಾದ ಅನುಮತಿಯನ್ನು ಹಝ್ರ‌ತ್ ಉಸ್ಮಾನ್(ರ) ರದ್ದುಗೊಳಿಸಿದರು. ಇದೇ ಅಲ್ಲಾಹನ ಇಚ್ಛೆಯಾಗಿತ್ತು. ಆದರೆ ಹಝ್ರ‌ತ್ ಉಸ್ಮಾನ್ ಹಲವು ಪಠನ ರೀತಿಯನ್ನು ಅಳಿಸಿಕೊಂಡು ಒಂದು ಪಠನ ರೀತಿಯನ್ನು ಜಾರಿಗೊಳಿಸಿದರು ಎಂದು ಶಿಯಾ ಜನರು ಆಕ್ಷೇಪಿಸುತ್ತಾರೆ. ವಾಸ್ತವದಲ್ಲಿ ಪವಿತ್ರ ಖುರ್‌ಆನ್ ಹಿಜಾಝಿ ಭಾಷೆಯಲ್ಲೇ ಅವತೀರ್ಣವಾಗಿತ್ತು. ಇತರ ಗೋತ್ರದವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ಕಾರಣದಿಂದ ಪಾರಾಯಣದ ಅಥವಾ ಪಠನದ ವ್ಯತ್ಯಾಸಗಳು ಉಂಟಾಗಿದ್ದುವು. ಕೆಲವು ವೇಳೆ ಒಂದು ಗೋತ್ರದ ಭಾಷೆಗೆ ಇತರ ಗೋತ್ರದ ಭಾಷೆಯೊಂದಿಗೆ ಸ್ವಲ್ಪ ವ್ಯತ್ಯಾಸವಿರುವ ಕಾರಣದಿಂದ ಕೆಲವು ಪದಗಳ ಅರ್ಥಗಳಲ್ಲಿ ವ್ಯತ್ಯಾಸಗಳುಂಟಾಗುತ್ತಿದ್ದುವು. ಆದ್ದರಿಂದ ಹಝ್ರ‌ತ್ ಪೈಗಂಬರ್(ಸ) ಅಲ್ಲಾಹನ ಇಚ್ಛಾನುಸಾರ ಕೆಲವು ಪದಗಳ ಉಚ್ಚಾರಣೆಯನ್ನು ಬದಲಿಸಲು ಅಥವಾ ಬದಲಿ ಪದವನ್ನು ಅಥವಾ ಪರ್ಯಾಯ ಪದಗಳನ್ನು ಉಪಯೋಗಿಸಲು ಅನುಮತಿ ನೀಡಿದ್ದರು. ಹಝ್ರ‌ತ್ ಉಸ್ಮಾನ್‌ರ ಖಿಲಾಫತ್ ಕಾಲದಲ್ಲಿ ನಾಗರಿಕತೆ ಮತ್ತು ಆಡಳಿತದ ಮೂಲಕ ಗೋತ್ರಗಳ ವ್ಯತ್ಯಾಸಗಳ ಜಾಗದಲ್ಲಿ ಒಂದು ಸಮೂಹ ಮತ್ತು ಒಂದು ಭಾಷೆ ಬಂದಾಗ ಎಲ್ಲರೂ ಹಿಜಾಝಿ ಅರಬೀ ಭಾಷೆಯನ್ನು ಸರಿಯಾಗಿ ಕಲಿತರು. ಆಗ ಈ ಪಾರಾಯಣದ ವ್ಯತ್ಯಾಸವನ್ನು ನೆಲೆನಿಲ್ಲಿಸುವುದರಿಂದ ಭಿನ್ನಾಭಿಪ್ರಾಯಗಳು ತಲೆದೋರುವುದು, ಆದ್ದರಿಂದ ಈ ವಿವಿಧ ಪಠನಗಳ ಶೈಲಿಯನ್ನು ಸ್ಥಗಿತಗೊಳಿಸಬೇಕೆಂದು ಹಝ್ರ‌ತ್ ಉಸ್ಮಾನ್(ರ) ಮನವರಿಕೆ ಮಾಡಿದರು. (ತಫ್‌ಸೀರೆ ಕಬೀರ್ ಸಂಪುಟ–9, ಪುಟ–49–51)

ಸ್ವಲ್ಪ ಪ್ರಸ್ತಾಪ ಬಾಕಿಯಿದೆ. ಇನ್‌ಶಾಅಲ್ಲಾಹ್ ಮುಂದುವರೆಸಲಾಗುವುದು. ಇಂದು ಸಹ ದುಆಗಾಗಿ ಹೇಳಲು ಬಯಸುತ್ತೇನೆ. ಪಾಕಿಸ್ತಾನಕ್ಕಾಗಿಯು ಅಲ್‌ಜೀರಿಯದ ಅಹ್ಮದಿಯರಿಗಾಗಿಯೂ ಮತ್ತು ಲೋಕದಲ್ಲಿ ಎಲ್ಲೆಲ್ಲ ಅಹ್ಮದಿಯರು ಕಷ್ಟತೆಗಳಿಗೆ ಸಿಲುಕಿಕೊಂಡಿರುವರೋ ಅವರಿಗಾಗಿಯೆಲ್ಲ ದುಆ ಮಾಡಿರಿ. ಅಲ್ಲಾಹನು ಅವನ ಕಷ್ಟತೆಗಳನ್ನು ದೂರೀಕರಿಸಲಿ. ವಿಶೇಷವಾಗಿ ಪಾಕಿಸ್ತಾನದಲ್ಲಿ ಕಾನೂನಿನ ಕಾರಣದಿಂದ ಹಲವು ಸಮಯಗಳಲ್ಲಿ ಅಹ್ಮದಿಯರ ವಿರುದ್ಧ ಕಷ್ಟತೆಗಳನ್ನು ಉಂಟುಮಾಡಲಾಗುತ್ತವೆ. ಯಾವುದೇ ರೀತಿಯಲ್ಲೂ ಈಗ ಅವರಿಗೆ ಸ್ವಾತಂತ್ರ್ಯವಿಲ್ಲ. ಅದೇ ರೀತಿಯಲ್ಲಿ ಅಲ್‌ಜೀರಿಯದಲ್ಲೂ ಕೆಲವು ಸರ್ಕಾರಿ ಅಧಿಕಾರಿಗಳು ಕಷ್ಟತೆಗಳನ್ನು ಉಂಟುಮಾಡುತ್ತಿರುತ್ತಾರೆ. ಅಲ್ಲಾಹನು ಅಹ್ಮದಿಯರನ್ನು ಈ ಎಲ್ಲ ಕಷ್ಟತೆಗಳಿಂದ ಮುಕ್ತಗೊಳಿಸಲಿ.

ಜುಮಾ ನಮಾಝಿನ ನಂತರ ನಾನು ಚೈನಿಸ್ ಡೆಸ್ಕಿನ ವೆಬ್‌ಸೈಟನ್ನು ಸಹ ಲಾಂಚ್ ಮಾಡುತ್ತೇನೆ. ಕೇಂದ್ರೀಯ ಐ.ಟಿ. ಟೀಮಿನ ನೆರವಿನಿಂದ ಈ ವೆಬ್‌ಸೈಟನ್ನು ಮಾಡಲಾಗಿದೆ. ಇದರಿಂದ ಜನರಿಗೆ ಚೈನಿಸ್ ಭಾಷೆಯಲ್ಲಿ ಇಸ್ಲಾಂ ಮತ್ತು ಅಹ್ಮದಿಯ್ಯತಿನ ಕುರಿತು ವಿಶದ ವಿವರಗಳು ಲಭಿಸುವುವು. ಈ ವೆಬ್‌ಸೈಟನ್ನು ಜಮಾಅತಿನ ಮುಖ್ಯ ವೆಬ್‌ಸೈಟಾದ ಅಲ್‌ಇಸ್ಲಾಂ ಮೂಲಕವೂ ಅಲ್ಲದೆಯೂ ವಿಝಿಟ್ ಮಾಡಬಹುದಾಗಿದೆ. ಇದರಲ್ಲಿ ವಿವಿಧ ಶೀರ್ಷಿಕೆಗಳ ಅಡಿಯಲ್ಲಿ ವಿಷಯಗಳನ್ನು ಕೊಡಲಾಗಿವೆ. ಪವಿತ್ರ ಖುರ್‌ಆನಿನ ಚೈನಿಸ್ ತರ್ಜುಮೆಯ ಹೊಸ ಎಡಿಶನ್ ಮಾಡಲಾಗಿದೆ. ಅದಲ್ಲದೇ 23 ಇತರ ಪುಸ್ತಕಗಳು ಮತ್ತು ಪಂಫ್‌ಲೆಟ್‌ಗಳು ಕೊಡಲಾಗಿವೆ. ಪ್ರಶ್ನೋತ್ತರ ಶೈಲಿಯಲ್ಲಿ ಹಲವು ಸವಾಲುಗಳಿಗೆ ಉತ್ತರಗಳನ್ನು ಕೊಡಲಾಗಿವೆ. ಹಝ್ರ‌ತ್ ಮಸೀಹ್ ಮೌಊದ್‌ರ(ಅ) ಶೀರ್ಷಿಕೆಯಡಿಯಲ್ಲಿ ಅವರ ಮತ್ತು ಖಲೀಫರ ಪರಿಚಯ ಕೊಡಲಾಗಿದೆ.

ಮೊದಲ ಪೇಜಿನಲ್ಲಿ ಜಮಾಅತಿನ ಇತರ ಆರು ವೆಬ್‌ಸೈಟ್‌ಗಳ ಲಿಂಕ್‌ಗಳನ್ನು ಕೊಡಲಾಗಿವೆ. ಇದಲ್ಲದೆ ಸಂಪರ್ಕಕ್ಕಾಗಿ ಫೋನ್, ಫ್ಯಾಕ್ಸ್, ಈಮೇಲ್ ಮುಂತಾದರ ವಿವರಗಳನ್ನು ಕೊಡಲಾಗಿವೆ. ಅಲ್ಲಾಹನು ಈ ವೆಬ್‌ಸೈಟನ್ನು ಚೈನೀಸ್ ಜನಸಾಮಾನ್ಯರ ಸನ್ಮಾರ್ಗಕ್ಕೆ ಕಾರಣವನ್ನಾಗಿ ಮಾಡಲಿ. ಇಸ್ಲಾಂ ಮತ್ತು ಅಹ್ಮದಿಯ್ಯತಿಗಾಗಿ ಅವರ ಹೃದಯ ತೆರೆಯಲ್ಪಡಲಿ.

ಇದಲ್ಲದೇ ನಾನು ಕೆಲವು ಜನಾಝು ನಮಾಝ್ ನಿರ್ವಹಿಸುವೆನು. ಅವುಗಳಲ್ಲಿ ಮೊದಲ ಜನಾಝುದ ಪ್ರಸ್ತಾಪ ಜಮಾಅತಿನ ಮುರಬ್ಬಿಯಾಗಿದ್ದ ಸನ್ಮಾನ್ಯ ಮುಹಮ್ಮದ್ ಯೂನುಸ್ ಖಾಲಿದ್ ಸಾಹಿಬ್‌ರದ್ದಾಗಿದೆ. ಹೃದಯಾಘಾತದ ನಿಮಿತ್ತ ಮಾರ್ಚ್ 15ರಂದು 67ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.**

ಮುಹಮ್ಮದ್ ಯೂನುಸ್ ಖಾಲಿದ್ ಸಾಹಿಬ್‌ರ ತಾತರಾದ ಹಝ್ರತ್ ಮಿಯಾ ಮುರಾದ್ ಬಖ್ಷ್ ಸಾಹಿಬ್ ಮತ್ತು ಅವರ ಸಹೋದರ ಭಾಯಿ ಹಝ್ರತ್ ಹಾಜೀ ಅಹ್ಮದ್ ಸಾಹಿಬ್‌ರು ಹಝ್ರತ್ ಮಸೀಹ್ ಮೌಊದ್‌ರ ಸಹಾಬಿಯರಾಗಿದ್ದರು. ಆರು ಜನರ ಒಂದು ಸಂಘ ಹಾಫಿಝಾಬಾದ್ ಜಿಲ್ಲೆಯ ಮೋಝು ಪ್ರೇಮ್‌ಕೋಟ್‌ನಿಂದ ಕಾಲ್ನಡಿಗೆಯಾಗಿ ಖಾದಿಯಾನಿಗೆ ಬಂದಿದ್ದರು. ಈ ಸಂಘದಲ್ಲಿ ಹಝ್ರತ್ ಹಾಜಿ ಅಹ್ಮದ್ ಸಾಹಿಬ್ ಇದ್ದರು. ಅವರು ಹಝ್ರತ್ ಮಸೀಹ್ ಮೌಊದ್‌ರ ಕೈಯಲ್ಲಿ ಬೈಅತ್ ಮಾಡಿದರು. ಹಝ್ರತ್ ಮಸೀಹ್ ಮೌಊದ್‌ರಿಂದ ಅನುಗ್ರಹಸಿದ್ಧಿಗಾಗಿ ನೀರನ್ನು ಕೇಳಿದರು. ಹಝ್ರತ್ ಮಸೀಹ್ ಮೌಊದ್ ಅವರಿಗೆ ಕೊಟ್ಟರು. ಸನ್ಮಾನ್ಯ ಯೂನುಸ್ ಖಾಲಿದ್ ಸಾಹಿಬ್‌ರು ರಬ್ವದಿಂದ ಹತ್ತನೇ ತರಗತಿ ತೇರ್ಗಡೆಯಾದರು. ಅದರ ನಂತರ ಜಾಮಿಅದಲ್ಲಿ ಪ್ರವೇಶಿಸಿದರು. ಜಾಮಿಅದಲ್ಲಿ ಕಲಿಯುತ್ತಿರುವಾಗ ಅರಬೀ ಡಿಗ್ರಿ ಸಹ ಮಾಡಿದರು. ಅಲ್ಲಾಹನ ಅನುಗ್ರಹದಿಂದ ಮೂಸಿಯಾಗಿದ್ದರು. 1980ರಲ್ಲಿ ಜಾಮಿಅ ಅಹ್ಮದಿಯಾದಿಂದ ಶಾಹಿದ್ ಡಿಗ್ರಿ ಪಾಸ್ ಮಾಡಿದರು. ಅನಂತರ 40 ವರ್ಷಗಳ ಕಾಲ ವಿವಿಧ ಸ್ಥಳಗಳಲ್ಲಿ ಜಮಾಅತಿನ ಸೇವೆ ಮಾಡುವ ಸೌಭಾಗ್ಯವನ್ನು ಪಡೆದರು. ಪಾಕಿಸ್ತಾನದಲ್ಲೂ ಆಫ್ರಿಕಾದಲ್ಲೂ ಇತರ ವಿದೇಶಿ ದೇಶಗಳಲ್ಲೂ. ದಿವಂಗತರು ಪತ್ನಿಯಾದ ಮರ್‌ಯಂ ಸಿದ್ದೀಖ ಸಾಹಿಬರನ್ನು ಮತ್ತು ಒಬ್ಬ ಮಗನಾದ ಅತೀಖ್ ಅಹ್ಮದ್ ಮುಬಶ್ಶಿರ್‌ರನ್ನು ಅಗಲಿರುವರು. ಮಗನು ಜಮಾಅತಿನ ಮುಬಲ್ಲಿಗ್ ಆಗಿರುವರು.

ಅತೀಖ್ ಅಹ್ಮದ್ ಮುಬಶ್ಶಿರ್ ಹೇಳುತ್ತಾರೆ: ನನ್ನ ತಂದೆ ಒಬ್ಬ ಉತ್ತಮ ನಡತೆಯನ್ನು ಹೊಂದಿರುವ ಪಂಡಿತರಾಗಿದ್ದರು. ಅಲ್ಲಾಹನು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರೊಂದಿಗೆ ವರ್ತಿಸುತ್ತಿದ್ದ ರೀತಿಯಲ್ಲಿ ನನ್ನೊಡನೆ ವರ್ತಿಸುತ್ತಾನೆ ಎಂದು ಅವರು ಹೇಳುತ್ತಿರುತ್ತಿದ್ದರು. ಆವಶ್ಯಕತೆ ಬರುವಾಗಲೆಲ್ಲ ಅಲ್ಲಾಹನು ತನ್ನ ಕೃಪೆಯಿಂದ ಅದನ್ನು ಈಡೇರಿಸುತ್ತಿದ್ದನು. ಅದನ್ನು ನಾನು ಸಹ ಹಲವು ಬಾರಿ ನೋಡಿದ್ದೇನೆ. ಲಾಹೋರಿನ ಹಲ್‌ಖ ಸದರ್ ಆಗಿದ್ದ ರಾನಾ ಮುಬಾರಕ್ ಹೇಳುತ್ತಾರೆ: ಜಮಾಅತಿನ ಕೆಲಸ ಬರುವಾಗಲೆಲ್ಲ, ಸನ್ಮಾನ್ಯ ಮುರಬ್ಬಿ ಸಾಹಿಬ್‌ರು ಬೇಗನೇ ಮುಗಿಸುತ್ತಿದ್ದರು. ಪಾದರಕ್ಷೆಯನ್ನು ಹಾಕಿರುವರೋ ಇಲ್ಲವೋ ಎಂದು ಕೂಡ ಗಮನಿಸುತ್ತಿರಲಿಲ್ಲ. ಹೇಳಿದ ಕೆಲಸವನ್ನು ಮಾಡಲು ಬೇಗನೇ ಹೊರಡುತ್ತಿದ್ದರು. ಧನತ್ಯಾಗದಲ್ಲೂ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಹರಿಪುರ್ ಹಝಾರದ ಅಮೀರ್ ಸಾಹಿಬ್ ಹೇಳುತ್ತಿದ್ದರು: ಚಂದಾ ನೀಡುದರಲ್ಲಿ ಮುರಬ್ಬಿ ಸಾಹಿಬ್‌ರು ತರ್‌ಬೇಲಾ ಜಮಾಅತಿಗೆ ಒಂದು ಮಾದರಿಯಾಗಿದ್ದರು. ನಿಧನರಾದ ಹಿರಿಯ ಹೆಸರಲ್ಲಿ ಕೂಡ ಕರಾರುವಕ್ಕಾಗಿ ಚಂದಾ ನೀಡುತ್ತಿದ್ದರು. ಅವರ ಹೆಂಡತಿಯ ಸೋದರಿಯ ಗಂಡ ಹೇಳುತ್ತಾರೆ: ಚಂದಾಗಳ ವಿಷಯದಲ್ಲಿ ತುಂಬ ಜಾಗ್ರತೆ ವಹಿಸುವವರಾಗಿದ್ದರು. ವಿಶೇಷವಾಗಿ ವಸಿಯ್ಯತ್ ಚಂದಾಗಳ ಪಾವತಿಯಲ್ಲಿ ಬಹಳ ಗಮನವಹಿಸುತ್ತಿದ್ದರು. ದಿವಂಗತರು ಅತ್ಯಂತ ಹೆಚ್ಚು ಪ್ರಾರ್ಥನೆ ಮಾಡುವ ಸರಳಗುಣದ ವ್ಯಕ್ತಿಯಾಗಿದ್ದರು. ದಿವಂಗತರು ಬಡವರನ್ನು ಹುಡುಕಿಕೊಂಡು ಅವರಿಗೆ ರಹಸ್ಯವಾಗಿ ಸಹಾಯಮಾಡುತ್ತಿದ್ದರು. ಸಂಬಂಧಿಕರಲ್ಲಿ ಬಡ ಹೆಣ್ಮಕ್ಕಳ ವಿವಾಹಗಳ ಸಂದರ್ಭದಲ್ಲಿ ಹೆಣ್ಣಿಗೆ ಬೇಕಾದ ಉಡುಗೊರೆ ಇತ್ಯಾದಿ ಸಾಮಾನುಗಳನ್ನು ಖರೀದಿ ಮಾಡಿಕೊಡುತ್ತಿದ್ದರು. ನಾವು ಒಬ್ಬ ನಿಷ್ಠಾವಂತ ಮತ್ತು ಆರ್ಥಿಕ ಸಹಾಯಗಳನ್ನು ಮಾಡುವ ಪ್ರಿಯ ಕರುಣಾಮಯಿ ವ್ಯಕ್ತಿಯಿಂದ ದೂರವಾದೆವು ಎಂದು ಅವರ ಸಂಬಂಧಿಕರು ಹೇಳುತ್ತಾರೆ. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಎರಡನೇ ಜನಾಝು ಐವರಿಕೋಸ್ಟಿನ ಸನ್ಮಾನ್ಯ ಡಾಕ್ಟರ್ ನಿಝಾಮುದ್ದೀನ್ ಬುದನ್ ಸಾಹಿಬ್‌ರದ್ದಾಗಿದೆ. ಮಾರ್ಚ್ 15ರಂದು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.**

73 ವರ್ಷ ಪ್ರಾಯವಿತ್ತು. ಅವರು ಪ್ರಾಥಮಿಕ ಶಿಕ್ಷಣವನ್ನು ಮಾರಿಶಿಯಸ್‌ನಿಂದ ಪಡೆದರು. ತಾಲೀಮುಲ್ ಇಸ್ಲಾಂ ಕಾಲೇಜಿನಿಂದ ಎಫ್.ಎಸ್.ಸಿ ಮಾಡಿದರು. 1968ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರ) ಅವರಿಗೆ ಸ್ಕಾಲರ್‌ಶಿಪ್ ನೀಡಿದರು ಮತ್ತು ಅವರು ಪಾಕಿಸ್ತಾನದ ಮೆಡಿಕಲ್ ಕಾಲೇಜಿನಲ್ಲಿ ದಾಖಲಾದರು. ಅನಂತರ ಡೋವ್ ಮೆಡಿಕಲ್ ಕಾಲೇಜಿನಲ್ಲಿ ದಾಖಲಾಗಿ ಎಂ.ಬಿ.ಬಿ.ಎಸ್. ಮಾಡಿದರು. 1978ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ಅವರ ಪೋಸ್ಟಿಂಗ್ ನೈಜೀರಿಯದಲ್ಲಿ ಅಹ್ಮದಿಯಾ ಕ್ಲಿನಿಕ್‌ನಲ್ಲಿ ಇಂಚಾರ್ಜ್ ಕ್ಲಿನಿಕ್ ಆಗಿ ಮಾಡಿದರು. 1984ರ ತನಕ ಅಲ್ಲಿ ಸೇವೆ ಮಾಡುವ ಸೌಭಾಗ್ಯವನ್ನು ಪಡೆದರು. 1980ರಲ್ಲಿ ಹಝ್ರತ್ ಖಲೀಫತುಲ್ ಮಸೀಹರು ಘಾನ ಪರ್ಯಟನೆಗೆ ಹೋದ ಸಂದರ್ಭದಲ್ಲಿ ಐವರಿಕೋಸ್ಟ್ ಜಮಾಅತಿನ ಒಂದು ಸಂಘ ಘಾನಕ್ಕೆ ಹೋಗಿ ಖಲೀಫತುಲ್ ಮಸೀಹ್‌ರನ್ನು ಭೇಟಿಯಾಗುವ ಸೌಭಾಗ್ಯವನ್ನು ಪಡೆದಿತ್ತು. ಘಾನದಲ್ಲಿ ಇರುವಂತೆ ಐವರಿಕೋಸ್ಟಿನಲ್ಲೂ ಆಸ್ಪತ್ರೆಯನ್ನು ತೆರೆಯಬೇಕೆಂದು ಈ ಸಂಘವು ಹಝ್ರತ್ ಖಲೀಫತುಲ್ ಮಸೀಹ್‌ರ ಸನ್ನಿಧಿಯಲ್ಲಿ ವಿನಂತಿಸಿತು. ಹೇಗಿದ್ದರೂ ಹುಝೂರ್ ಅದಕ್ಕೆ ಅನುಮತಿಕೊಟ್ಟರು. ಇದಕ್ಕಾಗಿ ಕೆಲಸಗಳು ಶುರುವಾಯಿತು. ಮಾರ್ಚ್ 18, 1983ರಲ್ಲಿ ಡಾಕ್ಟರ್ ಸಾಹಿಬ್‌ರು ಕೋಲೇಗೋಸ್‌ನಿಂದ ಐವರಿಕೋಸ್ಟ್ ತಲುಪಿತು. ಆರೋಗ್ಯ ವಿಭಾಗದ ಅಧಿಕಾರಿಗಳನ್ನು ಭೇಟಿಯಾದರು. ಡಾಕ್ಟರ್ ಸಾಹಿಬ್‌ರಿಗೆ ಫ್ರೆಂಚ್ ಭಾಷೆ ಗೊತ್ತಿತ್ತು. ಅಲ್ಲಿ ಫ್ರೆಂಚ್ ಮಾತನಾಡುವ ಡಾಕ್ಟರಿನ ಆವಶ್ಯಕತೆಯಿತ್ತು. ಆದ್ದರಿಂದ ಅವರನ್ನು ನೈಜೀರಿಯದಿಂದ ಅಲ್ಲಿಗೆ ಕಳುಹಿಸಲಾಗಿತ್ತು. ಅವರಿಗೆ ಅಹ್ಮದಿಯಾ ಡಿಸ್ಪೆನ್ಸರಿ ತೆರೆಯಲು ಅಲ್ಲಿ ಅನುಮತಿ ಸಿಕ್ಕಿತು. 1984ರಿಂದ ನಿಧನದ ತನಕ ಡಾಕ್ಟರ್ ಸಾಹಿಬ್‌ರು ಐವರಿಕೋಸ್ಟಿನಲ್ಲಿ ಸೇವೆ ಸಲ್ಲಿಸುತ್ತಾ ಇದ್ದರು. ಅಲ್ಲಾಹನ ಅನುಗ್ರಹದಿಂದ ಮೂಸಿಯಾಗಿದ್ದರು. ಅವರ ಪತ್ನಿ ಮುಂಚೆಯೇ ಮೃತಪಟ್ಟಿದ್ದರು. ಒಬ್ಬ ಮಗನಾದ ಬಶೀರುದ್ದೀನ್ ಮಹ್ಮೂದ್ ಬೂಧನ್ ಮತ್ತು ಮಗಳಾದ ನಾಶ್‌ಮಿಯ ಮುಬಾರಕರನ್ನು ಅಗಲಿರುವರು. ಅಲ್ಲಾಹನು ಅವರ ಮಕ್ಕಳನ್ನೂ ಖಿಲಾಫತ್ ಮತ್ತು ಜಮಾಅತಿನೊಂದಿಗೆ ಜೋಡಿಸಿಡಲಿ.

ಐವರಿಕೋಸ್ಟಿನ ಮಿಶನರಿ ಇಂಚಾರ್ಜ್ ಆದ ಅಬ್ದುಲ್‌ಖಯ್ಯೂಂ ಪಾಶಾ ಸಾಹಿಬ್‌ರು ಹೇಳುತ್ತಾರೆ: ಐವರಿಕೋಸ್ಟಿನ ಅಹ್ಮದಿಯಾ ಕ್ಲಿನಿಕ್ ಆದ ಆಬಿಜಾನಿನಲ್ಲಿ 36 ವರ್ಷಗಳ ಕಾಲ ಮೆಡಿಕಲ್ ಆಫೀಸರ್ ಆಗಿ ಅವರು ಸೇವೆ ಸಲ್ಲಿಸಿದ್ದರು. ಅವರೊಬ್ಬ ಬಹಳ ಉತ್ತಮ ಡಾಕ್ಟರ್, ಉತ್ತಮ ಮನುಷ್ಯ ಮತ್ತು ಐವರಿಕೋಸ್ಟಿನಲ್ಲಿ ಮಹನೀಯ ಹಿರಿಯ ವ್ಯಕ್ತಿಯಾಗಿದ್ದರು. ನಾನು ಡಾಕ್ಟರ್ ಸಾಹಿಬ್‌ರೊಂದಿಗೆ 18 ವರ್ಷಗಳ ಕಾಲ ಇದ್ದೆ. ಅವರನ್ನು ಎಲ್ಲ ರೀತಿಯಲ್ಲೂ ಉತ್ತಮ ಮನುಷ್ಯನಾಗಿ ಕಂಡೆನು. ಪ್ರತಿಯೊಬ್ಬರಿಗೂ ಸಹಾಯ ಮಾಡುತ್ತಿದ್ದರು. ಜಮಾಅತಿನ ಕೆಲಸಗಳಲ್ಲಿ ಮಾರ್ಗನಿರ್ದೇಶನಗಳನ್ನು ನೀಡುವವರೂ ಅತಿಥಿ ಸತ್ಕಾರ ಮಾಡುವವರೂ ಸುಸ್ವಭಾವ ಹೊಂದಿರುವವರೂ ಉತ್ತಮ ರೀತಿಯಲ್ಲಿ ಮಾತನಾಡುವವರೂ ಒಳ್ಳೆಯ ನಡತೆ ಹೊಂದಿದವರೂ ಆಗಿದ್ದರು. ಜಮಾಅತಿನ ವಿವಿಧ ಹುದ್ದೆಗಳಲ್ಲಿ ಇದ್ದರು. ಬಹಳ ಉದಾರಿಯಾಗಿದ್ದರು, ಮಕ್ಕಳೊಂದಿಗೆ ಬಹಳ ಪ್ರೀತಿಯಿಂದ ವರ್ತಿಸುತ್ತಿದ್ದರು. ಹೆಚ್ಚಾಗಿ ಮಕ್ಕಳಿಗೆ ಕೊಡುಗೆಯಾಗಿ ಕೊಡಲು ಕ್ಲಿನಿಕ್‌ನಲ್ಲಿ ಏನಾದರೂ ಇರಿಸುತ್ತಿದ್ದರು. ರೋಗಿಯಾಗಿ ಬರುವ ಮಕ್ಕಳಿಗೆ ಆಟಿಕೆ ಮತ್ತು ಮಿಠಾಯಿ ಇತ್ಯಾದಿಗಳನ್ನು ಕೊಡುಗೆ ಸಹ ನೀಡುತ್ತಿದ್ದರು. ಮಿಶನ್‌ನಲ್ಲಿ ಇರುವ ವಿದ್ಯಾರ್ಥಿಗಳು ಮತ್ತು ಬಡ ಅಹ್ಮದಿ ಮನೆಯವರ ಬಹಳವಾಗಿ ಸಹಾಯ ಮಾಡುತ್ತಿದ್ದರು.

ಅಲ್ಲಿಯ ಜಮಾಅತಿನ ಒಬ್ಬ ಮುಬಲ್ಲಿಗ್ ಸಾಹಿಬ್‌ರು ಬರೆಯುತ್ತಾರೆ: ಅವರ ಬಳಿ ರೋಗಿಗಳು ಯಾರೂ ಇರದಿದ್ದರೆ, ಆ ಸಮಯದಲ್ಲಿ ಯಾವನಾದರೂ ಯುವಕ ಅಥವಾ ಹಿರಿಯರ ಶಿಕ್ಷಣ ಮತ್ತು ತರಬೇತಿಯಲ್ಲಿ ಮಗ್ನರಾಗುತ್ತಿದ್ದರು. ಈ ಕೆಲಸಕ್ಕಾಗಿ ಕೆಲವೊಮ್ಮೆ ಮಲ್‌ಫೂಝಾತ್ ಅಥವಾ ಖುತ್ಬ ಜುಮಾದ ಫ್ರೆಂಚ್ ತರ್ಜುಮೆ ಮಾಡುತ್ತಿದ್ದರು. ಅನಂತರ ಜಮಾಅತಿನ ಸದಸ್ಯರಿಗೆ ಅದರ ಫೋಟೋಸ್ಟಾಟ್ ಮಾಡಿಕೊಂಡು ಕಳುಹಿಸುತ್ತಿದ್ದರು. ಅವರು ಸದಾ ಮನುಷ್ಯತ್ವದ ಸೇವೆಗಾಗಿ ತಯಾರಿರುತ್ತಿದ್ದರು. ರೋಗಿಗಳಿಗೆ ಸ್ವತಃ ವೈಯಕ್ತಿಕವಾಗಿ ಮದ್ದುಗಳನ್ನು ಖರೀದಿಮಾಡಿಕೊಡುತ್ತಿದ್ದರು. ಕೆಲವೊಮ್ಮೆ ಬಡವರಿಗೆ ಕೆಲವೊಮ್ಮೆ ಇತರರಿಗೆ ಮನೆಯ ದಿನಸಿ ಸಾಮಾನುಗಳಾದ ಅಕ್ಕಿ, ಎಣ್ಣೆ ಇತ್ಯಾದಿಗಳನ್ನು ಸಹ ಒದಗಿಸಿಕೊಡುತ್ತಿದ್ದರು. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮುಂದಿನ ಜನಾಝು ಡಾಕ್ಟರ್ ನಸೀರ್ ಅಹ್ಮದ್ ಝಫರ್ ಸಾಹಿಬ್‌ರ ಪತ್ನಿಯಾದ ಸಲ್ಮಾ ಬೇಗಂ ಸಾಹಿಬ್‌ರದ್ದಾಗಿದೆ. ಜನವರಿ 24ರಂದು 85ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.**

ಅವರ ತಂದೆಯಾದ ರಾಜ ಫಝ್ಲುಲ್‌ದಾದ್ ಖಾನ್ ಸಾಹಿಬ್‌ರು ಅಲ್ಲಾಹನ ಕೃಪೆಯಿಂದ ಅವರ ಕುಟುಂಬದ ಮೊದಲ ಅಹ್ಮದಿಯಾಗಿದ್ದರು. ಅವರ ಮಕ್ಕಳು ಬರೆಯುತ್ತಾರೆ: ಅವರ ನಮಾಝಿನ ದೀರ್ಘತೆ ಕುಟುಂಬದಲ್ಲೇ ಮಾದರಿಯೆಂಬ ರೀತಿಯಲ್ಲಿ ಪ್ರಸಿದ್ಧಿಯನ್ನು ಪಡೆದಿದೆ. ಅತ್ಯಂತ ಸುಸ್ವಭಾವ ಹೊಂದಿದ್ದ, ಉತ್ತಮ ವರ್ತನೆಯ, ಸೇವೆ ಸಲ್ಲಿಸುವ, ದೇವಭಕ್ತಿ ಹೊಂದಿರುವ ನಿಷ್ಠಾವಂತ, ಧೈರ್ಯಶಾಲಿ, ಅತ್ಯಂತ ಉತ್ತಮ ಝುರಫ್ ಇದ್ದ, ವಿವೇಕವಂತ, ಉತ್ತಮ ನಡವಳಿಕೆಯ, ಸಭ್ಯರಾದ, ಬಹಳವಾಗಿ ದುಆ ಮಾಡುವ, ಸಹನಶೀಲರಾದ, ಕೃತಜ್ಞತೆ ಹೊಂದಿದ್ದ, ಇದ್ದುದ್ದರಲ್ಲಿ ತೃಪ್ತರಾಗಿದ್ದ, ಅಲ್ಲಾಹನ

ಮೇಲೆ ಭರವಸೆ ಹೊಂದಿದ್ದ ಸ್ತ್ರೀಯಾಗಿದ್ದರು. ದಿವಂಗತರು ಅಲ್ಲಾಹನ ಕೃಪೆಯಿಂದ ಮೂಸಿಯಾಗಿದ್ದರು. ಇಬ್ಬರು ಪುತ್ರಿಯರನ್ನು ಮತ್ತು ಮೂವರು ಪುತ್ರಿಯರನ್ನು ಅಗಲಿರುವರು. ಅಲ್ಲಾಹನು ದಿವಂಗತರೊಂದಿಗೆ ಕಾರುಣ್ಯ ಮತ್ತು ಮಗ್‌ಫಿರತ್‌ನೊಂದಿಗೆ ವರ್ತಿಸಲಿ.

ಮುಂದಿನ ಜನಾಝ ಯು.ಕೆ.ಯ ಅಶ್ಶಿರ್ಕತುಲ್ ಇಸ್ಲಾಮಿಯದ ಚೇರ್‌ಮೇನ್ ಆದ ಸನ್ಮಾನ್ಯ ಅಬ್ದುಲ್‌ಬಾಖಿ ಅಶ್ರಫ್ ಸಾಹಿಬ್‌ರ ಪತ್ನಿಯದ್ದಾಗಿದೆ. ಫೆಬ್ರವರಿ 27ರಂದು 87ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.**

ದಿವಂಗತರು ಬಹಳ ಸಹನೆ, ಧೈರ್ಯದೊಂದಿಗೆ ತಮ್ಮ ರೋಗಾವಸ್ಥೆ ಮತ್ತು ವೃದ್ಧಾಪ್ಯದಲ್ಲಿ ಹಲವು ಕಾಯಿಲೆಗಳನ್ನು ಎದುರಿಸಿದರು. ಅಲ್ಲಾಹನ ಸಂಪ್ರೀತಿಯಲ್ಲಿ ಸಂತೃಪ್ತರಾಗಿಕೊಂಡು ತನ್ನ ಪ್ರಿಯ ಪ್ರಭುವಿನ ಮುಂದೆ ಹಾಜರಾದರು. ದಿವಂಗತರು ಇಬ್ಬರು ಪುತ್ರರನ್ನು ಮತ್ತು ಇಬ್ಬರು ಪುತ್ರಿಯರನ್ನು ಅಗಲಿರುವರು. ಅದೇ ರೀತಿಯಲ್ಲಿ ಇವರಿಗೆ ಹಲವಾರು ಮೊಮ್ಮಕ್ಕಳು ಇದ್ದಾರೆ. ಅವರ ಒಬ್ಬ ಅಳಿಯರಾದ ನಸೀರುದ್ದೀನ್ ಸಾಹಿಬ್‌ರು ಯು.ಕೆ.ಯ ನಾಇಬ್ ಅಮೀರ್ ಆಗಿ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆಯುತ್ತಿದ್ದಾರೆ. ಮಗನಾದ ನಬೀಲ್ ಅರ್ಶದ್‌ಗೆ ಸಹ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್) ಕಾಲದಲ್ಲಿ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆದಿದ್ದರು ಮತ್ತು ನಾನು ಸಹ ಅವರನ್ನು ಯಾವುದೇ ಸೇವೆಗಾಗಿ ಕರೆದರೂ ಬೇಗನೇ ಹಾಜರಾಗುತ್ತಿದ್ದರು. ಅವರು ಮಕ್ಕಳನ್ನು ಉತ್ತಮ ರೀತಿಯಲ್ಲಿ ತರಬೇತಿ ಮಾಡಿದ್ದರು. ಅವರು ಅಗಣಿತ ಗುಣವೈಶಿಷ್ಟ್ಯಗಳನ್ನು ಹೊಂದಿದ್ದರು. ಸ್ವಚ್ಛತೆಯನ್ನು ಬಹಳವಾಗಿ ಇಷ್ಟಪಡುವ ವ್ಯಕ್ತಿಯಾಗಿದ್ದರು. ಶಿಸ್ತಿನ ವ್ಯಕ್ತಿಯಾಗಿದ್ದರು. ಅರ್ಪಣಗುಣ ಹೊಂದಿದ್ದ ಮತ್ತು ಸಾತ್ವಿಕರಾದ ಸ್ತ್ರೀಯಾಗಿದ್ದರು. ನಮಾಝ್, ಉಪವಾಸ ಪಾಲನೆ ಮತ್ತು ಚಂದಾ ನೀಡುವುದರಲ್ಲಿ ತ್ವರೆಮಾಡುತ್ತಿದ್ದರು. ಸದಾ ದಾನಧರ್ಮಗಳನ್ನು ತೆರೆದ ಹೃದಯದೊಂದಿಗೆ ಮಾಡುತ್ತಿದ್ದರು. ಇರ್ಶಾದ್ ಬಾಖಿ ಸಾಹಿಬ್‌ರು ಬರೆಯುತ್ತಾರೆ: ಬಹಳ ದೀರ್ಘ ಕಾಲ ಲಂಡನಿನಲ್ಲಿ ನೆಲೆಸಿದ್ದರು. ಆ ವೇಳೆ 1984ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್) ಲಂಡನಿಗೆ ವಲಸೆ ಹೋದ ನಂತರ ನನ್ನೊಡನೆ ಜಮಾಅತಿನ ಕೆಲಸಗಳಲ್ಲಿ ಬಹಳ ಸಹಕರಿಸುತ್ತಿದ್ದರು. ಸದಾ ಜಮಾಅತಿನ ಕೆಲಸಗಳಿಗೆ ಆದ್ಯತೆ ನೀಡಿದ್ದರು. ಎಲ್ಲ ರೀತಿಯಲ್ಲೂ ಮನೆಯನ್ನು ಸಮಾಧಾನಕರ ಮತ್ತು ಸ್ವರ್ಗೀಯವನ್ನಾಗಿ ಮಾಡಿದ್ದರು. ನೆಮ್ಮದಿ ಮತ್ತು ವಾಸಿಸುವ ದೃಷ್ಟಿಯಲ್ಲಿ ಈ ಮನೆ ನನಗೆ ಪ್ರಿಯವಾದುದಾಗಿದೆ ಎಂದು ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ಹೇಳುತ್ತಿದ್ದರು. ಅವರ ಮಗಳು ಹೇಳುತ್ತಾರೆ: ಎಲ್ಲ ಸ್ಥಿತಿಯಲ್ಲೂ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತಿದ್ದರು. ದುಃಖ ಮತ್ತು ಸುಖ ಎರಡೂ ಅವಸ್ಥೆಯಲ್ಲೂ ಅಲ್ಲಾಹನ ವಿಧಿಯನ್ನು ಖುಶಿಯಿಂದ ಸ್ವೀಕರಿಸುತ್ತಿದ್ದರು. ಎಂದೂ ಯಾವುದೇ ಸಂಗತಿಯಲ್ಲಿ ದೂರುತ್ತಿರಲಿಲ್ಲ. ಸೌದಿ ಅರೇಬಿಯದಲ್ಲೂ ಅವರು ನೆಲೆಸಿದ್ದರು. ಅಲ್ಲೂ ಹಜ್ಜ್ ಅಥವಾ ಉಮ್ರಗೆ ಹೋಗುವ ಅಹ್ಮದಿಯರನ್ನು ಬಹಳವಾಗಿ ಸೇವೆ ಮಾಡಲು ಅವರಿಗೆ ಸೌಭಾಗ್ಯ ಪಡೆದಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮುಂದಿನ ಜನಾಝ ಸೂಡಾನಿನ ಅಬ್ದುರ್ರಹ್ಮಾನ್ ಹುಸೈನ್ ಮುಹಮ್ಮದ್ ಖೈರ್ ಸಾಹಿಬ್‌ರದ್ದಾಗಿದೆ. ಡಿಸೆಂಬರ್ 24ರಂದು 56ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.**

ಅಹ್ಮದಿಯಾ ಜಮಾಅತಿನ ಬಗ್ಗೆ ಪರಿಚಯಪಡುವ ಮುಂಚೆ ಇವರು ಇಸ್ಲಾಮಿನ ಯಾವುದೇ ವಿಭಾಗದಲ್ಲಿ ಸೇರಿರಲಿಲ್ಲ. ಅವರಿಗೆ ನಾಸಿಖ್ ಮಂಸೂಖ್ ಮತ್ತು ಜಿನ್ನ್ ಎಂಬಿತ್ಯಾದಿ ವಿಷಯಗಳಲ್ಲಿ ಸಂಶಯವಿತ್ತು. ಅವರ ಹಿರಿಯ ಸಹೋದರ ಉಸ್ಮಾನ್ ಹುಸೈನ್ ಸಾಹಿಬ್ ಸೌದಿ ಅರೇಬಿಯದಲ್ಲಿ ಕೆಲಸ ಮಾಡುತ್ತಿದ್ದರು. ಅಲ್ಲಿ ಅವರಿಗೆ ಅಹ್ಮದಿಯಾ ಜಮಾಅತಿನ ಪರಿಚಯವಾಯಿತು. ಅವರು ದಿವಂಗತ ಅಬ್ದುರ್ರಹ್ಮಾನ್ ಸಾಹಿಬ್‌ರೊಡನೆ ಇದರ ಬಗ್ಗೆ ಹೇಳಿಕೊಟ್ಟರು. ಇದು 2007ರ ಮಾತಾಗಿದೆ. ತನ್ನ ಸಹೋದರನಿಂದ ಅಹ್ಮದಿಯ್ಯತ್ ಬಗ್ಗೆ ಆಲಿಸಿದಾಗ, ಅಬ್ದುರ್ರಹ್ಮಾನ್ ಸಾಹಿಬ್‌ರು ಎಂ.ಟಿ.ಎ. ನೋಡಲು ಉತ್ಸುಕರಾದರು. ಆ ಕಾಲದಲ್ಲಿ ಅವರ ಪ್ರದೇಶದಲ್ಲಿ ಎಂ.ಟಿ.ಎ.ಯ ಪ್ರಸಾರವನ್ನು ನೋಡುವುದು ಕಷ್ಟಕರವಾದ ಸಂಗತಿಯಾಗಿತ್ತು. ಇದಕ್ಕಾಗಿ ಅವರು ಹಲವಾರು ಡಿಶ್ ಎಂಟೇನವನ್ನು ಬದಲಾಯಿಸಿದರು. ಸಾಕಷ್ಟು ಹಣವನ್ನು ಖರ್ಚು ಮಾಡಿದರು. ಕೊನೆಗೆ ಅವರಿಗೆ ಎಂ.ಟಿ.ಎ. ಸಿಕ್ಕಿತ್ತು. ಅನಂತರ ಹೆಚ್ಚಾಗಿ ಎಂ.ಟಿ.ಎ. ನೋಡುವುದರಲ್ಲಿ ನಿರತರಾಗುವುದು ಅವರ ರೂಢಿಯಾಯಿತು. ಕೊನೆಗೆ ಸರಿಯಾಗಿ ಮನವರಿಕೆ ಮಾಡಿದ ನಂತರ 2010ರಲ್ಲಿ ಅವರಿಗೆ ಬೈಅತ್ ಮಾಡುವ ಸೌಭಾಗ್ಯ ಲಭಿಸಿತು. ಬೈಅತ್ ಮಾಡಿದ ನಂತರ ಅವರು ತಮ್ಮ ಎಲ್ಲ ಸಂಬಂಧಿಕರನ್ನು ಸ್ನೇಹಿತರನ್ನೂ ತಬ್ಲೀಗ್ ಮಾಡಲು ತೊಡಗಿದರು. ದಿವಂಗತರು ಉತ್ತಮ ಸ್ವಭಾವಗುಣಗಳನ್ನು ಹೊಂದಿದ್ದ, ವಿನಯವಂತ, ವಿಧೇಯ, ಅತಿಥಿಸತ್ಕಾರ ಮಾಡುವ, ಬಡವರ ಸಹಾಯ ಮಾಡುವ ಮತ್ತು ಉತ್ತಮವಾಗಿ ವರ್ತಿಸುವ ವ್ಯಕ್ತಿಯಾಗಿದ್ದರು. 2013ರಲ್ಲಿ ಸೂಡಾನಿನಲ್ಲಿ ಜಮಾಅತಿನ ಸ್ಥಾಪನೆ ಮಾಡಲು ಅವರು ಮುಖ್ಯವಾದ ಪಾತ್ರವನ್ನು ವಹಿಸಲು ಸೌಭಾಗ್ಯವನ್ನು ಪಡೆದರು. ಈ ಸಂಬಂಧವಾಗಿ ಅವರು ಬಹಳವಾಗಿ ಧನತ್ಯಾಗವನ್ನು ಸಹ ಮಾಡಿದರು. ದಿವಂಗತರು ಜಮಾಅತಿನ ಹಲವಾರು ಬಡ ಜನರ ಆರ್ಥಿಕ ಸಹಾಯವನ್ನು ಸಹ ಮಾಡುತ್ತಿದ್ದರು. ಸೂಡಾನಿನ ಒಂದು ಪ್ರದೇಶದಲ್ಲಿ ನೆಲೆಸಿದ್ದ ಬಹಳ ಬಡ ಗೋತ್ರದ ಒಬ್ಬ ಅಹ್ಮದಿ ಆ ಪ್ರದೇಶದ ವಿರೋಧಿಗಳಿಂದ ದೌರ್ಜನ್ಯಕ್ಕೆ ತುತ್ತಾದಾಗ ದಿವಂಗತರು ತೆರೆದ ಹೃದಯದಿಂದ ಅವರ ಆರ್ಥಿಕ ಸಹಾಯವನ್ನು ಮಾಡಿದರು. ಅವರ ಆವಶ್ಯಕತೆಗಳನ್ನು ಪೂರೈಸಿದರು. ಇತರ ಜನರ ಕುರಿತು ಸಹ ಕಾಳಜಿವಹಿಸುತ್ತಿದ್ದರು. ಪ್ರತಿ ಜುಮಾದಂದು ತನ್ನ ವಾಹನದಿಂದ ಹಲವು ಸ್ಥಳಗಳಿಂದ ಅಹ್ಮದಿಯರನ್ನು ನಮಾಝ್ ಸೆಂಟರ್‌ಗೆ ಕೊಂಡುಹೋಗುತ್ತಿದ್ದರು. ಜುಮಾ ನಮಾಝಿನ ನಂತರ ಅವರನ್ನು ಮರಳಿ ಮನೆಗೆ ತಲುಪಿಸುತ್ತಿದ್ದರು. ಅಹ್ಮದಿಯೇತರ ಬಾಂಧವರು ಸಹ ಅವರ ಉತ್ತಮ ಸ್ವಭಾವಗುಣವನ್ನು ಹೊಗಳುತ್ತಾರೆ. ಚಂದಾ ಪಾವತಿಯಲ್ಲಿ ಕಟ್ಟುನಿಟ್ಟಾಗಿದ್ದರು. ತೆರೆದ ಹೃದಯದಿಂದ ಖರ್ಚು ಮಾಡುತ್ತಿದ್ದರು. ಸೂಡಾನಿನ ಮೊದಲ ಮಜ್ಲಿಸ್ ಆಮಿಲದಲ್ಲೂ ಅವರಿಗೆ ಕೆಲಸ ಮಾಡುವ ಸೌಭಾಗ್ಯ ಸಿಕ್ಕಿತ್ತು. ಈ ಹೊಣೆಗಾರಿಕೆಯನ್ನು ಕೊನೆಯುಸಿರು ತನಕ ನಿರ್ವಹಿಸುತ್ತಿದ್ದರು. ದಿವಂಗತರು ಪತ್ನಿಯನ್ನಲ್ಲದೆ ಇಬ್ಬರು ಪುತ್ರರನ್ನು ಮತ್ತು ಇಬ್ಬರು ಪುತ್ರಿಯರನ್ನು ಅಗಲಿರುವರು. ಅಲ್ಲಾಹನು ಖಿಲಾಫತ್‌ನೊಂದಿಗೆ ಅವರ ಸಂಬಂಧವನ್ನು ಸಹ ಸುದೃಢಗೊಳಿಸಲಿ ಮತ್ತು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ನಾನು ಹೇಳಿದಂತೆ ಜುಮಾ ನಮಾಝಿನ ನಂತರ ನಾನು ಜನಾಝ ನಮಾಝ್ ನಿರ್ವಹಿಸುವೆನು.

***************************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಪರೋಪಕಾರಿಯಾಗಿದ್ದ ಕಾರಣ ಅವರು ಯೂಸೂಫ್(ಅ) ದ್ರೋಹ ಬಗೆದರು ಎಂಬ ಭ್ರಮೆಯಲ್ಲಿ ಇರಬಾರದೆಂಬ ಉದ್ದೇಶಕ್ಕೆ ಮಾತ್ರ. ಈ ಉನ್ನತಮಯ ಭಾವನೆಯ ಕಾರಣದಿಂದಾಗಿಯೇ ಅವರ ಈ ಕಾರ್ಯ ಉನ್ನತ ದರ್ಜೆಯ ಸತ್ಕರ್ಮವಾಗಿತ್ತು. ಆದರೆ ಇನ್ನೊಂದು ದೃಷ್ಟಿಕೋನವು ಇದೆ. ಅದರನ್ವಯ ತಕ್ಷಣದಿಂದ ಅಲ್ಲಿಂದ ಹೊರಡುತ್ತಿದ್ದರೂ ಒಂದು ಸತ್ಕರ್ಮವಾಗಿರುತ್ತಿತ್ತು. ಈ ದೃಷ್ಟಿಕೋನವನ್ನು ಹಝ್ರತ್ ರಸೂಲುಲ್ಲಾಹ್(ಸ) ಒಪ್ಪಿಕೊಂಡರು. ಈ ದೃಷ್ಟಿಕೋನವು ತನ್ನ ಕರ್ತವ್ಯವನ್ನು ನಿಭಾಯಿಸುವ ಭಾವನೆಯಾಗಿದೆ. ಓರ್ವ ಪ್ರವಾದಿ ಅಥವಾ ಗುರು ಅಲ್ಲಾಹನ ವತಿಯಿಂದ ಜನರಿಗೆ ಪ್ರಚಾರ ಮಾಡಲು ನಿಯುಕ್ತಗೊಂಡಿರುತ್ತಾರೆ. ಅವರು ತನ್ನ ಪ್ರತಿಯೊಂದನ್ನು ಆ ಉದ್ದೇಶಕ್ಕಾಗಿ ತ್ಯಾಗ ಮಾಡುವುದು ಅವರ ಕರ್ತವ್ಯವಾಗಿರುತ್ತದೆ. ಎಲ್ಲಿಯವರೆಗೆಂದರೆ ಅವರ ಗೌರವ ಹಾಗೂ ಉತ್ತಮ ಹೆಸರು ಬಲಿಯಾದರು ಸಹ ಅವರು ಲೆಕ್ಕಿಸುವುದಿಲ್ಲ. ಓರ್ವ ಪ್ರವಾದಿಯು ಜೈಲಿನಲ್ಲಿದ್ದ ಕಾರಣ ಅವರು ಪ್ರಚಾರ ಮಾಡಲಿಕ್ಕೆ ಸಾಧ್ಯವಾಗಲಿಲ್ಲ ಅಥವಾ ಅವರ ಪ್ರಚಾರ ಅಷ್ಟಕ್ಕೆ ಸೀಮಿತವಾಯಿತು. ಈ ದೃಷ್ಟಿಕೋನದಿಂದ ಅವರು ತನ್ನ ಸ್ವಾತಂತ್ರ್ಯವನ್ನು ನೊಡಿಕೊಂಡರೆ ಅದು ಬಹುದೊಡ್ಡ ತ್ಯಾಗವಾಗಬಹುದು. ಬದಲು ಅವರು ಸ್ಪಷ್ಟನೆ ನೀಡದೇ ಜೈಲಿನಿಂದ ಹೊರ ಬಂದರೆ ಮತ್ತು ತನ್ನ ಕಾರ್ಯವನ್ನು ತನ್ನ ಮಾನಕ್ಕಿಂತ ಮಿಗಿಲಾದುದು ಎಂದು ಪರಿಗಣಿಸಿದಂತಾಗುವುದು. ರಸೂಲುಲ್ಲಾಹ್(ಸ) ಹಝ್ರತ್ ಯೂಸೂಫ್(ಅ) ರವರ ಘಟನೆಯನ್ನು ವಿವರಿಸುತ್ತ ತನಗಾಗಿ ಅಂತಹ ವಿಧಾನವನ್ನು ಮೆಚ್ಚಿಕೊಂಡರು. ಅವರು ಹೇಳುತ್ತಾರೆ **"ಲೌ ಲಬಿಸ್ತು ಫಿಲ್ ಸಿಜ್ನಿ ಮಾ ಲಬಿಸ ಯೂಸೂಫ್ ಲಾ ಜಬುತ್ತದಾಯಿ"** ನಾನು ಯೂಸೂಫ್(ಅ) ರವರು ಇರುವಷ್ಟು ದೀರ್ಘಕಾಲ ಖೈದಿಯಾಗಿ ಇರುವಂತಾಗಿದ್ದರೆ ಕರೆಯುವವನ ಮಾತು ಒಪ್ಪಿಕೊಳ್ಳುತ್ತಿದ್ದೆ. (ಬುಖಾರಿ, ಮುಸ್ಲಿಮ್, ಅಬೂಹುರೈರಾ ರಿಂದ ವರದಿ) ಮಸ್ನದ್ ಅಹ್ಮದ್ ಹಂಬಲ್‌ನಲ್ಲಿ ಅಬುಹುರೈರಾರಿಂದಲೇ ವರದಿಯಾಗಿದೆ. **"ಲ ಅಸ್ರತುಲ್ ಇಜಾಬತ ವಮಬ್‌ತಗೈತುಲ್ ಉಝ್‌ರ"** ನಾನು ತಕ್ಷಣ ಮಾತು ಸ್ವೀಕರಿಸುತ್ತಿದ್ದೆ ಮತ್ತು ಮೊದಲು ನನ್ನ ವಾದ ಕೇಳಿ ಎಂದು ಹೇಳುತ್ತಿರಲಿಲ್ಲ. ಪ್ರತಿಯೊಬ್ಬ ವಿವೇಕನಾದವನು ತಿಳಿಯಬಹುದು. ಎರಡೂ ಸ್ಥಾನಗಳಲ್ಲಿ ಹೆಚ್ಚು ಉನ್ನತಮಯ ಸ್ಥಾನವು ರಸೂಲುಲ್ಲಾಹ್(ಸ) ತನಗಾಗಿ ನೆಚ್ಚಿಕೊಂಡಿದ್ದಾರೆ. ಏಕೆಂದರೆ ಮಾನರಕ್ಷಣೆಯು ಒಂದು ಅತ್ಯುನ್ನತ ಕಾರ್ಯವೂ ಹೌದು. ಆದರೆ ಅದು ಪ್ರಚಾರ ಕಾರ್ಯದಲ್ಲಿ ಅಡ್ಡಿಯಾಗುವುದನ್ನು ಒಪ್ಪತಕ್ಕದ್ದಲ್ಲ ಅಥವಾ ಯಾವುದೇ ನಾಡು, ಧರ್ಮ ಸಂಹಿತೆ ಅಥವಾ ಧರ್ಮವನ್ನು ಎತ್ತಿಹಿಡಿಯುವ ಸಲುವಾಗಿ ತನ್ನ ಮಾನ ತ್ಯಾಗ ಮಾಡಬಹುದಾಗಿದೆ ಮತ್ತು ತಮ್ಮ ಮೇಲೆ ಬಂದ ಆರೋಪಗಳನ್ನು ಕಡೆಗಣಿಸಬಹುದಾಗಿದೆ. ಇಂತಹ ವ್ಯಕ್ತಿಯು ತನ್ನ ಮಾನರಕ್ಷಣೆ ನಿಶ್ಚಯವಾಗಿಯೂ ಒಂದು ಉತ್ತಮ ಸತ್ಕಾರ್ಯ ಉದ್ದೇಶಕ್ಕಾಗಿ ಮಾಡಿರುತ್ತಾನೆ ಅದು ಉನ್ನತಮಯ ದರ್ಜೆಯಾಗಿದೆ.

**(ತಫ್ಸೀರ್ ಕಬೀರ್, ಸಂಪುಟ–3, ಪುಟ–324)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ನಮಗಾಗಿ ಹಾದಿಯನ್ನು ಸುಗಮಗೊಳಿಸು ಮತ್ತು ಈ ಎದುರಾಗಿ ಬರುತ್ತಿರುವ ಗಾಳಿಯನ್ನು ದೂರ ಮಾಡು. ಇನ್ನೂ ಅಂತಿಮ ಪದ ಬಾಯಲ್ಲೇ ಇತ್ತು. ಗಾಳಿಯ ದಿಕ್ಕು ಬದಲಾಯಿತು. ಮುಂದಿನ ಬದಲು ಬೆನ್ನ ಹಿಂದೆ ಬೀಸತೊಡಗಿ ಪ್ರಯಾಣ ಸುಲಭವಾಯಿತು. ಗಾಳಿಯಲ್ಲಿ ತೇಲಿ ಹೋಗುತ್ತಿದ್ದೆವು ಎಂಬಂತೆ ಭಾಸವಾಗುತಿತ್ತು. ಸ್ವಲ್ಪವೇ ಸಮಯ ನಂತರ ಕಾಲುವೆ ತಲುಪಿದೆವು. ಈ ಸ್ಥಳದಲ್ಲಿ ಒಂದಿಷ್ಟು ತಂತುರು ಮಳೆ ಪ್ರಾರಂಭವಾಯಿತು. ಕಾಲುವೆ ಬಳಿ (ನೀರಿನ ಹತ್ತಿರ) ಒಂದು ತಂಗುದಾಣವಿತ್ತು. ಅದರ ಆಶ್ರಯ ಪಡೆದೆವು. ಆ ದಿನಗಳಲ್ಲಿ ಗುರುದಾಸಪುರ ಜಿಲ್ಲೆಯಲ್ಲಿ ರಸ್ತೆಗಳಲ್ಲಿ ಕಳ್ಳರ ಹಾವಳಿ ಜಾಸ್ತಿ ಆಗಿತ್ತು. ಬೆಂಕಿಕಡ್ಡಿ ಉರಿಸಿ ನೋಡಿದರೆ ತಂಗುದಾಣ ಖಾಲಿಯಿತ್ತು. ಅದರೊಳಗೆ ಎರಡು ಸಗಣಿ ಉಂಡೆ ಮತ್ತು ಒಂದು ದಪ್ಪದಾದ ಇಟ್ಟಿಗೆ ಬಿದ್ದಿತ್ತು. ಪ್ರತಿಯೊಬ್ಬರು ಒಂದೊಂದನ್ನು ತನ್ನ ತಲೆಕೆಳಗೆ ಇಟ್ಟುಕೊಂಡು ನೆಲದ ಮೇಲೆ ಮಲಗಿದರು. ಕೆಲ ಸಮಯ ನಂತರ ಕಣ್ಣು ತೆರೆಯಿತು. ನಕ್ಷತ್ರಗು ಉದಯಿಸಿದ್ದವು. ಆಕಾಶ ಸ್ವಚ್ಛವಾಗಿತ್ತು. ಮೋಡವಾಗಲಿ, ಬಿರುಗಾಳಿಯಾಗಲಿ ಮಾಯವಾಗಿದ್ದವು. ಮತ್ತೆ ಅಲ್ಲಿಂದ ಹೊರಟೆವು. ಸೆಹರಿ (ಮುಂಜಾವಿನ ಊಟ) ಹಝ್ರತ್ ಮಸೀಹ್ ಮೌಊದ್(ಅ) ರವರ ಜೊತೆ ಮಾಡಿದೆವು. ಮುಂಜಾನೆ ಹಝ್ರತ್ ಅಖದಸ್‌ರವರ ಜೊತೆ ಕಸೂಫ್ ನಮಾಝ್ (ಸೂರ್ಯಗ್ರಹಣ ನಿಮಿತ್ತ ಮಾಡುವ ನಮಾಝ್) ನಿರ್ವಹಿಸಿದೆವು. ಅದನ್ನು ಮೌಲ್ವಿ ಮುಹಮ್ಮದ್ ಅಹ್ಸನ್ ಸಾಹಿಬ್ ಅಮ್ರೋಹಿ ಮಸ್ಜಿದ್ ಮುಬಾರಕ್‌ನ ಮಾಳಿಗೆಯ ಮೇಲೆ ನಿರ್ವಹಿಸಿಕೊಟ್ಟರು. ಸುಮಾರು ಮೂರು ಗಂಟೆಯವರೆಗೆ ಈ ನಮಾಝ್ ಜಾರಿಯಲ್ಲಿತ್ತು. (ನಮಾಝ್ ಕುತುಬ ಸೇರಿ) ಹಲವು ಮಿತ್ರರು ಗಾಜಿನ ಮೇಲೆ ಮಸಿ ಬಳಿದಿದ್ದರು. ಆ ಮೂಲಕ ಅವರು ಗ್ರಹಣ ನೋಡಲು ತೊಡಗಿದ್ದರು. ಇನ್ನು ಲಘು ರೀತಿಯ ಮಸಿ ಗಾಜಿನ ಮೇಲೆ ಉಳಿದಿತ್ತು. ಹಝ್ರತ್ ಮಸೀಹ್ ಮೌಊದ್(ಅ) ರಿಗೆ ಒಬ್ಬರು ಹೇಳಿದರು. ಸೂರ್ಯಕ್ಕೆ ಗ್ರಹಣ ಹಿಡಿದಿದೆ. ಅವರು ಆ ಗಾಜಿನ ಮೂಲಕ ನೋಡಿದರೆ ಅತ್ಯಂತ ಲಘು ಪ್ರಮಾಣದಲ್ಲಿ ಮಸಿ ಕಾಣುತಿತ್ತು. ಅಂದರೆ ಇದೀಗಷ್ಟೇ ಲಘು ಪ್ರಮಾಣದಲ್ಲಿ ಗ್ರಹಣ ಪ್ರಾರಂಭವಾಗಿತ್ತು. ಹುಝೂರ್ ಹೇಳಿದರು. ಈ ಗ್ರಹಣ ನಾವಂತೂ ನೋಡಿದೆವು. ಆದರೆ ಇದು ಎಷ್ಟೊಂದು ಮಂದವಾಗಿದೆ ಎಂದರೆ ಸಾರ್ವಜನಿಕರಿಗೆ ಕಾಣುವುದು ಕಷ್ಟವಾಗಬಹುದು. ಹಾಗಾದರೆ ಇಂತಹದೊಂದು ಮಹೋನ್ನತವಾದ ಭವಿಷ್ಯವಾಣಿಯ ದೃಷ್ಟಾಂತವು ಸಂಶಯಾಸ್ಪದವಾಗುವುದು. ಹುಝೂರ್(ಅ) ಹೀಗೆ ಪದೇ ಪದೇ ಉಚ್ಚರಿಸಿದರು. ಹೀಗೆ ಹೇಳಿದ ಸ್ವಲ್ಪವೇ ಸಮಯದಲ್ಲಿ ಸೂರ್ಯನ ಮೇಲಿನ ಮಸಿ, ಗ್ರಹಣ ಹೆಚ್ಚಾಗತೊಡಗಿತು. ಎಷ್ಟರಮಟ್ಟಿಗೆ ಎಂದರೆ ಸೂರ್ಯನ ಅಧಿಕಾಧಿಕ ಭಾಗವು ಕತ್ತಲೆಯಿಂದ ಆವರಿಸಿತು. ಆಗ ಹುಝೂರ್ ಹೇಳಿದರು. ಇಂದು ನಾವು ಸ್ವಪ್ನದಲ್ಲಿ ಈರುಳ್ಳಿ ನೋಡಿದೆವು. ಅದರ ಅರ್ಥ ದುಃಖ ಎಂದು. ಅಂದ ಹಾಗೆ ಪ್ರಾರಂಭದಲ್ಲಿ ಸ್ವಲ್ಪ ಮಟ್ಟಿಗೆ ಕಪ್ಪಾಗಿತ್ತು. ಅದರಿಂದ ಸ್ವಲ್ಪ ದುಃಖ ಉಂಟಾಯಿತು. ಆದರೆ ಮತ್ತೆ ಅಲ್ಲಾಹನು ಸಂತೋಷವನ್ನು ಉಂಟು ಮಾಡಿದನು. (ಖುತ್‌ಬ ಜುಮುಅ 20 ಮಾರ್ಚ್ 2015)

ಅಲ್ಲಾಹನು ತನ್ನ ಮಸೀಹ್ ಮಹದಿಯ ಪರವಾಗಿ ಸಾಕ್ಷಿಯ ಸಹಕಾರ ನೀಡುವ ದೃಷ್ಟಾಂತವನ್ನು ಪ್ರಕಟಪಡಿಸಿದನೋ ಅಲ್ಲೇ ಅವರ ಸತ್ಯಸಾಕ್ಷ್ಯವು ಘೋಷಿಸಿದನು. ಆ ಮೂಲಕ ಜಮಾಅತ್ ಬಾಂಧವರಲ್ಲಿ ಒಂದು ಹೊಸ ಉತ್ಸಾಹ ಹೊಸ ವಿಶ್ವಾಸ, ಸಂತೋಷದ ಒಂದು ಹೊಸ ಅಲೆ ದಯಪಾಲಿಸಿದನು. ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ತನ್ನ ಒಡೆಯನ ಈ ಅನುಗ್ರಹ ಉಪಕಾರಕ್ಕೆ ಕೃತಜ್ಞರಾಗಿ ಅರಬಿ ಭಾಷೆಯಲ್ಲಿ ಹಲವು ಕವನಗಳನ್ನು ಬರೆದರು. ಒಂದು ಕವನದ ಪ್ರಾರಂಭಿಕ ಕೆಲ ಸಾಲುಗಳು ಈ ಕೆಳಗೆ ನಮೂದಿಸಲಾಗಿದೆ. ಅವರು ಹೇಳುತ್ತಾರೆ.

**ಬುಶ್ರ ಲಕುಮ್ ಯಾ ಮಾಶರಲ್ ಇಖ್ವಾನಿ**
**ತೂಬಾ ಲಕುಮ್ ಯಾ ಮಜ್‌ಮಅಲ್ ಗುಲ್ಲಾನಿ**
ನಿಮಗೆ ಓ ಜಮಾಅತ್ ಸಹೋದರರೇ ಸುವಾರ್ತೆ ಇದೆ.
ನಿಮಗೆ ಓ ಜಮಾಅತ್ ಮಿತ್ರರೇ ಶುಭವಾಗಲಿ.

**ಝಹರತ್ ಬುರೂಖು ಇನಾಯತಿಲ್ ಹನ್ನಾನಿ**
**ವಬದಅಸ್ಸಿರಾತು ಲಿಮನ್ ಲಹುಲ್ ಐನಾನಿ**
ಕಣ್ಣಿದ್ದವರ ಪಾಲಿಗೆ ಮಾರ್ಗ ತೆರೆಯಿತು.
ಆ ದೇಶಗಳಲ್ಲಿ ಸೂರ್ಯಕ್ಕೂ ಚಂದ್ರಕ್ಕೂ

**ಅನ್ನೈಯಿರಾನಿ ಬಿಹಾಝಿಹಿಲ್‌ಬುಲ್‌ದಾನಿ**
**ಖುಸಿಫಾ ಬಿಇಝ್‌ನಿಅಲ್ಲಾಹಿ ಫೀ ರಮಝಾನಿ**
ಅಲ್ಲಾಹನ ಆಜ್ಞೆಯಿಂದ ರಂಜಾನಿನಲ್ಲಿ ಗ್ರಹಣ ಉಂಟಾಯಿತು.
ರಸೂಲುಲ್ಲಾಹ್(ಸ) ರವರ ಒಂದು ಸುವಾರ್ತೆಯು

**ವಬಿಶಾರತುನ್ ಮಿನ್ ಸೈಯಿದಿನದ ಖೈರಿಲ್ವರಾ**
**ಝಹರತ್ ಮುತಹ್ಹರತನ್ ಮಿನಲ್ ಅದ್ರಾನಿ**
ಯಾವ ಸಂಶಯವಿಲ್ಲದೆ ನಿಶ್ಚಯವಾಗಿ ಪ್ರಕಟವಾಯಿತು.
ಇಂದು ನನ್ನ ಸತ್ಯವು ಪ್ರಕಟವಾದ ದಿನವಾಗಿದೆ.

**ಅಲ್‌ಯೌಮ ಯೌಮುನ್ ಫೀಹಿ ಹಸ್‌ಹಸ ಸಿದ್‌ಖುನ**
**ಖದ್ ಮಾತ ಕುಲ್ಲು ಮುಕಝ್ಝಿಬಿನ್ ಫತ್ತಾನಿ**
ಎಲ್ಲ ಮಿಥ್ಯರು ಅತಿಕರ್ಮಿಗಳು ಸತ್ತು ಹೋದರು.
ಇಂದು ಎಲ್ಲ ಸಜ್ಜನರು ರೋಧಿಸುತ್ತಿದ್ದಾರೆ.

**ಅಲ್‌ಯೌಮ ಯಬ್‌ಕಿ ಕುಲ್ಲು ಅಹ್‌ಲಿ ಬಸೀರತಿನ್**
**ಮುತಝುಕ್ಕಿರನ್ ಮುತಝುಕ್ಕಿರನ್ ಲಿಮರಾಹಿಮಿರ್ರಹ್ಮಾನಿ**
ರೋಧಿಸಲು ಕಾರಣ ಅವನ ಅನುಗ್ರಹಣಗಳನ್ನು ಸ್ಮರಿಸುವುದಾಗಿದೆ.

ಸೂರ್ಯ ಚಂದ್ರ ಗ್ರಹಣದ ಈ ದೃಷ್ಟಾಂತ ಪ್ರಕಟವಾದ ಮೇಲೆ, ಇಲ್ಲಿಯವರೆಗೆ ಆ ದೃಷ್ಟಾಂತವನ್ನು ಬೇಡುತ್ತಿದ್ದ ಮೌಲ್ವಿಗಳೇ ಹದೀಸಿನ ಮೇಲೆ ನಾನಾ ತರಹದ ಆಕ್ಷೇಪವನ್ನು ಹೇಳುತ್ತಿದ್ದಾರೆ. ಅದರ ಉತ್ತರವಾಗಿ ಸಯ್ಯದನಾ ಹಜ್‌ರತ್ ಮಸೀಹ್ ಮೌಊದ್(ಅ) ಅವರಿಗೆ ಹಲವು ರೀತಿಯ ಬಹುಮಾನದ ಪಂಥ್ವಾನ ನೀಡಿದರು. ಅದರಲ್ಲಿ ಮೇಲಿನ ಶೀರ್ಷಿಕೆಯಿಂದ ನೀಡಿದ ವಿವರವು ಒಂದಾಗಿದೆ. ಇವೆಲ್ಲಾ ಪಂಥಹ್ವಾನಗಳ ವಿವರ ನಾವು ಇನ್‌ಶಾಅಲ್ಲಾಹ್ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು. **(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಗೊತ್ತಿರಬಹುದು. ಜಮಾಅತ್ ಎರಡು ಗುಂಪುಗಳಾದವು ಒಂದು ಅತಿ ಸಣ್ಣದಾದ ಒಂದು ಗುಂಪು. ಇನ್ನೊಂದು ಬಹುದೊಡ್ಡದಾದ ಗುಂಪಿದೆ. ಅದು ಖಿಲಾಫತ್ ಮೇಲೆ ವಿಶ್ವಾಸ ಹೊಂದಿರುತ್ತದೆ. ಈ ಭಿನ್ನಮತ ಉಂಟಾದಾ ಆ ಸಮಯದಲ್ಲಿಯೂ ದ್ವಿತೀಯ ಖಲೀಫ, ಹಝ್ರತ್ ಮುಸ್ಲಿಹ್ ಮೌಊದ್(ರ) ವಿರೋಧಿಗಳಿಗೆ ಹೇಳಿದರು. ಯಾರನ್ನು ಸಹ ನೀವು ಖಲೀಫರನ್ನಾಗಿ ಆಯ್ಕೆ ಮಾಡಿದರೆ ನಾನು ಅದನ್ನು ಸ್ವೀಕರಿಸುತ್ತೇನೆ. ನನಗೆ ಖಲೀಫರಾಗುವ ಯಾವುದೆ ಹಂಬಲವಿಲ್ಲ.

ಇನ್ನೋರ್ವ ಸದಸ್ಯರು ಪ್ರಶ್ನೆ ಕೇಳಿದರು. ನೀವು ಇತರ ಧರ್ಮದವರೊಂದಿಗೆ ಅಂದರೆ ಸರ್ವಧರ್ಮಗಳ ಬಗ್ಗೆ ಮಾತನಾಡುವುದಕ್ಕೆ ಬೆಂಬಲ ನೀಡುವವರಾಗಿದ್ದೀರಿ? ಉದಾಹರಣೆಗೆ ನೀವು ಎಂದಾದರೂ ಪೋಪರೊಡನೆ ಭೇಟಿಯಾಗಿದ್ದೀರ? ಭೇಟಿಯಾಗಿದ್ದರೆ ಏನು ಮಾತುಕತೆ ನಡೆಯಿತು?

ಆಗ ಹುಝೂರ್ ಹೇಳಿದರು. ನಾನು ಎಂದೂ ಪೋಪರೊಡನೆ ಭೇಟಿಯಾಗಲು ಪ್ರಯತ್ನ ಮಾಡಲಿಲ್ಲ. ಆದರೆ ನಮ್ಮ ದ್ವಿತೀಯ ಖಲೀಫರು 1924 ರಲ್ಲಿ ಒಮ್ಮೆ ಪ್ರಯತ್ನ ಮಾಡಿದ್ದರು. ಆದರೆ ಅವರು ಭೇಟಿ ಮಾಡಲಿಲ್ಲ. ಅವರು ನೆಪ ಹೇಳಿದರು. ನನ್ನ ಅರಮನೆ ನಿರ್ಮಾಣ ಕಾರ್ಯ ನಡೆಯುತ್ತಿದೆ. ಹೀಗಾಗಿ ನಾನು ಸ್ವಾಗತಿಸಲು ಆಗುವುದಿಲ್ಲ ಇತ್ಯಾದಿ ಆ ಕಾಲದಲ್ಲಿ ಇಟಾಲಿಯನ್ ಪತ್ರಿಕೆ ಸಹ ಈ ಸುದ್ದಿ ಪ್ರಕಟಿಸಿತ್ತು. ಪೋಪರು ಭೇಟಿ ಮಾಡುವುದಕ್ಕೆ ತನ್ನ ಅರಮನೆ ನಿರ್ಮಾಣದ ನೆಪ ಒಡ್ಡಿ ನಿರಾಕರಿಸಿದರು. ಅದಾಗ್ಯೂ ಪೋಪ್ ಅಹ್ಮದಿಯಾ ಜಮಾಅತಿನ ಖಲಿಫರನ್ನು ಭೇಟಿಯಾಗಲು ಬಯಸುತ್ತಿಲ್ಲ. ಅವರ ಅರಮನೆಯ ಪೂರ್ಣಗೊಳಿಸಲು ಆಗಲಿಲ್ಲ.

ತಂಡದ ಸದಸ್ಯರೊಬ್ಬರು ಪ್ರಶ್ನೆ ಮಾಡಿದರು. ನೀವು ಇತರ ಧರ್ಮಗಳ ಮುಖಂಡರೊಡನೆ ಮಾತನಾಡಲು ಬಯಸುವಿರೋ?

ಆಗ ಹುಝೂರ್ ಹೇಳಿದರು. ನಮ್ಮ ಕಡೆಯಿಂದ ಯಾವುದೆ ತಡೆ ಇಲ್ಲ. ನಾವು ಮುಕ್ತವಾಗಿದ್ದೇವೆ. ಭೇಟಿ ಮಾಡಬಯಸುತ್ತೇವೆ. ನಮ್ಮ ಹೃದಯಗಳು ತೆರೆದಿವೆ. ಹಿಂದಿನ ವರ್ಷ God in 21 century ಹೆಸರಿನಿಂದ ನಾವು Guide Hall ಲಂಡನ್ನಿನಲ್ಲಿ Inter faith seminar ಹಮ್ಮಿಕೊಂಡಿದ್ದೆವು. ಇಸ್ರೇಲ್‌ನಿಂದ ಪ್ರತಿನಿಧಿಗಳು ಭಾಗವಹಿಸಿದ್ದರು. ಚರ್ಚಿನ ಪ್ರತಿನಿಧಿಗಳು ಉಪಸ್ಥಿತರಿದ್ದರು. ದರೋಝಿಗಳು ಇದ್ದರು. ಹಿಂದೂ ಪ್ರತಿನಿಧಿಗಳೂ ಇದ್ದರು, ಮತ್ತು ಇತರ ಧರ್ಮ ಮುಖಂಡರು ಇದ್ದರು. ದಲಾಯಿ ಲಾಮಾ ಅವರ ಪ್ರತಿನಿಧಿಯೂ ಭಾಗವಹಿಸಿದ್ದರು. ನಾನು ಸಹ ಅಲ್ಲಿ ಮಾತನಾಡಿದ್ದೆ. ಒಂದೇ ವೇದಿಕೆಯಲ್ಲಿ ಎಲ್ಲರಿಗೂ ಅವಕಾಶ ನೀಡಲಾಗಿತ್ತು. ನಾವು ಸ್ವತಃ ಎಲ್ಲ ಏರ್ಪಾಡುಗಳನ್ನು ಮಾಡಿದ್ದೆವು. ನಾವು ಮೊದಲಿನಿಂದಲೂ ಇಂತಹ ಪ್ರಯತ್ನಗಳು ಮಾಡುತ್ತಿದ್ದೆವು. ಎಲ್ಲರೂ ಒಗ್ಗೂಡಬೇಕು ಮತ್ತು ಶಾಂತಿ ಸ್ಥಾಪನೆಯಾಗಬೇಕು ಎಂದು.

ತಂಡದ ಸದಸ್ಯರೊಬ್ಬರು ಪ್ರಶ್ನೆ ಕೇಳಿದರು. ಯುವ ಪೀಳಿಗೆಗೋಸ್ಕರ ನಿಮ್ಮ ಅತ್ಯಂತ ಮುಖ್ಯ ಗುರಿ ಯಾವುದು? ನೀವು ಅವರಿಗಾಗಿ ಏನು ಬಯಸುತ್ತೀರಿ?

ಆಗ ಹುಝೂರ್ ಹೇಳಿದರು. ನಾವು ಯುವ ಪೀಳಿಗೆಗೋಸ್ಕರ ಮತ್ತು ಪ್ರತಿ ಅಹ್ಮದಿಯರೊಂದಿಗೆ ಬಯಸುವುದೇನೆಂದರೆ, ಅವರು ತನ್ನ ಅಲ್ಲಾಹನನ್ನು ಗುರುತಿಸಿಕೊಳ್ಳಬೇಕು. ಆ ಮಾತುಗಳು ಬಹುಮುಖ್ಯವಾಗಿವೆ. ಆ ಕುರಿತು ಹಝ್‌ರತ್ ಮಸೀಹ್ ಮೌಊದ್(ಅ) ಹೇಳಿದರು. ನಾನು ಈ ಎರಡು ಮಾತುಗಳನ್ನು ಅಪೇಕ್ಷಿಸುತ್ತೇನೆ. ಅದರಲ್ಲಿ ಒಂದನೆಯದಾಗಿ ಜನರನ್ನು ತನ್ನ ಸೃಷ್ಟಿಕರ್ತನ ಸಮೀಪ ತರುವುದು, ಎರಡನೆಯದಾಗಿ ಮಾನವ ಹಕ್ಕುಗಳನ್ನು ಪಾಲಿಸುವ ಭಾವನೆ ಜಾಗೃತಗೊಳಿಸಬೇಕಾಗಿದೆ. ಈ ಎರಡು ಮಾತುಗಳು ಪ್ರತಿಯೊಬ್ಬರಿಗೆ ಮುಖ್ಯವಾಗಿದೆ.

ಹುಝೂರ್ ಹೇಳಿದರು. ನಿಮ್ಮ ಪ್ರಶ್ನೆ ಇತರ ಮುಸ್ಲಿಮರ ರೀತಿಯಲ್ಲಿ ಉಗ್ರವಾದಿಗಳಾಗಬೇಕೆಂದು ಆಗಿದ್ದಲ್ಲಿ ನಮಗೆ ಅಂತಹ ಭಯವೇನಲ್ಲ. ನಾವು ಇಂತಹ ಮೂಢ ವಿಚಾರಗಳಿಂದ ಮುಕ್ತವಾಗಿರುವೆವು.

ಅತಿಥಿಯೋರ್ವರು ಪ್ರಶ್ನೆ ಮಾಡಿದರು. ಅಹ್ಮದಿಯರಿಗೆ ಮುಸ್ಲಿಮ್ ರಾಷ್ಟ್ರಗಳಲ್ಲಿ, ಅಲ್ಲಿ ಕ್ರೈಸ್ತರು ಅಲ್ಪ ಸಂಖ್ಯೆಯಲ್ಲಿರುವವರು. ಅವರಿಗೆ ಅಲ್ಲಿ ಸುರಕ್ಷತೆ ಇಲ್ಲ, ನೀವು ಸಹಕಾರ ನೀಡುವಿರೇ?

ಹುಝೂರ್ ಹೇಳಿದರು. ಇಸ್ಲಾಮ್ ಅದೇ ಹೇಳುವುದು. ಅವರು ಸುರಕ್ಷಿತರಾಗಿರಬೇಕು. ಎಲ್ಲಿ ನಮಗೆ ಮಾಹಿತಿ ಇರುತ್ತದೆಯೋ ಅಲ್ಲಿ ನಾವು ಸಹಕರಿಸುತ್ತೇವೆ. ರಬ್ವಾದಲ್ಲಿ 98% ಅಹ್ಮದಿ ಸಂಖ್ಯೆಯಿದೆ ನಾವು ಅಲ್ಲಿ ಚರ್ಚ್ ನಿರ್ಮಿಸಲು ತಮ್ಮ ಭೂಮಿ ನೀಡಿರುತ್ತೇವೆ. ಇನ್ನು ಮುಸ್ಲಿಮ್ ರಾಷ್ಟ್ರಗಳಲ್ಲಿ ನಮಗೆ ಇಸ್ಲಾಮಿ ರಾಷ್ಟ್ರ ಹೇಗಿರುತ್ತದೆ ಎಂಬ ಮಾದರಿ ತೋರಿಸುವಂತಹ ಶಕ್ತಿ ಹೊಂದಿಲ್ಲ. ತಮ್ಮ ಮಿತಿಯೊಳಗೆ ಅವರಿಗೆ ಸಹಕರಿಸುತ್ತೇವೆ.

ತಂಡದಲ್ಲಿದ್ದ ಓರ್ವ ಅತಿಥಿ ಪ್ರಶ್ನೆ ಮಾಡಿದನು. ನಾನು ಅಹ್ಮದಿಯಾ ಜಮಾಅತಿನ ಕುರಿತು ಅಧ್ಯಯನ ಮಾಡುತ್ತಿದ್ದೇನೆ ಮತ್ತು Pathway to peace ಗ್ರಂಥ ಓದುತ್ತಿದ್ದೇನೆ. ಅದರ ಕೊನೆಯಲ್ಲಿ ತಾವು ವಿವಿಧ ಮುಖಂಡರ ಹೆಸರಿನಲ್ಲಿ ಪತ್ರಗಳನ್ನು ಬರೆದಿರುತ್ತೀರಿ. ಅದರ ಉತ್ತರವೇನಾದರೂ ನಿಮಗೆ ದೊರೆತಿದೆಯೇ?

ಅದರ ಉತ್ತರವಾಗಿ ಹುಝೂರ್ ಹೇಳಿದರು.

U.S.A. ಯಿಂದ ಅಂತೂ ಬಂದಿಲ್ಲ. ಅಧ್ಯಕ್ಷರ ನಿಕಟವರ್ತಿ ಸಲಹೆಗಾರರು ಹೇಳಿದ್ದನು. ಉತ್ತರಕ್ಕಾಗಿ ಮಾತನಾಡುವೆ. ಆದರೆ ಇಲ್ಲಿಯವರೆಗೆ ಉತ್ತರ ಬಂದಿಲ್ಲ. ಅವರ ಒಂದು ಸಂಸ್ಥೆ ಇದೆ. ಬಹುಶಃ ವೆಂಟಗಾನ್ ಅವರು ಉತ್ತರ ಕೊಡುವುದಕ್ಕೆ ನಿಷೇದಿಸಿದ್ದಾರೆ. ಕೊಟ್ಟರೆ ಸಂಕಟ ಅನುಭವಿಸುವಿರಿ. ಕೆನಡಾದ ಪ್ರಧಾನ ಮಂತ್ರಿಗಳು ಉತ್ತರ ನೀಡಿದ್ದರು. ಆದರೆ ಅಷ್ಟೊಂದು ಸಮಂಜಸವಾದ ಉತ್ತರವಾಗಿರಲಿಲ್ಲ. ಕೇವಲ U.K. ಯ ಪ್ರಧಾನಮಂತ್ರಿ ಡೇವಿಡ್ ಕೆಮರೂನ್ ಒಳ್ಳೆಯ ಉತ್ತರ ಕಳುಹಿಸಿದ್ದರು. G8 ಅದು ಈಗ G7 ಆಗಿದೆ. ತಮ್ಮ ಅಣುಸ್ಥಾವರಗಳನ್ನು ಕಡಿತಗೊಳಿಸಲು ವಿಚಾರ ಮಾಡುತ್ತಿದ್ದಾರೆ. 2020 ತನಕ ಬಹಳಷ್ಟು ಮಟ್ಟಿಗೆ ಕಡಿಮೆಯಾಗುವುದು ಈ ರೀತಿಯ ಬಹಳಷ್ಟು ಮಾತುಗಳು ಬರೆದಿದ್ದರು. ಈ ಉತ್ತರಗಳು ಬಂದಿರುತ್ತವೆ. ಅದಕ್ಕೆ ಹೇಳುತ್ತಿದ್ದೇವೆ. ಯಾವುದೇ confident ಮಾತಾಗುತ್ತಿದ್ದರೆ ಹೇಳುತ್ತಿರಲಿಲ್ಲ.

ಕ್ರೋವೆಶಿಯನ್ ತಂಡದ ಸದಸ್ಯರೊಬ್ಬರು Joseph ಸಾಹಿಬಾ ಹೇಳಿದರು. ಜಲ್ಸ ಸಾಲಾನ ಜರ್ಮನಿಗೆ ಬರುವ ಮುಂಚೆ ನಾನು ಅಹ್ಮದಿಯಾ ಜಮಾಅತಿನ ಪ್ರಸಕ್ತ ನೇತಾರರ ಗ್ರಂಥ (World crisis and the pathway to peace) ಅಧ್ಯಯನ ಮಾಡಿದ್ದೆ. ಅದೇ ರೀತಿ 2014 ಮತ್ತು 2016 ರಲ್ಲಿ ಶಾಂತಿಯ ಕುರಿತು ಆದ Symposium ನಲ್ಲಿ ಖಲೀಫತುಲ್ ಮಸೀಹ್ ಅವರ ಎರಡೂ ಸಂಬೋಧನೆಗಳನ್ನು ಅಧ್ಯಯನ ಮಾಡಿ ನಾನು ತಿಳಿದುಕೊಂಡಿದ್ದೆ. ಅಹ್ಮದಿಯಾ ಜಮಾಅತಿ ಪ್ರಸಕ್ತ ನೇತಾರರು ಕೆಲ ಸಮಸ್ಯೆಗಳಲ್ಲಿ ಬಹಳ ಕಠಿಣ ನಿಲುವು ಹೊಂದಿರುತ್ತಾರೆ ಎಂದು ಮತ್ತು ಬಹಳ ಕಠಿಣ ಸ್ವಭಾವದವರು ಆಗಿದ್ದಾರೆಂದು. ಆದರೆ ನನ್ನ ಭೇಟಿ ಜಮಾಅತಿನ ನೇತಾರರೊಡನೆ ಆದ ನಂತರ ತಮಗೆ ಒಂದು ವಿಭಿನ್ನ ರೀತಿಯ ವ್ಯಕ್ತಿತ್ವ ಕಂಡಿದ್ದೇನೆ. ತಾವು ತುಂಬ ಸಹನಶೀಲರು, ಮೃದು ಹೃದಯಿ, ನಗುಮುಖಿ ಸ್ವಭಾವದವರಾಗಿ ಕಂಡರು. ತಮ್ಮ ಸಂಬಂಧಿಕರೊಡನೆ ಸೌಮ್ಯ ರೀತಿಯಲ್ಲಿ ಮಾತನಾಡುವವರಾಗಿದ್ದೀರಿ. ತಮ್ಮ ನಿಲುವನ್ನು ಅತ್ಯಂತ ಸರಳ ಸುಲಭ ರೀತಿಯ ಪದಗಳಲ್ಲಿ ಪ್ರಸ್ತುತಪಡಿಸುವವರಾಗಿದ್ದೀರಿ ಇಷ್ಟೆಲ್ಲ ಕಾರ್ಯಮಗ್ನತೆಯಿದ್ದರೂ ಯಾವ ಪ್ರೀತಿ ವಿಶ್ವಾಸದಿಂದ ವರ್ತಿಸುತ್ತೀರೆಂದರೆ ಅದು ತುಂಬ ಪ್ರಭಾವ ಬೀರುವ ಕೌಶಲ್ಯವಾಗಿದೆ. ಖಲೀಫತುಲ್ ಮಸೀಹ್ ಅವರಿಗೆ ಅಗೋಚರ ಶಕ್ತಿಯೊಂದು ಸಹಾಯ ನೀಡುತ್ತಿದೆ ಎಂದು ಸ್ಪಷ್ಟವಾಗಿ ಗೋಚರಿಸುತ್ತದೆ.

(ಮುಂದುವರಿಯುವುದು)

**ಪ್ರೀತಿ ಎಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

**Love for All, Hatred for None**

### ಸದ್‌ಖತುಲ್ ಫಿತ್ರ್

ಅಲ್‌ಹಮ್ದುಲಿಲ್ಲಾಹ್ ಪವಿತ್ರ ರಂಝಾನ್ ಏಪ್ರಿಲ್ ಮಾಹೆಯ ಎರಡನೇ ವಾರದಿಂದ ಪ್ರಾರಂಭವಾಗುವುದು. ಇಸ್ಲಾಂ ಧರ್ಮದಲ್ಲಿ ಒಂದು ಸಾರಿ ಧಾನ್ಯ (ಅಂದರೆ 2 ಕಿಲೋ 750 ಗ್ರಾಂ) ಫಿತ್ರಾನ ನೀಡುವ ನಿಗದಿತ ಪ್ರಮಾಣವಾಗಿದೆ. ಜಮಾಅತ್ ಬಾಂಧವರು ನಿಗದಿತ ಪ್ರಮಾಣ ಪ್ರಕಾರ ಪವಿತ್ರ ರಂಝಾನಿನ ಮೊದಲ ಅಥವಾ ಎರಡನೆಯ ಅಶ್ರಾ (ದಶಕ) ದ ಒಳಗಾಗಿ ನೀಡಲು ಪ್ರಯತ್ನ ಮಾಡಬೇಕು.

ಅಂದ ಹಾಗೆ ಭಾರತದ ವಿವಿಧ ರಾಜ್ಯಗಳಲ್ಲಿ ಧಾನ್ಯ (ಗೋಧಿ, ಅಕ್ಕಿ) ಯ ಬೆಲೆಗಳು ವಿವಿಧ ರೀತಿಯಲ್ಲಿರುತ್ತವೆ. ಆದುದರಿಂದ ತನ್ನ ಸ್ಥಳಿಯ ಬೆಲೆಯನುಸಾರ ಪ್ರಮಾಣ ನಿಗದಿಪಡಿಸಿ (ಎರಡು ಕಿಲೋ 750 ಗ್ರಾಂ) ಅದರಂತೆ ಫಿತ್ರಾನ ಮೊತ್ತ ನೀಡಬೇಕಾಗಿದೆ. ಪಂಜಾಬ್ ರಾಜ್ಯಕ್ಕೆ ಈ ವರ್ಷ ಸದಖತುಲ್–ಫಿತ್ರ್ ಪ್ರಮಾಣವು ಈಸಲ ಒಬ್ಬರಿಗೆ ಐವತ್ತೈದು (ರೂ. 55/–) ಗಳನ್ನು ನಿಗದಿಪಡಿಸಲಾಗಿದೆ.

ಸ್ಥಳೀಯ ಜಮಾಅತಿನಲ್ಲಿ ಬಡವರು ಹಾಗೂ ಅದಕ್ಕೆ ಅರ್ಹರು ಇದ್ದಲ್ಲಿ ಸದಖತುಲ್ ಫಿತ್ರ್‌ನ ಒಟ್ಟು ಮೊತ್ತದಿಂದ 90% ವರೆಗಿನ ಮೊತ್ತ ಮಜ್ಲಿಸ್ ಆಮಿಲದ (ಕಾರ್ಯಕಾರಿಣಿ ಸಭೆ)ಯ ಸಲಹೆ ಹಾಗೂ ನಿರ್ಣಯದ ನಂತರ ವಿತರಿಸಬಹುದಾಗಿದೆ. ಉಳಿದ ಮೊತ್ತ ಕೇಂದ್ರಕ್ಕೆ ರವಾನಿಸಬೇಕು. ಯಾವ ಜಮಾಅತಿನಲ್ಲಿ ಬಡವರು, ಅರ್ಹರು ಇಲ್ಲವೋ, ಆ ಜಮಾಅತಿನ ವಸೂಲಾದ ಎಲ್ಲಾ ಮೊತ್ತ (ಹಣ) ಸದರ್ ಅಂಜುಮನ್ ಅಹ್ಮದಿಯಾ, ಜಮಾಅತಿನ ಖಾತೆಗೆ ಬರತಕ್ಕದ್ದು.

ನೆನಪಿರಲಿ, ಫಿತ್ರಾನದ ಹಣವು ಮಸೀದಿ ಮುಂತಾದ ಇತರ ಅಗತ್ಯಗಳಿಗಾಗಿ ಖರ್ಚು ಮಾಡುವ ಅನುಮತಿ ಇರುವುದಿಲ್ಲ.

### ಈದ್ ಫಂಡ್

ಈ ಚಂದ ಹಝ್‌ರತ್ ಮಸೀಹ್ ಮೌಊದ್(ಅ) ರವರ ಕಾಲಘಟ್ಟದಿಂದ ಜಾರಿಯಲ್ಲಿದೆ. ಈ ಫಂಡಿನ ಉದ್ದೇಶವೇನಿತ್ತೆಂದರೆ, ಸಂತೋಷದ ಸಂದರ್ಭಗಳಲ್ಲಿ ಮನುಷ್ಯನು ಯಾವ ರೀತಿ ತನ್ನ ವೈಯಕ್ತಿಕ ಸಂತೋಷಗಳಿಗಾಗಿ ಹೊಸ ಉಡುಪು, ಸ್ವಾದಭರಿತ ಊಟ ಮತ್ತು ಅತಿಥಿ ಸತ್ಕಾರಗಳಿಗಾಗಿ ವ್ಯಯ ಮಾಡುವರು ಮತ್ತು ಇತರರಿಗೆ ಪಾರಿತೋಷಕ ಉಡುಗೊರೆಗಳನ್ನು ನೀಡುವರೋ, ಅದೇ ರೀತಿ ಆ ಸಂತೋಷದಲ್ಲಿ ಧರ್ಮದ ಅಗತ್ಯಗಳ ಬಗ್ಗೆಯೂ ಗಮನ ವಹಿಸಬೇಕಾಗಿದೆ. ಅಹ್ಮದಿ ಬಾಂಧವರಂತೂ ಬೈಅತ್ತಿನಲ್ಲಿ "ಧರ್ಮವನ್ನು ಲೌಕಿಕ ಕಾರ್ಯಗಳ ಮೇಲೆ ಪ್ರಧಾನ್ಯತೆ ನೀಡುವೆನು" ಎಂಬ ವಚನ ನೀಡಿರುತ್ತಾರೆ. ಆದುದರಿಂದ ಪ್ರತಿಯೋರ್ವ ಅಹ್ಮದಿಯು ಆಶಯ ಹೊಂದುವುದೇನೆಂದರೆ ಅವರು ಸಂತೋಷದ ಈ ಹಬ್ಬ ದಿನಗಳಲ್ಲಿ ಪ್ರತಿಯೊಂದು ಅಹ್ಮದಿಯರಿಂದ ಆಶಿಸುವುದೇನಂದರೆ ಅವರು ಸಂತೋಷದ ಈ ಹಬ್ಬದ ದಿನಗಳಲ್ಲಿ ಧರ್ಮದ ಅಗತ್ಯಗಳಿಗೂ ಸ್ಪಂದಿಸುವರು. ಈ ಉದ್ದೇಶಕ್ಕಾಗಿ ಹಝುರತ್ ಮಸೀಹ್ ಮೌಊದ್(ಅ) ಅವರ ಕಾಲದಲ್ಲಿ ಆದಾಯ ಉಳ್ಳ ಅಹ್ಮದಿ ಬಾಂಧವರು ಒಬ್ಬನಿಗೆ ಒಂದು ರೂಪಾಯಿಯಂತೆ ಫಂಡ್ ನೀಡುತ್ತಿದ್ದರು. ಅದು ಆ ಸಮಯಕ್ಕೆ ದೊಡ್ಡ ಮೊತ್ತವೇ ಆಗಿತ್ತು. ಇದೀಗ ಈದುಲ್ ಫಿತ್ರ್ ಸಮೀಪಿಸುತ್ತಿದೆ. ಆದುದರಿಂದ ತಮ್ಮ ಅನುಕೂಲದ ಪ್ರಕಾರ ಹಬ್ಬದ ದಿನದಂದು ಆದಷ್ಟು ಹೆಚ್ಚು ಮೊತ್ತ ಈ ಫಂಡ್‌ನಲ್ಲಿ ನೀಡಬೇಕಾಗಿದೆ. ಈದ್ ಫಂಡ್ ಈದ್ ನಮಾಝುಗಿಂತ ಮುಂಚೆ ಯಾವುದೇ ಸಮಯದಲ್ಲಿ ಪಾವತಿಸಬಹುದಾಗಿದೆ. ಇದು ಕೇಂದ್ರಕ್ಕೆ ಸಂಬಂಧಿಸಿದ ಚಂದಾ ಆಗಿದೆ. ಪಡೆದ ಎಲ್ಲಾ ಹಣವು ಸದರ್ ಅಂಜುಮನ್ ಅಹ್ಮದಿಯಾ ಖಜಾನೆಗೆ ಪಾವತಿಸುವುದು ಅನಿವಾರ್ಯವಾಗಿದೆ. ಅದರಿಂದ ಸ್ಥಳೀಯರಿಗೆ ಖರ್ಚು ಮಾಡಲು ಅನುಮತಿ ಇರುವುದಿಲ್ಲ. ಜಝಾಕು ಮುಲ್ಲಾಅತ್ತಾಲ.

**(ಖಾಯಂ ಮಕಾಮ್ ನಾಝಿರ್ ಬೈತುಲ್ ಮಾಲ್ ಆಮದ್ ಖಾದಿಯಾನ್)**

### ಹಝ್‌ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್

**ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್‌ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ನಂ. 1; ರೂಹಾನೀ ಖಝಾಇನ್ ಸಂಪುಟ 17, ಪುಟ 345)***

### ವಿಷೇಶ ಸೂಚನೆ

**"ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.**

**ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)**

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:

**NATIONAL TOLL FREE**

**1800–103–2131**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.02, Thursday, 06 May 2021, Issue No. 18

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 17ರ ವರದಿಯ ಉಳಿದ ಭಾಗ)**

### ಕ್ರೋವೆಶಿಯನ್ ತಂಡಗಳೊಂದಿಗೆ ಭೇಟಿ:

ಅನಂತರ 8:35 ಗಂಟೆಗೆ ಕ್ರೋವೆಶಿಯಾ ದೇಶದಿಂದ ಬಂದ ತಂಡದೊಂದಿಗೆ ಹುಝೂರರ ಭೇಟಿ ಆರಂಭವಾಯಿತು. ಕ್ರೋವೇಶಿಯಾದಿಂದ 8 ಜನರ ಒಂದು ತಂಡ ಆಗಮಿಸಿತ್ತು.

ಭೇಟಿಯ ಪ್ರಾರಂಬದಲ್ಲಿ ತಂಡದ ಎಲ್ಲ ಸದಸ್ಯರು ಸರತಿಯಂತೆ ತಮ್ಮ ಪರಿಚಯ ಮಾಡಿಕೊಟ್ಟರು. ಮತ್ತು ಹುಝೂರರೊಂದಿಗೆ ಭೇಟಿಯಾಗುತ್ತಿರುವುದಕ್ಕೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ತಂಡದ ಓರ್ವ ಮಹಿಳಾ ಸದಸ್ಯೆ ಪ್ರಶ್ನೆ ಕೇಳುತ್ತಾ. ತಾವು ಖಲೀಫ ಆದಾಗಿನಿಂದ ನಿಮ್ಮ ಜೀವನದಲ್ಲಿ ಯಾವ ರೀತಿ ಪರಿವರ್ತನೆ ಉಂಟಾಗಿದೆ ಮತ್ತು ಅದು ನಿಮ್ಮ ಕುಟುಂಬಗಳ ಮೇಲೆ ಎಷ್ಟು ಪ್ರಭಾವ ಬೀರಿದೆ?

ಆಗ ಹುಝೂರ್ ಹೇಳಿದರು. ತುಂಬ ದೊಡ್ಡ ವ್ಯತ್ಯಾಸ ಆಗಿದೆ. ನನ್ನ ದಿನನಿತ್ಯದ ಕೆಲಸಕಾರ್ಯಗಳಲ್ಲಿ ಬಹಳ ಪರಿವರ್ತನೆಗೊಂಡಿದೆ. ಮುಂಜಾನೆಯಿಂದ ಸಂಜೆಯವರೆಗೆ ಮಾಡುವ ಎಲ್ಲ ಕೆಲಸಗಳು ಜಮಾಅತಿನ ಕೆಲಸಗಳಾಗಿವೆ. ಇದು ಬಹಳ ದೊಡ್ಡ ಬದಲಾವಣೆಯಾಗಿದೆ. ನನಗೆ ಅಭ್ಯಾಸ ಇಲ್ಲದಂತಹ ಕಾರ್ಯಗಳು ಸಹ ಮಾಡಬೇಕಾಗುತ್ತವೆ. ನನ್ನ ನೆನಪಿನ ಪ್ರಕಾರ ಹೇಳುವುದಾದರೆ ತೀರ ಅಪರೂಪವಾಗಿ ನಾನು ವೇದಿಕೆ ಸೇರಿ ಭಾಷಣ ಮಾಡುತ್ತಿದ್ದೆ. ಆದರೆ ಈಗ ಎಷ್ಟೊಂದು ಬಾರಿ ವೇದಿಕೆಗೆ ಬರಬೇಕಾಗುತ್ತದೆ ಎಂದರೆ ಅದನ್ನು ಊಹಿಸಲು ನನ್ನಿಂದ ಸಾಧ್ಯವಿಲ್ಲ.

ಅನಂತರ ಓರ್ವ ಮಹಿಳೆ ಹೇಳಿದಳು. ನಾನು ಕ್ರೈಸ್ತೆ ಪವಿತ್ರ ಖುರ್‌ಆನ್ ನನ್ನ ದೃಷ್ಟಿಯಲ್ಲಿ ಒಂದು ಸತ್ಯವಾಗಿದೆ. ಅದು ಬೈಬಲ್‌ಗೆ ಹೊಂದಿಸಿ ನೋಡುವುದಾದರೆ ಖುರ್‌ಆನ್ ನನ್ನ ಮನಸ್ಸಿಗೆ ತೀರ ಹತ್ತಿರವಾಗಿದೆ. ನಾನು ಎರಡರ ಅಧ್ಯಯನವನ್ನು ಮಾಡುತ್ತಿದ್ದೇನೆ. ದಿನ ತಾಳೆ ಹಾಕಿಯೂ ನೋಡುತ್ತಿದ್ದೇನೆ. ಇದು ತುಂಬ ಸ್ವಾರಸ್ಯಕರ ಕೆಲಸವಾಗಿದೆ. ಹುಝೂರ್ ಕೇಳಿದಾಗ ಆ ಮಹಿಳೆ ಹೇಳಿದಳು. ನಾನು ಲಾ (Law) ಓದುತ್ತಿದ್ದೇನೆ. ಉಳಿದ ಸಮಯದಲ್ಲಿ ಅದರ ಅಧ್ಯಯನ ಮಾಡುತ್ತೇನೆ. ಅಧ್ಯಯನದ ಈ ಕಾರ್ಯ ತುಂಬ ಸ್ವಾರಸ್ಯಕರವಾಗಿದೆ. ಹುಝೂರ್ ಕೇಳಿದಕ್ಕೆ ಆ ಮಹಿಳೆ ಹೇಳಿದಳು. ಉದಾಹರಣೆಗೆ ನಾನು ನನ್ನ ಮಿತ್ರರಿಗೆ ಹೇಳುತ್ತಿದ್ದೇನೆ. ಬೈಬಲ್ ಹಂದಿ ಮಾಂಸ ತಿನ್ನಲು ನಿಷೇಧಿಸಿದೆ. ಆದರೆ ಇದು ಯಾರಿಗೂ ಗೊತ್ತಿಲ್ಲ.

ಅವರು ಕೇಳಿದಳು. ನನಗೆ ಒಂದು ಮಾತು. ಅಹ್ಮದಿಯರ ಬಗ್ಗೆ ತಿಳಿದುಬರುತ್ತಿಲ್ಲ. ತಾವು ಮಸೀಹ್ ಮೌಊದ್(ಅ) ರವರ ಮತ್ತು ಅವರ ಖಲೀಫರುಗಳ ಚಿತ್ರಗಳನ್ನು ಗೋಡೆಗಳ ಮೇಲೆ ತೂಗು ಹಾಕಿದ್ದಾರೆ. ನನಗೆ ಗೊತ್ತಿದೆ. ಮಸೀಹ್(ಅ) ಮತ್ತು ತಾವು ಆಧ್ಯಾತ್ಮಿಕ ವ್ಯಕ್ತಿಗಳಾಗಿದ್ದೀರಿ. ಆದರೆ ನನಗೆ ಈ ಚಿತ್ರಗಳು ಯಾವುದೇ ಆಧ್ಯಾತ್ಮಿಕ ನೆಲೆ ಹೊಂದಿರುವುದಿಲ್ಲ. ಉದಾಹರಣೆಗೆ ಈಸಾ(ಅ) ರನ್ನು ನಂಬಲು ಅಥವಾ ಮುಹಮ್ಮದ್(ಸ) ರನ್ನು ನಂಬಲು ಅವರ ಚಿತ್ರಗಳ ಅವಶ್ಯಕತೆ ಇಲ್ಲ. ಅಂದರೆ ಯಾರ ಬಳಿಯೂ ಅಲ್ಲಾಹನ ಚಿತ್ರವಿಲ್ಲ. ಆದರೂ ನಾವು ಅವನ ಮೇಲೆ ವಿಶ್ವಾಸ ಇಡುತ್ತೇವೆ. ಹೀಗಿರುವಾಗ ಚಿತ್ರಗಳು ಏಕೆ ಬೇಕು?

ಆಗ ಹುಝೂರ್ ಹೇಳಿದರು. ಈ ಭಾವಚಿತ್ರಗಳನ್ನು ನಮ್ಮ ಕುಟುಂಬ ಸದಸ್ಯರ ಬಾವ ಚಿತ್ರಗಳಂತೆ ಪ್ರೀತಿಗೋಸ್ಕರ ತೂಗು ಹಾಕುವುದಾದರೆ ಇದು ಬೇರೆ ಮಾತಾಗಿದೆ, ಆದರೆ ಈ ಚಿತ್ರಗಳು ಯಾವುದೋ ಆಧ್ಯಾತ್ಮಿಕ ಶಕ್ತಿ ಹೊಂದಿವೆ ಎಂಬ ದೃಷ್ಟಿಯಿಂದ ಹಾಕುವುದಾದರೆ ಅದು ತಪ್ಪಾಗಿದೆ. ಹಾಗೇನು ಇರುವುದಿಲ್ಲ. ಅದುದರಿಂದ ನಮ್ಮ ಜಮಾಅತಿನಲ್ಲಿ ಒಂದು ಫಿಖ ಸಮಿತಿ ರಚಿಸಲಾಗಿದೆ. ಅದು ತುಂಬ ಹಿಂದಿನ ಸಮಯದಿಂದಲೇ ಈ ಫತ್ವಾ ನೀಡಿದೆ. ನೀವು ಈ ಚಿತ್ರಗಳನ್ನು ಏನೋ ಪಡೆಯಲಿಕ್ಕೋಸ್ಕರ ಹಾಕುವುದಾದರೆ, ಅಥವಾ ಅದರ ಮುಂದೆ ಬಾಗುವುದಾದರೆ ಚಿತ್ರಗಳನ್ನು ಹಾಕುವ ಅನುಮತಿ ಇಲ್ಲ. ಹಝ್ರತ್ ಮಸೀಹ್ ಮೌಊದ್(ಅ) ರವರ ಚಿತ್ರ ಸಹ ಹಾಕುವಂತಿಲ್ಲ.

ಹುಝೂರ್ ಹೇಳಿದರು. ಒಂದು ಸ್ವಾರಸ್ಯಕರ ಮಾತು. ಅದು ನನ್ನ ಭಾವನೆಯಾಗಿದೆ. ಅದೇನೆಂದರೆ ಮಸೀಹ್ ಇಬ್ಬರಿದ್ದಾರೆ. ಒಬ್ಬರು ಹಝ್ರತ್ ಮೂಸಾ(ಅ) ರವರ ಮಸೀಹ್. ಇನ್ನೊಬ್ಬರು ಹಝ್ರತ್ ರಸೂಲುಲ್ಲಾಹ್(ಸ) ರವರ ಮಸೀಹ್. ನನ್ನ ಭಾವನೆಯಲ್ಲ" ಮಸೀಹ್ ಮೂಸಾ(ಅ) ಮತ್ತು ಮಸೀಹ್ ಮುಹಮ್ಮದ್(ಸ) ಇಬ್ಬರು ನಬಿಯಾಗಿರುವರು. ನಾನು ಈಸಾ(ಅ) ರನ್ನು ನಬಿ (ಪ್ರವಾದಿ) ಎಂದು ನಂಬುತ್ತೇನೆ. ಇಬ್ಬರ ಚಿತ್ರಗಳು ಪ್ರಸ್ತುತವಿದೆ. ಹಝ್ರತ್ ಈಸಾ(ಅ) ರವರ ಚಿತ್ರ ಮಸೀಹರ ಕಫನ್ ಮೇಲೆ (ಶವವಸ್ತ್ರದ ಮೇಲೆ) ಇದೆ. ನನ್ನ ನಂಬುಗೆಯ ಪ್ರಕಾರ ಅದು ಈಸಾ(ಅ) ರವರ ಅಸಲು ಚಿತ್ರವಾಗಿದೆ. ಇನ್ನೊಂದೆಡೆ ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ರವರ ಚಿತ್ರವು ಇಂದಿನವರೆಗೆ ಸುರಕ್ಷಿತವಾಗಿದೆ.

ಹುಝೂರ್ ಹೇಳಿದರು. ಕೆಲ ಸಂದರ್ಭಗಳು ಹೀಗೂ ಬಂದಿವೆ. ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಚಿತ್ರಗಳನ್ನು ಎಲ್ಲೆಡೆ ತೂಗು ಹಾಕಲು ಇಷ್ಟಪಡಲಿಲ್ಲ. ಒಂದು ಸಂದರ್ಭ ಹೀಗೆ ಬಂತು. ಅವರ ನಿಷ್ಠಾವಂತ ಸಹಾಬಿ ಓರ್ವರು ಮಸೀಹ್ ಮೌಊದ್(ಅ) ರವರ ಚಿತ್ರವನ್ನು ಒಂದು ಅಂಚೆಕಾರ್ಡಿನ ಮೇಲೆ ಅಚ್ಚುಹಾಕಿದರು. ಆಗ ನೀವು ತಿಳಿದಿರಬಹುದು. ಆ ಕಾಲದಲ್ಲಿ Post card ಕಳುಹಿಸುವ ರಿವಾಜು ಇತ್ತು. ಹಝ್ರತ್ ಮಸೀಹ್ ಮೌಊದ್(ಅ) ರವರ ಗಮನಕ್ಕೆ ಈ ವಿಷಯ ಬಂದಾಗ ಆ ಎಲ್ಲ Post card ಗಳನ್ನು ಸುಟ್ಟು ಹಾಕಲು ನಿರ್ದೇಶನ ನೀಡಿದರು. ಹೀಗೆ ಚಿತ್ರದಿಂದ ಏನೂ ಆಗಲು ಸಾಧ್ಯವಿಲ್ಲ. ಕೆಲ ಜನರು ಹೀಗೂ ಇರುತ್ತಾರೆ. ಒಬ್ಬರ ಮುಖವನ್ನು ನೋಡಿ ಅದರ ಸತ್ಯತೆಯನ್ನು ತಿಳಿದುಕೊಳ್ಳುತ್ತಾರೆ. ಹೀಗೆ ಆಗಿದೆ ಸಹ. ಯೂರೋಪ್, ಆಫ್ರಿಕಾದಲ್ಲಿ ಬಹಳಷ್ಟು ಜನರು ಬೈಅತ್ ಮಾಡಿದ್ದಾರೆ. ಅವರು ನನಗೆ ಬರೆದರು. ನಾನು ಒಬ್ಬರಿಗೆ ಕನಸಿನಲ್ಲಿ ಕಂಡಿದ್ದೇನೆ ಮತ್ತು ನಾನು ಅವರು ಯಾರು ಎಂದು ನನಗೆ ಗೊತ್ತಿಲ್ಲ. ಅವರು ಸ್ವಪ್ನದಲ್ಲಿ ಹೇಳುತ್ತಾರೆ. ಅವರ ಜೊತೆಯಲ್ಲಿ ಸೇರಿರಿ ಅಥವಾ ಸ್ವಪ್ನ ನೋಡುವವರಿಗೆ ಮಾರ್ಗದರ್ಶನ ನೀಡಿರುತ್ತಾರೆ. ನಂತರ ಅಹ್ಮದಿ ಮಿತ್ರರೊಬ್ಬರು ಈ ಚಿತ್ರ ತೋರಿಸಿದಾಗ ತಕ್ಷಣ ಹೇಳಿದರು. ಇದು ನಾವು ಕನಸಿನಲ್ಲಿ ನೋಡಿದವರೇ ಆಗಿರುತ್ತಾರೆ.

ಹುಝೂರ್ ಹೇಳಿದರು. ಕೆಲ ಜನರು ಮುಖ ನೋಡಿಯೂ ಮಾತು ತಿಳಿದುಕೊಳ್ಳುತ್ತಾರೆ. ಕೆಲವರಲ್ಲಿ ಈ ಸಾಮರ್ಥ್ಯವಿರುತ್ತದೆ. ಚಿತ್ರ ನೋಡಿ ಬಹಳಷ್ಟು ತಿಳಿದುಕೊಳ್ಳುತ್ತಾರೆ. ಇದಲ್ಲದೆ ಬೇರೇನೂ ಕಾರಣವಲ್ಲ. ಯಾವ ಪ್ರಯೋಜನವೂ ಇಲ್ಲ. ಯಾರಾದರೂ ಇದರಿಂದ ಆಧ್ಯಾತ್ಮಿಕ ಶಕ್ತಿ ಹೆಚ್ಚುತ್ತದೆ ಎಂದು ತಿಳಿದುಕೊಂಡರೆ ಅದು ಸಾಧ್ಯವಿಲ್ಲ. ನಾನು ಸ್ವಯಂ ಅದನ್ನು ಇಷ್ಟಪಡುವುದಿಲ್ಲ. 2006 ರಲ್ಲಿ ನಾನು ಆಸ್ಟ್ರೇಲಿಯಾ ಪ್ರವಾಸಕ್ಕೆ ಹೋದಾಗ ಅಲ್ಲಿಯ ಜಮಾಅತ್ ಅಂಚೆ ವಿಭಾಗವನ್ನು ಸಂಪರ್ಕಿಸಿ ಅಂಚೆ ಚೀಟಿಯ ಮೇಲೆ ನನ್ನ ಚಿತ್ರ ಹಾಕಿಸಿದರು. ಈ ವಿಷಯ ನನ್ನ ಗಮನಕ್ಕೆ ಬಂದಾಗ ನಾನು ಅವೆಲ್ಲ ರದ್ದುಗೊಳಿಸಲು ಹೇಳಿದ್ದೇನೆ.

ಸದಸ್ಯರೊಬ್ಬರು ಪ್ರಶ್ನೆ ಮಾಡಿದರು. ಮೊದಲ ಖಲೀಫರನ್ನು ಬಿಟ್ಟು ಬಾಕಿ ಎಲ್ಲರೂ ಒಂದೇ ಕುಟುಂಬದವರಾಗಿದ್ದಾರೆ. ಅದು ಹೇಗೆ ಸಂಭವವಾಯಿತು?

ಆಗ ಹುಝೂರ್ ಹೇಳಿದರು. ಇದು ಅಲ್ಲಾಹನ ನಿರ್ಣಯವಾಗಿರುತ್ತದೆ. ಇದು ಅವನ ಇಷ್ಟವಾಗಿದೆ. ಅಲ್ಲಾಹನು ಬಯಸಿದ ರೀತಿಯಲ್ಲಿಯೇ ಆಗುತ್ತದೆ. ಹಝ್ರತ್ ಇಬ್ರಾಹಿಮ್(ಅ) ಅವರ ವಂಶದಿಂದಲೇ ಹೆಚ್ಚು ಪ್ರವಾದಿಗಳು ಬರಲು ಹೇಗೆ ಸಾಧ್ಯವಾಯಿತು. ಇದು ಅಲ್ಲಾಹನ ಇಷ್ಟವಾಗಿದೆ. ಅವನು ಯಾರನ್ನು ಆಯ್ದುಕೊಳ್ಳುತ್ತಾನೆ ಎಂಬುದು. ಒಂದು ಚುನಾವಣಾ ಸಮಿತಿಯ ಮೂಲಕ ಖಲೀಫರ ಆಯ್ಕೆ ಆಗುತ್ತದೆ. ಅಲ್ಲಾಹನೇ ಆ ಸದಸ್ಯರ ಮನದಲ್ಲಿ ಹಾಕುತ್ತಾನೆ. ಮತ್ತು ಅವನೇ ಆಯ್ಕೆ ಮಾಡಿಕೊಳ್ಳುತ್ತಾನೆ. ಯಾರು ಆಯ್ಕೆಗೊಳ್ಳುವರು ಎಂಬುದು ಯಾರಿಗೂ ತಿಳಿದಿರುವುದಿಲ್ಲ.

ಆಗ ಆ ತಂಡದ ಸದಸ್ಯರೊಬ್ಬರು ಪ್ರಶ್ನೆ ಕೇಳಿದರು. ನೀವು ಖಲೀಫರಾಗಿ ಆಯ್ಕೆಯಾಗಬಹುದು ಎಂದು ಎಂದಾದರೂ ನಿಮ್ಮ ಮನಸ್ಸಿನಲ್ಲಿ ಬಂದಿತ್ತೆ?

ಆಗ ಹುಝೂರ್ ಹೇಳಿದರು. ನಾನು ಆಯ್ಕೆಗೊಂಡ ಮೇಲೆ ಚುನಾವಣಾ ಸಮಿತಿಯವರೊಡನೆ ಕೇಳಿದೆ. ಇದರಿಂದ ಕ್ಷಮೆ ಯಾಚಿಸಿ ದೂರ ಉಳಿಯುವ ಯಾವುದಾದರೂ ಮಾರ್ಗವಿದೆಯೇ?

ಹುಝೂರ್ ಹೇಳಿದರು ದ್ವಿತೀಯ ಖಲೀಫರ ಆಯ್ಕೆ ಸಮಯದಲ್ಲಿ ಆಯ್ಕೆಗಿಂತ ಮುಂಚಿತವಾಗಿ ಜಮಾಅತಿನಲ್ಲಿ ಭಿನ್ನಮತ ಉಂಟಾಗಿತ್ತು. ನಿಮಗೆ

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.